# ಮಾನಸ ಗಂಗೋತ್ರಿ

## ದಸರಾ ವಿಶೇಷಾಂಕ-೨

(ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ)

ಶುಕ್ರವಾರ, ೧೪, ಅಕ್ಟೋಬರ್ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮೈಸೂರು ವಿ ವಿ | gmail id-pgjmc2019@gmail.com


# ಮೈಸೂರು ಅರಮನೆ ಆವರಣದಲ್ಲೊಂದು ಪುಷ್ಪಕಾಶಿ!




ವಿವಿಧ ಹೂವುಗಳು ಮತ್ತು ಕಲಾಕೃತಿಗಳಿಂದ ಕಂಗೋಳಿಸುತ್ತಿರುವ ಮೈಸೂರು ಅರಮನೆ

ದಸರಾ ಎಂದ ತಕ್ಷಣ ನಮಗೆ ಮೊದಲು ನೆನಪಾಗುವುದು ವಿಶ್ವವಿಖ್ಯಾತ ಅಂಬಾ ವಿಲಾಸ ಅರಮನೆ. ಅರಮನೆ ಮುಂಭಾಗದ ಉದ್ಯಾನದಲ್ಲಿ ಸೃಷ್ಟಿಯಾಗಿರುವ ಪುಷ್ಪ ಲೋಕದಲ್ಲಿ ಹಲವು ಮಹಾಮಹನೀಯರಿಗೆ ಪ್ರತಿ ಕೃತಿಗಳ ಮೂಲಕ ಪುಷ್ಪ ನಮನ ಸಲ್ಲಿಸಿದ್ದಾರೆ.ಮೈಸೂರುಅರಮನೆ ಮಂಡಳಿ ವತಿಯಿಂದ ಏರ್ಪಡಿಸಿರುವ ಪಲಪುಷ್ಪ ಪ್ರದರ್ಶನ ಈ ಬಾರಿ ವಿಶೇಷ ಹಾಗೂ ಅತ್ಯಾಕಶನೀಯವಾಗಿದ್ದೆ. ಹೂಗಳಿಂದ ನಿರ್ಮಿಸಿರುವ ಸ್ವಾಗತ ಕಮಾನು ಮೂಲಕ ಉದ್ಯಾನಕ್ಕೆ ಹೆಜ್ಜೆ ಇಟ್ಟರೆ ಬಣ್ಣ ಬಣ್ಣದ ಪುಷ್ಪಲೋಕ ತೆರೆದುಕೊಳ್ಳುತ್ತದೆ. ಔಷಧಿಯ ಗಿಡಗಳು ಸೇರಿದಂತೆ ಎಲ್ಲಾ ರೀತಿಯ ಸಸ್ಯಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿದೆ. ಒಂದು ಸುತ್ತು ಹಾಕುವಷ್ಟರಲಿ ಕಣ್ಮನ ಉಲ್ಲಾಸಿತವಾಗುತ್ತದೆ ಇನ್ನು ಫಲಪುಷ್ಪ ಅಲಂಕಾರಗಳಲ್ಲಿ ಅತಿ ಹೆಚ್ಚು ಆಕರ್ಷಣೆ ಪಡೆದುಕೊಂಡಿರುವುದು ದೆಹಲಿಯ ಕೆಂಪುಕೋಟೆ, ದಸರಾ ಜಂಬೂಸವಾರಿ, ದಿವಂಗತ ಶ್ರೀಕಂಠ ದತ್ತ ನರಸಿಂಹರಾಜ ಒಡೆಯರ್ ಖಾಸಗಿ ದರ್ಬಾರ್ ಪುಷ್ಪ ರಾಶಿಯಲ್ಲಿ ಜಗಮಗಿಸುತ್ತಿದೆ. ನಾಲ್ವಡಿಕೃಷ್ಣರಾಜ ಒಡೆಯರ್, ಜಯಚಾಮರಾಜ ಒಡೆಯರ್, ಸರ್ದಾರ್ ವಲ್ಲಬಾಯ್ ಪಟೇಲ್, ಸ್ವಾತಂತ್ರ್ಯ ಹೋರಾಟಗಾರ ಗಾಂಧಿವಾದಿ ಪಿಂಗಳಿ ವೆಂಕಯ್ಯ, ಸುಭಾಷ್ ಚಂದ್ರ ಬೋಸ್, ಕಿತ್ತೂರಾಣಿ ಚೆನ್ನಮ್ಮ, ಕಾರ್ಗಿಲ್ ವಿಜಯ ದಿವಸ್, ಭಾರತೀಯ ವಾಯುಪಡೆ ಜೊತೆಯಲ್ಲಿ ಅಭಿನಂದನ್, ಭಾರತೀಯ ಭೂಸೇನೆ ಜೊತೆ ಜನರಲ್ ದಿವಂಗತ ಬಿಪಿನ್ ರಾವತ್, ಐಎಸ್ ವಿಕ್ರಾಂತ್ ನೌಕ ಪಡೆ ಪ್ರತಿ ಕೃತಿಗಳು ಜನರನ್ನು ಮನವನ್ನು ಸೆಳೆಯಿತು.ಜನರೆಲ್ಲರೂ ಈ ಫಲಪುಷ್ಪ ಪ್ರತಿ ಕೃತಿಗಳನ್ನು ನೋಡಲು ದಂಡುದಂಡಾಗಿ ಬರುತ್ತಿದ್ದಾರೆ. ಅದರಲ್ಲೂ ಅತಿ ಹೆಚ್ಚಾಗಿ ನಮ್ಮ ಭಾರತದ ಹೆಮ್ಮೆಯಾದ ಕೆಂಪುಕೋಟೆಯನ್ನು ಈ ಬಾರಿ ಫಲ ಪುಷ್ಪಗಳ ಮೂಲಕ ನಮನವನ್ನು ಸಲ್ಲಿಸಿರುವುದು ಅತ್ಯಾಕರ್ಷಣೀಯ. ಕೆಂಪುಕೋಟೆಯ ಬಳಿ ಜನಗಳ ದಂಡೆ ಇರುತ್ತದೆ.ಇದರ ಜೊತೆಯಲ್ಲಿ ಈ ಬಾರಿ ದಸರಾ ಉದ್ಘಾಟಿಸಿದ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರ ಪ್ರತಿಮೆಯನ್ನು ನವಣೆ, ಸಜ್ಜೆ ಇನ್ನಿತರ ಸಿರಿಧಾನ್ಯಗಳಿಂದ ನಿರ್ಮಿಸಿರುವುದು ವಿಶೇಷವಾಗಿದೆ. ನಮ್ಮ ಕರ್ನಾಟಕ ರತ್ನ ಎಲ್ಲರ ಹೆಮ್ಮೆಯ ದಿವಂಗತ ಪುನೀತ್ ರಾಜಕುಮಾರ್ ಅವರ ಭಾವಚಿತ್ರವನ್ನು ಇಟ್ಟು ಗೌರವ ಸಲ್ಲಿಸಲಾಗಿದೆ.ಕೆಂಪು ಹಳದಿ ಗುಲಾಬಿ ಹೂಗಳಿಂದ "ಐ ಲವ್ ಇಂಡಿಯಾ" ನಿರ್ಮಿಸಿ ಫೋಟೋ ತೆಗೆದುಕೊಳ್ಳಲು ಅನುವು ಮಾಡಿಕೊಡಲಾಗಿದೆ. ಕರ್ನಾಟಕ ಹಾಗೂ ಭಾರತದ ಭೂಪಟದ 'ಮುಂದೆಯೂ ಸೆಲ್ಫಿ ಕ್ಲಿಕ್ಕಿಸಿಕೊಳ್ಳಬಹುದು. ಸೆಲ್ಫಿ ಪ್ರಿಯರಿಗಂತೂ ಈ ತಾಣ ಬಹಳ ಪ್ರಿಯವಾದದ್ದು. ಪ್ರತಿಯೊಬ್ಬರೂ ಅರಮನೆ ಆವರಣದಲ್ಲಿ ಮೂಡಿರುವ ಫಲಪುಷ್ಪ ಪ್ರದರ್ಶನ ಬಹಳ ಚೆನ್ನಾಗಿದೆ ಹಾಗೂ ಆಕರ್ಷಣೀಯವಾಗಿದೆ ಎನ್ನುವರು ಹೆಚ್ಚು.ಮೈಸೂರು ದಸರಾ ಎಂದ ತಕ್ಷಣ ನಮಗೆ ಮೊದಲು ನೆನಪಾಗುವುದು ವಿಶ್ವವಿಖ್ಯಾತ ಅಂಬಾ ವಿಲಾಸ ಅರಮನೆ. ಅರಮನೆ ಮುಂಭಾಗದ ಉದ್ಯಾನದಲ್ಲಿ ಸೃಷ್ಟಿಯಾಗಿರುವ ಪುಷ್ಪ ಲೋಕದಲ್ಲಿ ಹಲವು ಮಹಾಮಹನೀಯರಿಗೆ ಪ್ರತಿ ಕೃತಿಗಳ ಮೂಲಕ ಪುಷ್ಪ ನಮನ ಸಲ್ಲಿಸಿದ್ದಾರೆ. ಪ್ರತಿಯೊಬ್ಬರೂ ಅರಮನೆ ಆವರಣದಲ್ಲಿ ಮೂಡಿರುವ ಫಲಪುಷ್ಪ ಪ್ರದರ್ಶನ ಬಹಳ ಚೆನ್ನಾಗಿದೆ ಹಾಗೂ ಆಕರ್ಷಣೀಯವಾಗಿದೆ ಎನ್ನುವರು ಹೆಚ್ಚು..

–ಭಾರತಿ. ಪಿ

# ದೀಪದ ಬೆಳಕಿನಲ್ಲಿ ಪ್ರಜ್ವಲಿಸಿದ ಸಾಂಸ್ಕೃತಿಕ ನಗರಿ



ನಗರದ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಛೇರಿಯ ಬಳಿ ಕಂಗೋಳಿಸುತ್ತಿರುವ ದೀಪಾಲಂಕಾರ

ದಸರಾದ ಪ್ರಮುಖ ಆಕರ್ಷಣೆಯಾದ ವಿದ್ಯುತ್ ದೀಪಾಲಂಕಾರ ಉದ್ಘಾಟನೆಯಾಗಿದೆ. ಇಂಧನ ಸಚಿವ ಸುನಿಲ್ ಕುಮಾರ್ ದಸರಾ ದೀಪಾಲಂಕಾರ ವೀಕ್ಷಣೆಗೆ ಚಾಲನೆ ನೀಡಿದರು.ಸಯ್ಯಾಜಿರಾವ್ ರಸ್ತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಿಮೋಟ್ ಅನ್ ಮಾಡುವ ಮೂಲಕ ದೀಪಾಲಂಕಾರಕ್ಕೆ ಚಾಲನೆ ನೀಡಲಾಯಿತು. ದೀಪಾಲಂಕಾರ ದಸರಾದ ಪ್ರಮುಖ ಆಕರ್ಷಣೆ ಆಗಿದೆ. ಕಾರ್ಯಕ್ರಮದಲ್ಲಿ ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ನಾಗೇಂದ್ರ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಬಿಜೆಪಿ ನಗರ ಜಿಲ್ಲಾಧ್ಯಕ್ಷರಾದ ಶ್ರೀವತ್ಸ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.ದಸರಾ ಲೈಟಿಂಗ್ ವೀಕ್ಷಣೆಗೆ ಜನಸಾಗರವೇ ಹರಿದುಬಂದಿದೆ. ಪ್ರಮುಖ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾಗಿದ್ದು, ಲೈಟಿಂಗ್ ನೋಡೋಕೆ ಜನರು ಮುಗಿಬೀಳುತ್ತಿದ್ದಾರೆ. ಬಣ್ಣ ಬಣ್ಣದ ಲೈಟಿಂಗ್ ಮುಂದೆ ಫೋಟೋ ತೆಗೆದುಕೊಳ್ಳುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಈ ಬಾರಿ ಸಂಚಾರ ದಟ್ಟಣೆ ತಪ್ಪಿಸಲು ಪೋಲಿಸರು ನೋ ವೆಹಿಕಲ್ ಝೋನ್' (ವಾಹನ ಸಂಚಾರ ನಿರ್ಬಂಧ ಪ್ರದೇಶ) ಮಾಡಿದ್ದಾರೆ. ಮೈಸೂರು ರಾತ್ರಿಯ ವೇಳೆ ದೀಪಗಳಿಂದ ಜಗಮಗಿಸುತ್ತಿದೆ.ವಿಶ್ವವಿಖ್ಯಾತ ಮೈಸೂರು ದಸರಾ ೨೦೨೨ರ ಅಂಗವಾಗಿ ಮೈಸೂರು ನಗರ ಸಂಚಾರ ಪೊಲೀಸ್ ನವರು ಜನರಿಗೆ ಶುಭ ಸುದ್ದಿಯೊಂದನ್ನು ನೀಡಿದ್ದಾರೆ. ಸಾರ್ವಜನಿಕರಿಗೆ ದೀಪಾಲಂಕಾರ ವೀಕ್ಷಣೆಗೆ ಅಡ್ಡಿಯಾಗದಂತೆ ಕೆಲ ವೃತ್ತಗಳಿಗೆ ಸೆ.೨೬ರಿಂದ ಅ. ೪ ರವರೆಗೆ ರವರೆಗೆ ವಾಹನ ನಿರ್ಬಂಧ ವಿಧಿಸಲಾಗಿದೆ. ಅರಮನೆಯ ಸುತ್ತಮುತ್ತಲಿನ ಸ್ಥಳಗಳಲ್ಲಿ ಸಾರ್ವಜನಿಕರಿಗೆ ದೀಪಾಲಂಕಾರವನ್ನು ವೀಕ್ಷಣೆ ಮಾಡಲು ಪ್ರಮುಖ ಸರ್ಕಲ್‌ಗಳಲ್ಲಿ ವಾಹನ ಸಂಚಾರವನ್ನು ನಿಷೇಧ ಮಾಡಲಾಗಿದೆ.ಸುತ್ತಮುತ್ತಲು ಸುಮಾರು ೧೨೪ ಕ.ಮೀ ಸುತ್ತ, ೯೬ ವೃತ್ತಗಳಲ್ಲಿ ವಿಶೇಷ ದೀಪಾಲಂಕಾರ ಕಂಗೊಳಿಸುತ್ತಿದೆ. ಇತ್ತೀಚೆಗೆ ನಿಧನರಾದ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಸೇರಿದಂತೆ ೨೮ ವಿವಿಧ ಬಗೆಯ ಪ್ರತಿಕೃತಿಗಳನ್ನು ದಸರಾ ದೀಪಾಲಂಕರದಲ್ಲಿ ಪ್ರಮುಖಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಪವರ್ಷದಂತೆ ರಾತ್ರಿ ೭ ಗಂಟೆಯಿಂದ ೧ವೀಕ್ಷಿಸಲು ಅವಕಾಶ ಇದೆ. ಪ್ರತಿದಿನ ರಾತ್ರಿ ೯ ಗಂಟೆಯಿಂದ ೧೧ ರವರೆಗೆ ವೀಕ್ಷಣೆಗೆ ಜನಸಾಗರವೇ ಹರಿದುಬಂದಿದೆ .

–ಅನುಶ್ರೀ ಕೆ.ಎನ್

# ಎಸ್.ಟಿ.ಸೋಮಶೇಖರ್ ರಿಂದ ಟಾಂಗಾ ಸವಾರಿ



ಜಿಲ್ಲಾ ಉಸ್ತುವಾರಿ ಸಚಿವರು ಟಾಂಗ ಗಾಡಿಯ ಮೂಲಕ ದೀಪಾಲಂಕಾರವನ್ನು ವೀಕ್ಷಿಸಿದರು.

ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಅವರು ಟಾಂಗಾದಲ್ಲಿ ಸವಾರಿ ಮಾಡಿ ದೀಪಾಲಂಕಾರ ವೀಕ್ಷಣೆ ಮಾಡಿದರು.ಸರ್ಕಾರಿ ಅತಿಥಿ ಗೃಹದಿಂದ ಹೇಮಚಂದ್ರ ಸರ್ಕಲ್, ಜಯಚಾಮರಾಜೇಂದ್ರ ಒಡೆಯರ್, ಸರ್ಕಲ್, ನಾಲ್ವಡಿ ಕೃಷ್ಣರಾಜ ಒಡೆಯರ್ ಸರ್ಕಲ್, ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ಪೋಸ್ಟ್ ಆಫೀಸ್ ಸರ್ಕಲ್ ಮಾರ್ಗದಲ್ಲಿ ತೆರಳಿದರು.ದಸರಾ ವೀಕ್ಷಣೆಗೆ ದೇಶ ವಿದೇಶಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ.

ಈ ಬಾರಿ ಅದ್ದೂರಿ ದೀಪಾಲಂಕಾರ ಮಾಡಲಾಗಿದೆ. ಟಾಂಗಾದಲ್ಲಿ ಸವಾರಿ ಮಾಡಿ ದೀಪಾಲಂಕಾರ ವೀಕ್ಷಣೆ ಮಾಡುವುದರಿಂದ ದೀಪದ ಬೆಳಕಿನ ಸೊಬಗನ್ನು ಕಣ್ತುಂಬಿಕೊಳ್ಳುವುದರ ಜೊತೆಗೆ ಟಾಂಗಾ ಸವಾರಿಗೂ ಉತ್ತೇಜನ ನೀಡಿದಂತಾಗುತ್ತದೆ ಎಂಬ ಉದ್ದೇಶದಿಂದ ಟಾಂಗಾ ಸವಾರಿ ಮಾಡಲಾಯಿತು ಎಂದು ಸಚಿವರು ಹೇಳಿದರು.ಟಾಂಗಾ ಸವಾರಿ ಬಳಿಕ ಟಾಂಗಾ ಮಾಲೀಕರಿಗೆ ಉಡುಗೊರೆ ನೀಡಲಾಯಿತು. ಸಚಿವರೊಂದಿಗೆ ಶಾಸಕರಾದ ನಾಗೇಂದ್ರ, ಮೇಯರ್ ಶಿವಕುಮಾರ್, ಮೂಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ರಾಜೀವ್, ಸೇರಿದಂತೆ ಹಲವರು ಟಾಂಗಾ ಸವಾರಿ ಮಾಡಿದರು.

–ಐಶ್ವರ್ಯ



# ದಸರಾ ವಿಶೇಷತೆ

## ದಸರಾ ಮಹೋತ್ಸವಕ್ಕೆ ಮೆರಗು ನೀಡಿದ ಆಕರ್ಷಕ ಸ್ತಬ್ದ ಚಿತ್ರಗಳು




ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಸಿದ್ಧಪಡಿಸಲಾಗಿದ್ದ ಆಕರ್ಷಕ ಸ್ತಬ್ದ ಚಿತ್ರಗಳು ವಿಜಯ ದಶಮಿ ಮೆರವಣಿಗೆಯಲ್ಲಿ ನೋಡುಗರ ಕಣ್ಮನ ಸೆಳೆಯುವ ಮೂಲಕ ದಸರಾ ಉತ್ಸವಕ್ಕೆ ಮೆರಗು ತಂದವು. ಮೆರವಣಿಗೆಯಲ್ಲಿ ವಿವಿಧ ಜಿಲ್ಲೆಗಳ ವತಿಯಿಂದ ಅನೇಕ ಪರಿಕಲ್ಪನೆಯಡಿ ಸಿದ್ಧಪಡಿಸಲಾಗಿದ್ದ ಅರಮನೆ ವಾದ್ಯಗೋಷ್ಠಿಯೂ ಸೇರಿದಂತೆ ೪೮ ಅತ್ಯುತ್ತಮವಾದ ಸ್ತಬ್ದ ಚಿತ್ರಗಳು ನೋಡುಗರ ಕಣ್ಣಿಗೆ ಹಬ್ಬ, ಮನಸ್ಸಿಗೆ ಉಲ್ಲಾಸ ನೀಡುವಲ್ಲಿ ಯಶಸ್ವಿಯಾದವು. ಸ್ತಬ್ದ ಚಿತ್ರಗಳನ್ನು ನೋಡುತ್ತಿದ್ದಂತೆ ಎಲ್ಲರ ಉತ್ಸಾಹ ಇಮ್ಮಡಿಯಾಗಿತು .

ಮೈಸೂರು ಜಿಲ್ಲೆ ವತಿಯಿಂದ ಸಿದ್ಧಪಡಿಸಲಾಗಿದ್ದ ಸ್ತಬ್ದ ಚಿತ್ರದಲ್ಲಿ ಜಿಯೋಗ್ರಾಫಿಕಲ್ ಇಂಡಿಕೇಶನ್ ಬೆಳೆಗಳಾದ ಮೈಸೂರು ವೀಳ್ಯದೆಲೆ, ನಂಜನಗೂಡು ರಸಬಾಳೆ, ಮೈಸೂರು ಮಲ್ಲಿಗೆ ರಚಿಸಲಾಗಿತ್ತು. ಸೋಮನಾಥಪುರ ಚನ್ನಕೇಶವ ದೇವಸ್ಥಾನ ಎಲ್ಲರ ಗಮನ ಸೆಳೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಸ್ತಬ್ದ ಚಿತ್ರವು ಕ್ರಾಫರ್ಡ್ ಹಾಲ್, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಚಿತ್ರಗಳ ಜೊತೆಗೆ ಶೈಕ್ಷಣಿಕ ಪದವಿಯ ಮಹತ್ವ ತಿಳಿಸಿತು. ವಿಜಯನಗರ ಜಿಲ್ಲೆಯ ವತಿಯಿಂದ ನಿರ್ಮಿಸಲಾಗಿದ್ದ ಸ್ತಬ್ದ ಚಿತ್ರದಲ್ಲಿ ಹಂಪಿಯ ಕಲ್ಲಿನ ರಥಕ್ಕೆ ನೋಡುಗರು ಮೆಚ್ಚುಗೆ ವ್ಯಕ್ತಪಡಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಸಿದ್ಧಗೊಂಡಿದ್ದ ಸ್ತಬ್ಧ ಚಿತ್ರವು ಜನರಿಗೆ ಉತ್ತಮ ಆರೋಗ್ಯ ಜೀವನ ಶೈಲಿಯ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ, ಆಯುಷ್ಮಾನ್ ಕಾರ್ಡ್ ಸೌಲಭ್ಯ ಕುರಿತು ಅರಿವು ಮೂಡಿಸಿತು. ಉಡುಪಿ ಜಿಲ್ಲೆಯ ಕೈಮಗ್ಗ ಸೀರೆ ನೇಯ್ಗೆ ಹಾಗೂ ಜಿಲ್ಲೆಯ ಸಾಂಪ್ರದಾಯಿಕ ಕಲೆಗಳ ಪ್ರದರ್ಶನ ಮತ್ತು ಯಕ್ಷಗಾನ ಚಿತ್ರಗಳು ಉತ್ತಮವಾಗಿದ್ದವು. ಮಂಡ್ಯ ಜಿಲ್ಲೆಯ ಭೂವರಹನಾಥಸ್ವಾಮಿ ವಿಗ್ರಹ ಹಾಗೂ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ, ಬಸರಾಳು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಒಳಗೊಂಡ ಸ್ತಬ್ದ ಚಿತ್ರವು ಎಲ್ಲರಲ್ಲಿ ಭಕ್ತಿಭಾವ ಮೂಡಿಸಿತು. ಕೊಪ್ಪಳ ಜಿಲ್ಲೆಯ ಆನೆಗೊಂದಿ ಕೋಟೆ, ಕಿನ್ನಾಳ ಗೊಂಬೆ ಮತ್ತು ಅಂಜನಾದ್ರಿ ಬೆಟ್ಟದ ಸ್ತಬ್ದ ಚಿತ್ರ ಹಾಗೂ ಕೋಲಾರ ಜಿಲ್ಲೆಯ ವತಿಯಿಂದ ಪದ್ಮವಿಭೂಷಣ ಶ್ರೀ ಬಿ.ಕೆ.ಎಸ್. ಐಯ್ಯಂಗಾರ್ ಅವರ ಶತಮಾನೋತ್ಸವ ನೆನಪಿನಲ್ಲಿ ಸಿದ್ಧಪಡಿಸಲಾಗಿದ್ದ ಸ್ತಬ್ದ ಚಿತ್ರದಲ್ಲಿ ದಕ್ಷಿಣ ಕಾಶಿ ಅಂತರಗಂಗೆ, ಯೋಗಾಸನ, ವ್ಯಾಯಾಮವು ನೋಡುಗರ ಮನಗೆದ್ದಿತು. ಶಿವಮೊಗ್ಗ ಜಿಲ್ಲೆಯ ಅಕ್ಕಮಹಾದೇವಿ ದೇವಸ್ಥಾನ ಹಾಗೂ ಜೂವನ ಚರಿತ್ರೆ ಸಾರುವ ಗುಹೆ, ಅನುಭವ ಮಂಟಪ ಸ್ತಬ್ದ ಚಿತ್ರ ನೋಡುತ್ತಿದ್ದಂತೆ ಎಲ್ಲರ ಚಿತ್ತ ನೆಟ್ಟಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸ್ತಬ್ದ ಚಿತ್ರವು ಜನಸೇವಕ, ಜನಸ್ಪಂದನ, ಅಮೃತ ಗ್ರಾಮ ಪಂಚಾಯತಿ ಸೇರಿದಂತೆ ಸರ್ಕಾರ ವಿವಿಧ ಯೋಜನೆಗಳ ಮಾಹಿತಿ ನೀಡಿತು. ಚಾಮರಾಜ ನಗರ ಜಿಲ್ಲೆಯ ವನ್ಯಧಾಮ, ಶ್ರೀ ಮಹದೇಶ್ವರ ವಿಗ್ರಹ ಹಾಗೂ ದಿವಂಗತ ನಟ ಪುನೀತ್ ರಾಜ್ ಕುಮಾರ್ ಪ್ರತಿಮೆ ಕಂಡು ಸಂತೋಷಗೊಂಡರು. ರಾಮನಗರ ಜಿಲ್ಲೆಯ ರಾಮದೇವರ ಬೆಟ್ಟ, ರಣಹದ್ದು ಪಕ್ಷಿಧಾಮ, ಬಾಗಲಕೋಟ ಜಿಲ್ಲೆಯ ಮುಧೋಳ ಶ್ವಾನ, ಇಳಕಲ್ ಸೀರೆ, ದುರ್ಗಾಂಬ ದೇವಸ್ಥಾನ, ಬೀದರ್ ಜಿಲ್ಲೆಯ ನೂತನ ಅನುಭವ ಮಂಟಪ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ, ಸಹಕಾರ ಇಲಾಖೆ, ಸೇರಿದಂತೆ ಅನೇಕ ಸ್ತಬ್ದ ಚಿತ್ರಗಳನ್ನು ಕಣ್ತುಂಬಿಕೊಂಡರು

**–ಐಶ್ವರ್ಯ**

## ದೇಹ, ಮನಸ್ಸನ್ನು ಆರೋಗ್ಯವಾಗಿಡಲು ಯೋಗ ಸಹಕಾರಿ: ಎಸ್.ಟಿ.ಎಸ್



ಯೋಗ ಎನ್ನುವುದು ಭಾರತೀಯರಿಗೆ ಪರಂಪರಾಗತವಾಗಿ ಗುರು ಹಿರಿಯರಿಂದ ಬಂದಂತಹ ಉಡುಗೊರೆ. ಪ್ರತಿನಿತ್ಯ ಯೋಗಭ್ಯಾಸ ಮಾಡುವುದರಿಂದ ದೇಹ ಮತ್ತು ಮನಸ್ಸು ಎರಡನ್ನೂ ಆರೋಗ್ಯವಾಗಿಡಲು ಸಹಕಾರಿಯಾಗಲಿದೆ ಎಂದು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಅವರು ಹೇಳಿದರು. ಚಾಮುಂಡಿ ಬೆಟ್ಟದ ದೇವಸ್ಥಾನದ ಆವರಣದಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ (ಎಸ್ ಪಿವೈಎಸ್ ಎಸ್) ವತಿಯಿಂದ ಹಮ್ಮಿಕೊಂಡಿದ್ದ ಯೋಗ ಚಾರಣ ಮತ್ತು ದುರ್ಗನಮಸ್ಕಾರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದರು.

ಯೋಗ ದಸರಾ ಸೇರಿದಂತೆ ಬಹುತೇಕ ಎಲ್ಲಾ ದಸರಾ ಕಾರ್ಯಕ್ರಮಗಳನ್ನು ಬಹಳ ವ್ಯವಸ್ಥಿತವಾಗಿ ಆಯೋಜಿಸಲಾಗಿದೆ. ಸಾವಿರ ಮೆಟ್ಟಿಲು ಹತ್ತಿ ಬಂದು ಯೋಗ ಮಾಡಿದ್ದಾರೆ. ಸೆ.೨೬ರಿಂದ ಅ.೩ರವರೆಗೆ ನಿತ್ಯ ಯೋಗಾಸನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ಈ ಬಾರಿ ದಸರಾ ಕಳೆಕಟ್ಟಿದೆ. ಬಹುತೇಕ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇನೆ. ಎಲ್ಲಾ ಅಚ್ಚುಕಟ್ಟಾಗಿ ಮಾಡಲಾಗಿದ್ದು, ಪ್ರತ್ಯಕ್ಷ, ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದರು.ಬಹುತೇಕ ಕಾರ್ಯಕ್ರಮಗಳು ಇಂದು ಅಂತ್ಯವಾಗಲಿದೆ. ನಾಳೆ ಮೆರವಣಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ಮುಖ್ಯಮಂತ್ರಿಗಳು ಸಹ ನಾಳೆ ಸಂಜೆ ಆಗಮಿಸಲಿದ್ದಾರೆ. ಎರಡು ವರ್ಷ ಕೋವಿಡ್ ನಿಂದ ಅದ್ದೂರಿ ದಸರಾ ಮಾಡಿರಲಿಲ್ಲ. ಉನ್ನತ ಮಟ್ಟದ ಸಮಿತಿ ತೀರ್ಮಾನದಂತೆ ಆಚರಣೆ ಮಾಡಲಾಗುತ್ತಿದ್ದು, ಅಧಿಕಾರಿಗಳು ಕೂಡ ಸೂಕ್ತವಾಗಿ ಸ್ಪಂದಿಸುತ್ತಿದ್ದಾರೆ ಎಂದರು.ಕಾರ್ಯಕ್ರಮದಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಶಿವಣ್ಣ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಮಿರ್ಲೇ ಶ್ರೀನಿವಾಸ್, ಮೂಡಾ ಮಾಜಿ ಅಧ್ಯಕ್ಷರಾದ ರಾಜೀವ್, ಜಂಗಲ್ಸ್ ಲಾಡ್ಜ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷರಾದ ಅಪ್ಪಣ್ಣ ಸೇರಿದಂತೆ ನಾನಾ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿದ್ದರು. **–ಅನುಶ್ರೀ**

## ಚಿಗುರು ಕವಿಗೋಷ್ಠಿಯಲ್ಲಿ ಯುವಕವಿಗಳ ಕಲರವ



**ಮೈಸೂರು** ಇಡೀ ಜಗತ್ತನ್ನೇ ಎದುರಿಸಬಲ್ಲೇ ನನ್ನಪ್ಪ ನನ್ನೊಟ್ಟಿಗಿದ್ದರೆ ಎಂಬ ಸಾಲಿನೊಂದಿಗೆ ಅಪ್ಪನ ಮೇಲಿನ ಪ್ರೀತಿ ಹಾಗೂ ಈ ಜಗತ್ತಿಗೆ ತಾಯಿಯಷ್ಟೇ ತಂದೆಯ ಪಾತ್ರವೂ ಮುಖ್ಯವಾದುದ್ದು ಎಂಬುದನ್ನು ಬಿಂಬಿಸುವ ಯುವಕವಿ ದೀಕ್ಷಾ ಎಂಬುವರ ಕವಿತೆಗೆ ಕೇಳುಗರ ಕಿವಿನೆಟ್ಟಿತು.ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಚಿಗುರು ಕವಿಗೋಷ್ಠಿಯಲ್ಲಿ ಇಂತಹ ಸಾಲುಗಳಿಂದ ಕೂಡಿದ ಕವಿತೆಯು ಯುವ ಕವಿಗಳಿಂದ ಹೊರ ಹೊಮ್ಮಿತು.ಅಪ್ಪ ಅಮ್ಮ ದೇವರಲ್ಲ ಮುಕ್ಕೋಟಿ ದೇವರನ್ನೇ ಮೀರಿಸಿದವರು ಎಂದು ಹೇಳುವ ಮೂಲಕ ತಂದೆ ತಾಯಿ ಇಬ್ಬರ ಶ್ರಮವು ಒಂದೇ ಸಮನಾದವು ಎನ್ನುತ್ತಾ ಕವನ ವಾಚಿಸುತ್ತಾ ತಂದೆ ತಾಯಿಗೆ ಗೌರವ ಸೂಚಿಸಿದರೆ, ಮತ್ತೊಬ್ಬ ಕವಿಯೂ ಇಂದಿನ ಯುವಕರ ಟ್ರೆಂಡ್ ಎಂದೇ ಬಿಂಬಿತವಾಗಿರುವ ಗಡ್ಡದ ಮೇಲೆ ಕವನ ವಾಚಿಸುವ ಮೂಲಕ ಗಡ್ಡ ಬಿಟ್ಟಿರುವವರು ಯಾವೆಲ್ಲಾ ರೀತಿಯಾಗಿ ಮಾತುಗಳನ್ನು ಕೇಳಬಹುದು ಎಂಬುದನ್ನು ನಿಸ್ಸಾರವಾಗಿ ನುಡಿದುಬಿಟ್ಟರು.ಅಂತೆಯೇ ಕುವೆಂಪು ಅವರ ವಿಶ್ವಮಾನವ ಕನಸ್ಸನ್ನು ನಾ ಗೆದ್ದೆ, ನೀ ಗೆದ್ದೆ ಎಂಬ ಬಿರುದು ಭಾವಗಳು ಬೇಡವೋ ಮೂಢ ಎಂದು ಹೇಳಿದರೆ, ಮತ್ತೊಬ್ಬರೂ ಆನಂದ ಭಾಷ್ಪವಾಗಲೀ, ದುಃಖವಾಗಲೀ ಕಣ್ಣಂಚಿನಲ್ಲಿ ಕಾಣಿಸಿಕೊಳ್ಳುವ ಕಣ್ಣೀರಿನ ಬಗ್ಗೆ ಕವಿತೆಯನ್ನು ವಾಚಿಸಿದರು. ಹೀಗೆ ಜೀವನದಲ್ಲಿ ಉಂಟಾಗುವ ಜಂಜಾಟ, ಭವ್ಯ ಭವನ, ಜಗತ್ತಿಗೆಲ್ಲಾ ಆಹಾರ ಒದಗಿಸುವ ರೈತ ಹಾಗೂ ಮಹಿಳಾ ಸಬಲೀಕರಣ ಹೀಗೆ ಒಂದೊಂದು ಶೀರ್ಷಿಕೆಯನ್ನು ವೈಶಿಷ್ಟ್ಯಪೂರ್ಣವಾಗಿ ಹೊರಹೊಮ್ಮಿಸುವಂತಹ ಹಲವಾರು ಕವಿತೆಗಳು ಯುವಗೋಷ್ಠಿಯಲ್ಲಿ ಸಭಿಕರ ಮನಸೂರೆ ಮಾಡಿತು. ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕರಾದ ಎಲ್.ನಾಗೇಂದ್ರ ಅವರು ಮಾತನಾಡಿ, ಕಂಪ್ಯೂಟರ್ ಯುಗದಲ್ಲಿಯೂ ನಮ್ಮ ನಾಡಿನ ಕಲೆ, ಸಂಸ್ಕೃತಿ, ಆಚಾರ-ವಿಚಾರವನ್ನು ಕವಿತೆಯ ಮೂಲಕ ವಾಚಿಸಲು ಆಸಕ್ತರಾಗಿರುವ ಯುವ ಕವಿಗಳು ಭಾರತದ ವಿವಿಧತೆಯಲ್ಲಿ ಏಕತೆಯನ್ನು ಬಿಂಬಿಸಲು ಸಿದ್ಧರಾಗುವಂತೆ ಭಾಸವಾಗುತ್ತಿದೆ ಎಂದರು.ಜಿಲ್ಲೆಯಿಂದ ಜಿಲ್ಲೆಗೆ ಆಹಾರ, ಭಾಷೆ ಹಾಗೂ ಸಂಸ್ಕೃತಿಗಳು ವೈವಿಧ್ಯಮಯವಾಗಿರುತ್ತದೆ. ಇದೆಲ್ಲದರ ಮಧ್ಯೆ ಹಳೇ ಬೇರು ಹೊಸ ಚಿಗುರು ಎಂಬುದನ್ನು ಸಾಬೀತು ಪಡಿಸುವ ಮೂಲಕ ನಮ್ಮ ಕನ್ನಡ ಭಾಷೆಯನ್ನು ಎತ್ತರೆತ್ತರಕ್ಕೆ ಹಾರಿಸಲು ಜ್ಞಾನಪೀಠ ಪುರಸ್ಕೃತ ಕವಿಗಳಂತೆ ಇಂದಿನ ಯುವ ಕವಿಗಳು ಎತ್ತರಕ್ಕೆ ಬೆಳೆಯಲು ಮುಂದಾಗಬೇಕು. ಜೊತೆಗೆ ಕನ್ನಡ ಮತ್ತು ಕನ್ನಡತನದ ಬೆಳಕನ್ನು ಪ್ರಪಂಚದಾದ್ಯಂತ ಪಸರಿಸಬೇಕು ಎಂದು ಸಲಹೆ ನೀಡಿದರು.ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಖ್ಯಾತ ಕವಿ ಮತ್ತು ವಿಮರ್ಶಕರಾದಡಾ.ಸಿ.ಆರ್.ಸಿದ್ದಾಶ್ರಮ ಪಾಲ್ಗೊಂಡಿದರೆ,ಅಧ್ಯಕ್ಷತೆಯನ್ನು ಖ್ಯಾತ ಕವಯಿತ್ರಿ ಜ್ಯೋತಿ ಗುರುಪ್ರಸಾದ್ ಅವರು ವಹಿಸಿಕೊಂಡರು. ಈ ವೇಳೆ ದಸರಾ ವಿಶೇಷಾಧಿಕಾರಿಯಾದ ಡಾ.ಎಂ.ದಾಸೇಗೌಡ, ಕಾರ್ಯದರ್ಶಿ ಹೆಚ್.ಡಿ.ಗಿರೀಶ್ ಸೇರಿದಂತೆ ಸಮಿತಿ ಸದಸ್ಯರು ಹಾಗೂ ಇನ್ನಿತರರು ಉಪಸ್ಥಿತರಿದ್ದರು

**–ಅರ್ಪಿತ**

### ಚಿಗುರು ಕವಿಗೋಷ್ಠಿಯ ಕವಿತೆ

ವಿಶಾಲ ಸೌಧದ ಅಡಿಯಲ್ಲಿ
ಗಟ್ಟಿ ಪಾಯ
ಮೇಲೆದ್ದ ಭವನದ
ತುಂಬೆಲ್ಲ ತಾನೆಂಬ ಭಾವ
ದೂರದೂರಕೆ ಕಾಣುವ ಕಣ್ಣಿಗೆ
ಕಾಲು ಕಾಣಲು ಕುರುಡು

ಒಳಗೆಲ್ಲ ಕುಸುರಿ ಕಲೆಗಳ
ಸೌಂದರ್ಯ ರಾಶಿ
ಸ್ವಲ್ಪ ಸ್ಥಾನಪಲ್ಲಟವಾದರೂ
ರಾಚುವ ಕಲೆಗಳ ಸಂತೆ
ಮುಚ್ಚಿ ಮೆರೆಯುವ ಕಲೆ
ಹೊಸತೇನಲ್ಲ

ಹಳೆಯದೆನ್ನುವ ಪರಂಪರೆಗೆ
ಕಿರೀಟ ತೊಡಿಸಿ
ಎತ್ತರಕ್ಕಿಡಲಾಗಿದೆ
ಕೈಗಲ್ಲ;ಮಾತಿಗೂ ದಕ್ಕದಂತೆ

ನಾಳೆ ಇರದ ಇಂದಿನ ಪ್ರತಿಷ್ಟೆಗೆ
ಒಣಜಂಭದ ಲೇಪ
ಮೂಲ ಸೆಲೆ ಕಂಠಕ್ಕೆ ಸೀಮಿತ
ಹೃದಯದ್ದು ದೂರದ ದಾರಿ
ಒಳಗಿಳಿಯುವುದು
ಅಸಾಧ್ಯವೇ ಬಿಡಿ

**–ಚಿದಂಬರ ವಿ ಕುಲಕರ್ಣಿ**

# ದಸರಾ ಸಂಭ್ರಮ

## ಸಂಪಾದಕೀಯ

### ಜಗತ್ತಿನ ಮಹಾಶಕ್ತಿ ಸ್ಥಾನ, ನಮ್ಮ ಚಾಮುಂಡಿ ಬೆಟ್ಟ



**ಮೈಸೂರು:**–ಸಾಂಸ್ಕೃತಿಕ ರಾಜಧಾನಿ ಎಂದೇ ಕರೆಯಲ್ಪಡುವ ನಮ್ಮ ಹೆಮ್ಮೆಯ ಮೈಸೂರು ನಗರ ಹೇಗೆ ಕಲೆ , ಸಾಹಿತ್ಯ ಹಾಗು ಇತರ ವೈವಿಧ್ಯಮಯ ವಿಷಯಗಳಿಗೆ ಹೆಸರುವಾಸಿಯೋ , ದೈವೀಕವಾಗಿಯೂ ಸಹ ಅಷ್ಟೇ ಪ್ರಾಮುಖ್ಯತೆಯನ್ನು ಇಡೀ ವಿಶ್ವದಾದ್ಯಂತ ಹೊಂದಿದೆ.

ಇದಕ್ಕೆ ಮುಖ್ಯ ಕಾರಣ ಈ ನಾಡನ್ನ ಕಾಯುತ್ತಿರುವ ಶಕ್ತಿ ಹಾಗು ನಮ್ಮ ಮೈಸೂರಿನ ಒಡೆಯರ ಹಾಗು ಜನಸಾಮಾನ್ಯರ ಆರಾಧ್ಯ ದೇವತೆ ತಾಯಿ ಚಾಮುಂಡೇಶ್ವರಿಯ ಸನ್ನಿಧಾನ ನಮ್ಮ ಊರಿನಲ್ಲಿ ಇರುವಂತಹದ್ದು. ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಅದರ ಆಗ್ನೇಯ ಹಾಗು ಪೂರ್ವ ಪಶ್ಚಿಮದಲ್ಲಿ ಹಬ್ಬಿ ನಿಂತಿರುವ ಬೆಟ್ಟಕ್ಕೆ ಈ ಹೆಸರು ಬರಲು ಕಾರಣ ತಾಯಿ ಚಾಮುಂಡೇಶ್ವರಿಯ ದೇವಾಲಯ ಇರುವುದರಿಂದ.ಬೆಟ್ಟದ ಮೇಲ್ಭಾಗವನ್ನು ಹತ್ತನೆಯ ಶತಮಾನದ ಹೊತ್ತಿಗಾಗಲೇ ಪುಣ್ಯಕ್ಷೇತ್ರವೆಂದು ಪರಿಗಣಿಸಲಾಗಿತ್ತು.

ನಮ್ಮ ದೇಶಾದ್ಯಂತ ಇರುವಂತಹ ೧೮ ಶಕ್ತಿ ಸ್ಥಾನಗಳಿದ್ದು, ಅದರಲ್ಲಿ ೮ ಮಹಾ ಶಕ್ತಿ ಸ್ಥಾನಗಳಲ್ಲಿ ಒಂದಾದಂತಹ ನಮ್ಮ ಚಾಮುಂಡೇಶ್ವರಿ ದೇವಸ್ಥಾನವು ಒಂದು ಮಹಾ ಶಕ್ತಿ ಪೀಠ ಎಂದು ಇಡೀ ವಿಶ್ವವೇ ಪೂಜಿಸುತ್ತದೆ. ಮೂಲ ದೇಗುಲವನ್ನು ೧೨ನೇಯ ಶತಮಾನದಲ್ಲಿ ಹೊಯ್ಸಳ ದೊರೆಗಳು ನಿರ್ಮಿಸಿದ್ದಾರೆ ಎಂದು ತಿಳಿದು ಬಂದಿದ್ದು ಇದರ ಗೋಪುರವನ್ನು ಬಹುಶಹ ೧೭ನೇ ಶತಮಾನ ಶತಮಾನದ ವಿಜಯನಗರದ ಆಡಳಿತಗಾರರು ನಿರ್ಮಿಸಿದ್ದಾರೆಂದು ಹೇಳುತ್ತಾರೆ.

ತಾಯಿಯ ದರ್ಶನ ಪಡೆಯಲು ೩೦೦೦ ಅಡಿ ಎತ್ತರದ ಬೆಟ್ಟವನ್ನು ಹತ್ತುವಸಲವಾಗಿ ೧೬೫೯ರಲ್ಲಿ ಸಾವಿರ ಮೆಟ್ಟಿಲುಗಳನ್ನು ನಿರ್ಮಿಸಲಾಯಿತು. ಈ ದೇವಾಲಯದ ವಾಸ್ತುಶಿಲ್ಪವು ದ್ರಾವಿಡ ಶೈಲಿಗೆ ಹೊಂದಿದೆ. ಮುಖ್ಯಬಾಗಿಲು, ಪ್ರವೇಶ ದ್ವಾರ, ನವರಂಗ ಸಭಾಂಗಣ, ಅಂತರಾಳ ಮಂಟಪ, ಗರ್ಭಗುಡಿ ಮತ್ತು ಪ್ರಾಕಾರವನ್ನು ಹೊಂದಿದೆ.

ಏಳು ಹಂತದ ಪಿರಮಿಡ್ ಗೋಪುರ ಪ್ರದೇಶದ್ವಾರದಲ್ಲಿದ್ದು, ಗರ್ಭಗುಡಿಯ ಮೇಲ್ಭಾಗದಲ್ಲಿ ಸಣ್ಣದಾದ ಒಂದು ಗೋಪುರವಿದೆ. ಗರ್ಭಗುಡಿಯ ಮುಂಭಾಗದಲ್ಲಿ ದೇವಿಯ ಧ್ವಜಸ್ತಂಬ ಆ ತಾಯಿಯ ಹೆಜ್ಜೆ ಗುರುತುಗಳು ಮತ್ತು ನಂದಿಯ ಸಣ್ಣದಾದ ಒಂದು ಪ್ರತಿಮೆ ಇದೆ.

ಕುಳಿತಿರುವ ಭಂಗಿಯಲ್ಲಿ ಇರುವ ತಾಯಿ ದುರ್ಗಿಯ ವಿಗ್ರಹವು, ಗರ್ಭಗುಡಿಯ ಒಳಗೆ ವಿರಾಜಮಾನವಾಗಿ ಇರುವುದನ್ನು ನೋಡಲು ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರುತ್ತಾರೆ.

ಚಾಮುಂಡಿ ಬೆಟ್ಟದ ಮೇಲಿನ ಇತರ ಆಕರ್ಷಣೆ ಏನೆಂದರೆ ಹದಿನೈದು ಅಡಿ ಎತ್ತರದ ೨೪ ಅಡಿ ಉದ್ದದ ಸೊಗಸಾದ ಗಂಟೆಗಳ ಮಾಲೆಯನ್ನು ಧರಿಸಿದ ನಂದಿ ಹಾಗೂ ಕೈಯಲ್ಲಿ ಖಡ್ಗ ಮತ್ತು ಸರ್ಪವನ್ನು ಹಿಡಿದು ಮಹಿಷಾಸುರನ ಬೃಹತ್ ಪ್ರತಿಮೆಯು ಒಂದು ವಿಶೇಷ ಆಕರ್ಷಣೆಯಾಗಿದೆ.

ನವರಾತ್ರಿಯ ಸಮಯದಲ್ಲಿ ದೇವಿಯ ಒಂಬತ್ತು ವಿಭಿನ್ನ ಅಂಶಗಳನ್ನು ಚಿತ್ರಿಸಲು ದೇವಿಯನ್ನು ಒಂಬತ್ತು ವಿಧಗಳಲಿ ಅಲಂಕರಿಸಲಾಗುತ್ತದೆ.

ಏಳನೇ ದಿನ ಮೈಸೂರಿನ ಮಹಾರಾಜರು ಕೊಡುಗೆಯಾಗಿ ಕೊಟ್ಟಿರುವ ಆಭರಣಗಳನ್ನು ತಾಯಿ ಚಾಮುಂಡೇಶ್ವರಿಗೆ ತೊಡಿಸುತ್ತಾರೆ ಹಾಗು ಈ ದೇವಾಲಯವು ಆಷಾಢ ಶುಕ್ರವಾರ, ನವರಾತ್ರಿ ಮತ್ತು ಅಮ್ಮನವರ ವರ್ಧಂತಿಯ ಹಬ್ಬಗಳ ಆಚರಣೆಗಳಿಗೆ ಬಹಳ ಹೆಸರುವಾಸಿಯಾಗಿದೆ.

**–ಚಿನ್ಮಯ್ ವಿಶ್ವಸೇನ**

## ಪ್ರಾಣಿ ಪ್ರಿಯರ ಮನ ಸೆಳೆದ ಪೆಟ್ ಶೋ...



ಮೈಸೂರು:–ನಾಡಹಬ್ಬ ಮೈಸೂರು ದಸರಾದಲ್ಲಿ ಶ್ವಾನಗಳ ಮೇಳವೂ ಒಂದು.. ಹಬ್ಬದ ವೈವಿಧ್ಯತೆಗಳ ನಡುವೆ ನಡೆಯುವ ಈ ಪೆಟ್ ಶೋ, ಪ್ರತಿವರ್ಷ ಪ್ರಾಣಿ ಪ್ರಿಯರ ಮೆಚ್ಚುಗೆಗೆ ಕಾರಣವಾಗುತ್ತದೆ. ಅದರಲ್ಲೂ ಈ ಬಾರಿ ಭಾನುವಾರದಂದು ಪೆಟ್ ಶೋ ಹಮ್ಮಿಕೊಂಡಿದ್ದರಿಂದ, ಶೋ ನೋಡಲು ಬಂದಿದ್ದವರ ಸಂಖ್ಯೆಯೂ ಹೆಚ್ಚಾಗಿತ್ತು.

ಮೈಸೂರು ವಿವಿ ಕ್ರೀಡಾ ಮೈದಾನದಲ್ಲಿ ಪಶುಪಾಲನಾ ಪಶು ವೈದ್ಯಕೀಯ ಇಲಾಖೆ ವತಿಯಿಂದ ಸಾಕು ಪ್ರಾಣಿಗಳ ಪ್ರದರ್ಶನ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಚಾರ್ಲಿ' ಸಿನಿಮಾದಲ್ಲಿ ಅಭಿನಯಿಸಿರುವ ಶ್ವಾನ ಆಗಮಿಸಿದ್ದು ವಿಶೇಷವಾಗಿತ್ತು. ಈ ಸ್ಪರ್ಧೆಯಲ್ಲಿ ಸುಮಾರು ೧೮ಕ್ಕೂ ಹೆಚ್ಚು ತಳಿಯ ೪೦೦ಕ್ಕೂ ಹೆಚ್ಚು ಶ್ವಾನಗಳು ಬಂದಿದ್ದವು. ಕಣ್ಮನ ಸೆಳೆದ ಚಾರ್ಲಿ..

ಈ ಬಾರಿ ಚಾರ್ಲಿ ಖ್ಯಾತಿಯ ಶ್ವಾನ ನೋಡುಗರ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು. ಪಿಂಕ್ ಕಲರ್ ಫ್ರಾಕ್‌ನಲ್ಲಿ ಚಾರ್ಲಿ ಮತ್ತಷ್ಟು ಸುಂದರವಾಗಿ ಕಾಣಿಸುತ್ತಿದ್ದಳು. ಚಾರ್ಲಿಯನ್ನು ನೋಡಿದ್ದೇ ತಡ.. ಶೋಗೆ ಬಂದಿದ್ದವರೆಲ್ಲ ಒಬ್ಬರಾದ ಮೇಲೊಬ್ಬರಂತೆ ಬಂದು ಫೋಟೋ ತೆಗೆಸಿಕೊಂಡ್ರು.. ಚಾರ್ಲಿ ಸಿನೆಮಾಗೂ ಮುನ್ನ ಸಾಮಾನ್ಯ ಶ್ವಾನದಂತಿದ್ದ ಚಾರ್ಲಿ, ಸಿನೆಮಾ ರಿಲೀಸ್ ಆದ್ಮೇಲೆ ಸೆಲೆಬ್ರಿಟಿ ಚಾರ್ಲಿ ಆಗಿದ್ದಾಳೆ.. ಹಾಗಾಗಿಯೇ ಶೋಗೆ ಆಗಮಿಸಿದ್ದ ನೂರಾರು ಮಂದಿ, ಚಾರ್ಲಿ ಜೊತೆ ಪೋಸ್ ಕೊಟ್ಟು ಫೋಟೊ ತೆಗೆಸಿಕೊಂಡರು.

ಈ ಸಾಕು ನಾಯಿಗಳ ಪ್ರದರ್ಶನದಲ್ಲಿ ಮುಧೋಳ, ಲ್ಯಾಬ್ರಡರ್, ಜರ್ಮನ್ ಶೆಫರ್ಡ್, ಪಗ್, ಗೋಲ್ಡನ್ ರಿಟ್ರಿವರ್, ಬುಲ್ ಡಾಗ್, ರಾಟ್ ವಿಲ್ಲರ್ , ಪಮೋರಿಯನ್ ಜಾತಿಯ ನಾಯಿಗಳು ಭಾವಹಿಸಿದ್ದವು. ಕಳೆದೆರೆಡು ವರ್ಷಗಳಿಂದ ಕೊರೊನಾ ಕಾರಣಕ್ಕೆ ಶ್ವಾನ ಪ್ರದರ್ಶನ ನಡೆದಿರಲಿಲ್ಲ. ಹೀಗಾಗಿ ಇಂದು ಕಿಕ್ಕಿರಿದು ಸೇರಿದ ಜನರು ವಿವಿಧ ತಳಿಯ ನಾಯಿಗಳನ್ನು ನೋಡಿ ಸಂಭ್ರಮಿಸಿದರು.

ಸಾಮಾನ್ಯವಾಗಿ ಜನರಿಗೆ ಕೆಲವೇ ತಳಿಗಳ ಶ್ವಾನಗಳು ಮಾತ್ರ ಗೊತ್ತಿರುತ್ತೆ. ಆದ್ರೆ ಪೆಟ್ ಶೋಗೆ ಸುಮಾರು ೧೮ ತಳಿಯ ಶ್ವಾನಗಳು ಆಗಮಿಸಿದ್ದು, ಪ್ರಾಣಿ ಪ್ರಿಯರ ಕೌತುಕಕ್ಕೆ ಕಾರಣವಾಗಿತ್ತು. ಶ್ವಾನಗಳ ತುಂಟಾಟವನ್ನು ನೋಡಿ ಆನಂದಿಸುವುದು ಮಾತ್ರವಲ್ಲದೆ, ಅವುಗಳನ್ನು ತಮ್ಮ ಮೊಬೈಲ್‌ನಲ್ಲೂ ರೆಕಾರ್ಡ್ ಮಾಡ್ಕೊಂಡು ಸಂಭ್ರಮಿಸಿದ್ರು.

**– ಭೂಮಿಕ ಬಿ.ಎಸ್**

## ಅರಮನೆ ನಗರಿಯಲ್ಲಿ ವನ್ಯಜೀವಿಗಳ ಛಾಯಾಚಿತ್ರ ಪ್ರದರ್ಶನ



ಊಡಾವನ್ನು ತಿನ್ನಲು ಯತ್ನಿಸುತ್ತಿರುವ ಕಾಳಿಂಗ ಸರ್ಪ.. ಬಿಸಿಲ ಬೇಗೆಗೆ ನೀರು ಕುಡಿಯುತ್ತಿರುವ ಹುಲಿ.. ಮತ್ತೊಂದೆಡೆ ಬೇಟೆಗೆ ಹೊಂಚು ಹಾಕಿ ಕುಳಿತಿರುವ ಹುಲಿ.. ರಾಜಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಿರುವ ಗಜರಾಜ.. ಗಾಬರಿಯಿಂದ ನೋಡ್ತಿರುವ ಜಿಂಕೆಗಳ ಗುಂಪು.. ದಟ್ಟ ಕಾನನದ ನಡುವೆ ಪಕ್ಷಿಗಳ ಕಲರವ....

ಇವೆಲ್ಲವೂ ಕಂಡು ಬಂದಿದ್ದು, ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ವನ್ಯಜೀವಿಗಳ ಛಾಯಾಚಿತ್ರ ಪ್ರದರ್ಶನದಲ್ಲಿ. ನಗರದ ಖಾಸಗೀ ಹೋಟೆಲ್‌ನಲ್ಲಿ ಆಯೋಜನೆ ಮಾಡಲಾಗಿಗದ್ದ ಛಾಯಾಚಿತ್ರ ಪ್ರದರ್ಶನದಲ್ಲಿಭಿ ೧೯೯ ಛಾಯಾಗ್ರಾಹಕರ, ೩೫೦ಕ್ಕೂ ಅಧಿಕ ಚಿತ್ರಗಳು ಪ್ರದರ್ಶನಗೊಂಡಿದ್ದವು. ಇದರಲ್ಲಿ ಕರ್ನಾಟಕದ ಬಂಡೀಪುರ, ನಾಗರಹೊಳೆ ಅಭಯಾರಣ್ಯದ ಜೊತೆಗೆ, ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳ ಅಭಯಾರಣ್ಯಗಳಲ್ಲಿ ತೆಗೆದಿರುವ ಹುಲಿ, ಚಿರತೆ, ಆನೆ. ಕಾಡು ನಾಯಿ, ಕಾಡು ಕೋಣ, ಜಿಂಕೆ, ಹಲವು ಬಗೆಯ ಪಕ್ಷಿಗಳ ಚಿತ್ರಗಳು ಕಂಡು ಬಂತು.

ಕೆಲವರು ಛಾಯಾಗ್ರಹಣನ್ನು ವೃತ್ತಿಯಾಗಿ ಸ್ವೀಕರಿಸಿದ್ರೆ, ಇನ್ನೂ ಕೆಲವರು ಹವ್ಯಾಸವನ್ನಾಗಿ ಮಾಡಿಕೊಂಡಿರುತ್ತಾರೆ. ಅದರಲ್ಲೂ ವನ್ಯಜೀವಿ ಛಾಯಾಗ್ರಹಣ ಅಂದ್ರೆ ತುಂಬಾ ವಿಶೇಷವಾದದ್ದು. ಯಾಕಂದ್ರೆ ಇದಕ್ಕೆ ತುಂಬಾ ತಾಳ್ಮೆ ಇರಬೇಕಾಗುತ್ತದೆ. ಗಂಟೆಗಟ್ಟಲೆ ಕಾಯಬೇಕಾಗುತ್ತದೆ.. ತಿಂಗಳನಾಗುಟ್ಟಲೆ ಕಾಡಿನಲ್ಲಿಯೇ ವಾಸವಿರಬೇಕಾಗುತ್ತದೆ.. ಹಾಗಾಗಿಯೇ ವನ್ಯಜೀವಿ ಛಾಯಾಗ್ರಹಣವನ್ನು ಆರಿಸುವವರು ತುಂಬಾ ವಿರಳ.. ಅಷ್ಟರಮಟ್ಟಿಗೆ ತಾಳ್ಮೆ, ಪರಿಶ್ರಮ ಇಟ್ಟುಕೊಂಡು ತಮ್ಮ ಕ್ಯಾಮೆರಾ ಲೆನ್ಸ್‌ನಲ್ಲಿ ಕ್ಲಿಕ್ಕಿಸುವ ಫೋಟೋಗಳು ಒಂದು ರೀತಿಯಲ್ಲಿ ಕಣ್ಣಿಗೆ ಹಬ್ಬವಿದ್ದಂತೆ.. ಹಾಗಾಗಿಯೇ ದಸರಾ ಮಹೋತ್ಸವದ ಛಾಯಾಚಿತ್ರ ಪ್ರದರ್ಶನ ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಛಾಯಾಚಿತ್ರ ಪ್ರದರ್ಶನದಲ್ಲಿ ಅತ್ಯುತ್ತಮ ಫೋಟೋಗಳಿಗೆ ಪ್ರಶಸ್ತಿ ಸಹ ನೀಡಲಾಗಿತ್ತು. ಇದರಲ್ಲಿ ಬೆಂಗಳೂರಿನ ಎಪಿ ಸುರೇಶ್‌ರಾವ್ ಅವರು ಸೆರೆ ಹಿಡಿದಿರುವ, ಪಕ್ಷಿಯೊಂದು ಆಹಾರ ತಿನ್ನಿಸುತ್ತಿರುವ ಫೋಟೋ ಪ್ರಥಮ ಪ್ರಶಸ್ತಿ ಪಡೆದುಕೊಂಡಿತು. ಮೈಸೂರಿನ ವಿ ಶೇಷಾದ್ರಿ ಅವರ ಚಿತ್ರಕ್ಕೆ ಎರಡನೇ ಬಹುಮಾನ ದೊರೆಯಿತು.

ವನ್ಯಜೀವಿ ಛಾಯಾಚಿತ್ರ ಪ್ರದರ್ಶನಕ್ಕೆ ಗೋಪಾಲಗೌಡ ಶಾಂತವೇರಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಸಂತೃಪ್ತ್ ಚಾಲನೆ ನೀಡಿದರು. ಉರಗ ತಜ್ಞ ಸ್ನೇಕ್ ಶ್ಯಾಮ್, ಉರಗ ಸಂರಕ್ಷಕ ಬಿ.ಶಿವಕುಮಾರ್, ಪ್ರೀತಿ ಗ್ರೂಪ್ಸ್‌ನ ನಿರ್ದೇಶಕ ಪ್ರಜ್ವಲ್ ರಾಜಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

**– ಭೂಮಿಕ ಬಿ.ಎಸ್**

**ಪ್ರಧಾನ ಸಂಪಾದಕರು––ಪ್ರೋ. ಸಿ.ಕೆ.ಪುಟ್ಟಸ್ವಾಮಿ**
**ಮುಖ್ಯಸ್ಥರು, ಪತ್ರಿಕೋದ್ಯಮ,ಸಮೂಹ ಸಂವಹನ ವಿಭಾಗ, ಮಾನಸಗಂಗೋತ್ರಿ, ಮೈಸೂರು**
**ಸಂಪಾದಕರು–– ಡಾ. ಮಮತ. ಎನ್.**
ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ, ಸಮೂಹ ಸಂವಹನ ವಿಭಾಗ ಮಾನಸಗಂಗೋತ್ರಿ
**ವರದಿಗಾರರು–– ಭಾರತಿ.ಎಚ್.ಸಿ, ಭೂಮಿಕ.ಜಿ.ಡಿ, ಭೂಮಿಕ.ಬಿ.ಎಸ್, ಚಿನ್ಮಯ್ ವಿಶ್ವಸೇನ**
**ಪುಟ ವಿನ್ಯಾಸಗಾರರು–– ಭೂಮಿಕ.ಬಿ.ಎಸ್. ಮತ್ತು ಭಾರತಿ.ಎಚ್.ಸಿ.**

# ದಸರಾಗೆ ಮೆರೆಗು ತಂದ ಮುರ್ಮು



**ಮೈಸೂರು;**ಮೈಸೂರಿನಲ್ಲೇ ತಯಾರಾದ ರೇಶ್ಮೆ ಸೀರೆಯಲ್ಲಿ ಆಗಮಿಸಿ, ದಸರಾಗೆ ವಿಶೇಷ ಮೆರುಗು ತಂದ ರಾಷ್ಟ್ರಪತಿ ದ್ರೌಪದಿ ಮುರ್ಮು ದಸರಾ ಮಹೋತ್ಸವ ಉದ್ಘಾಟಿಸಿದ ಪ್ರಪ್ರಥಮ ರಾಷ್ಟ್ರಪತಿ ಎಂಬ ಗೌರವಕ್ಕೆ ಪಾತ್ರರಾದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರಿನಲ್ಲೇ ತಯಾರಾದ ಮೈಸೂರು ರೇಶ್ಮೆ ಸೀರೆ ಧರಿಸಿ, ದಸರಾ ಉದ್ಘಾಟಿಸುವ ಮೂಲಕ ಮೈಸೂರಿಗೆ ವಿಶೇಷ ಗೌರವ ನೀಡಿದ್ದಾರೆ.

ರಾಷ್ಟ್ರಪತಿಯವರಿಗಾಗಿ ವಿಶೇಷವಾಗಿ ನೇಯ್ದ ಮೈಸೂರು ರೇಶ್ಮೆ ಸೀರೆ ಇದು. ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಅವರು ಜಿಲ್ಲಾಡಳಿತದ ಪರವಾಗಿ ರಾಷ್ಟ್ರಪತಿಯವರನ್ನು ಅಧಿಕೃತವಾಗಿ ಆಹ್ವಾನಿಸುವಾಗ ಗೌರವಸೂಚಕವಾಗಿ ಈ ಮೈಸೂರು ರೇಶ್ಮೆ ಸೀರೆ, ಫಲ ತಾಂಬೂಲ ನೀಡಿ ಗೌರವಿಸಿದ್ದರು.

ಇದೇ ಉಡುಪು ಧರಿಸಿ ರಾಷ್ಟ್ರಪತಿಯವರು ಮೈಸೂರು ದಸರಾ ಮಹೋತ್ಸವಕ್ಕೆ ಆಗಮಿಸಿದ್ದು ಮೈಸೂರಿಗರಿಗೆ ಸಂತಸ ತಂದಿದೆ. ರಾಷ್ಟ್ರಪತಿಯವರು ಬಿಳಿ ಸೀರೆ ಇಷ್ಟಪಡುತ್ತಾರೆ ಎಂಬುದನ್ನು ಅರಿತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಸರ್ಕಾರಿ ಸ್ವಾಮ್ಯದ ಕೆ.ಎಸ್.ಐ.ಸಿ.ಯ ಸರ್ಕಾರಿ ರೇಶ್ಮೆ ಕಾರ್ಖಾನೆಗೆ ಈ ಉಡುಪು ತಯಾರಿಕೆಗೆ ಆದೇಶ ನೀಡಿ, ಸಿದ್ಧ ಪಡಿಸಿದ್ದರು.

ಮೈಸೂರಿನ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೧೯೧೨ರಲ್ಲಿ ನಿರ್ಮಿಸಿದ ರೇಷ್ಮೆ ಕಾರ್ಖಾನೆ ಎಂಬ ಹೆಮ್ಮೆ ಈ ಕಾರ್ಖಾನೆಗೆ ಇದೆ. ಮೈಸೂರು ಸಿಲ್ಕ್ ಸೀರೆ ಬ್ರಾಂಡ್ ವಿಶ್ವಪ್ರಸಿದ್ಧ ಬ್ರಾಂಡ್ ಆಗಿದೆ. ನೂರಾರು ವರ್ಷಗಳಿಂದ ಮಹಿಳೆಯರಿಗೆ ಮೈಸೂರು ಸಿಲ್ಕ್ ಸೀರೆ ಎಂದರೆ ಎಲ್ಲಿಲ್ಲದ ಅಚ್ಚುಮೆಚ್ಚು. ಹಾಗಾಗಿ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಇಷ್ಟಪಡುವ ನೈಸರ್ಗಿಕ ಬಿಳಿ ಬಣ್ಣದ ಅಪ್ಪಟ ರೇಶ್ಮೆ ಮತ್ತು ಅಪ್ಪಟ ಚಿನ್ನದ ಎಳೆಗಳನ್ನು ಬಳಸಿ ತಯಾರಿಸಿದ ಈ ಉಡುಪನ್ನು ಗೌರವಸೂಚಕವಾಗಿ ಅವರಿಗೆ ಸಮರ್ಪಿಸಲಾಗಿತ್ತು.

**–ಮನೋಜ್ ಕೆ. ಎಮ್**

# ಮೈಸೂರು ದಸರಾ ಎಷ್ಟೊಂದು ಸುಂದರ



ಛಾಯಾಚಿತ್ರ ಕೃಪೆ –ಹೃತಿನ್ ಶೆಟ್ಟಿ

**ಮೈಸೂರು;**ಮೈಲಾರಿ ದೋಸೆ, ಮೈಸೂರು ವೀಳ್ಯದ ಎಲೆ, ಮೈಸೂರು ರೇಷ್ಮೆ, ಮೈಸೂರು ಪಾಕ್, ಮೈಸೂರು ಮಲ್ಲಿಗೆಯೂ ಮೈಸೂರು ದಸರೇಯಷ್ಟೇ ವಿಶ್ವವಿಖ್ಯಾತ, ಅರಮನೆಗಳ ನಗರಿ ಎಂದೇ ಕರೆಯಲಾಗುವ ಮೈಸೂರು ಐನೂರು ವರ್ಷಗಳ ಕಾಲ ಒಡೆಯರ್ ರಾಜಮನೆತನದ ಆಳ್ವಿಕೆಗೆ ಒಳಪಟ್ಟು ನಾನೂರ ಹನ್ನೆರಡು ಬಾರಿ ದಸರಾಗೆ ಸಾಕ್ಷಿಯಾಗಿದೆ.

ಇದರ ಮೂಲ ಹೆಸರು ಮಹಿಷಪುರಿಯಾಗಿದ್ದು ಆಂಗ್ಲ ಭಾಷೆಯಿಂದ ರೂಪಾಂತರಗೊಂಡಿದೆ. ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮ ವಿಶ್ವವಿದ್ಯಾಲಯವನ್ನು ಪಡೆದಿರುವ ಮೈಸೂರು ಯು. ಆರ್. ಅನಂತಮೂರ್ತಿ, ಆರ್ ಕೆ ನಾರಾಯಣ್, ನಾರಾಯಣ ಮೂರ್ತಿ, ವಿಷ್ಣುವರ್ಧನ್ ಅಂತಹ? ಮಹಾನ್ ಸಾಧಕರ ತವರೂರು ಕೂಡ, ಯೋಜನಾಬದ್ಧವಾಗಿ ನಿರ್ಮಾಣ ವಾಗಿರುವ ಮೈಸೂರು ನಗರವು ಭಾರತದ ಮೂರನೇ ಹಳೆಯ ಮೃಗಾಲಯವಾಗಿರುವ ಜಯ ಚಾಮರಾಜೇಂದ್ರ ಮೃಗಾಲಯವನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡು ಸಂರಕ್ಷಿಸುತ್ತಿದೆ. ಭವ್ಯ ಭಾರತದ ಪ್ರತಿ ಚುನಾವಣೆಗೆ ಬಳಸುವ ಶಾಯಿಯು ಇದೆ ಮೈಸೂರಿನಲ್ಲಿ ತಯಾರಿಸಲಾಗುತ್ತದೆ.

ಮೈಸೂರಿನ ಕಾರಂಜಿ ಸರೋವರದ ಪಕ್ಷಿಧಾಮವು ಭಾರತದ ಅತಿದೊಡ್ಡ 'ವಾಕ್ ಥ್ರೂ' ಪಂಜರ ವಾಗಿದೆ, ಓರಿಯಂಟಲ್ ರಿಸರ್ಚ್ ಇನ್ಸಿಟ್ಯೂಟ್ ಎಂದು ಕರೆಯಲಾಗುವ ಭಾರತದ ಅತ್ಯಂತ ಹಳೆಯ ಗ್ರಂಥಾಲಯವು ಸುಮಾರು ೫೦,೦೦೦ ತಾಳೆ ಎಲೆ ಹಸ್ತಪ್ರತಿಗಳ ಸಂಗ್ರಹವನ್ನು ಹೊಂದಿದೆ, ಭಾರತದ ಇತಿಹಾಸದಲ್ಲಿ ೫೦೦ ವರ್ಷಗಳಿಗೂ ಹೆಚ್ಚು ಕಾಲ ಒಂದು ರಾಜ್ಯವನ್ನು ಆಳಿದ ಏಕೈಕ ಭಾರತೀಯ ರಾಜಮನೆತನ, ಒಡೆಯರ್ ರಾಜಮನೆತನ. ಭಾರತದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ ಮೊದಲ ನಗರ ಮೈಸೂರು.

ಭಾರತದ ಮೊದಲ ವಿಮಾನ ನಿರ್ಮಾತೃ ಮೈಸೂರಿನವರಾದ ವೆಂಕಟ ಸುಬ್ಬ ಶೆಟ್ಟಿ.

**–ಮಹಾಶಾಂತೇಶ್ ಎಂ. ಸಿ**



ಛಾಯಾಚಿತ್ರ ಕೃಪೆ–ಭಾರತಿ ಹುರುಗಲ್



ಛಾಯಾಚಿತ್ರ ಕೃಪೆ–ಅನೀಲ್ ಅಂತರಸಂತೆ

# ಹುಬ್ಬೇರಿಸುವ ಬೊಂಬೆ ಪ್ರದರ್ಶನ



**ಮೈಸೂರು;**ಲಅರಮನೆ ಆವರಣದಲ್ಲಿ ಛಾಯಾ ಚಿತ್ರ ಮತ್ತು ಬೊಂಬೆಗಳ ಪ್ರದರ್ಶನ ದಸರಾ ಬಂತೆಂದರೆ ಸಾಕು ನಮ್ಮ ಅರಮನೆ ನಗರಿ ಹತ್ತು ಹಲವು ಕಾರ್ಯ ಕ್ರಮಗಳಿಂದ ನೋಡುಗರ ಹುಬ್ಬೇ ರಿಸುವಂತೆ ಮಾಡುತ್ತದೆ.

ಪ್ರತಿವರ್ಷವೂ ದಸರಾ ಸಮಯದಲ್ಲಿ ಜಗನ್ ಮೋಹನ್ ಅರಮನೆಯ ಆವರಣದಲ್ಲಿ ಹಲವಾರು ಕಾರ್ಯ ಕ್ರಮಗಳನ್ನು ಆಯೋಜಸಲಾಗುತ್ತಿದೆ. ಈ ಬಾರಿಯ ದಸರೆಯಲ್ಲಿ ಅರಮನೆಯ ಆಡಳಿತ ಮಂಡಳಿಯು ಛಾಯಾ ಚಿತ್ರ ಮತ್ತು ಬೊಂಬೆಗಳ ಪ್ರದರ್ಶನವನ್ನು ಏರ್ಪಡಿಸಿದೆ.

ಮೈಸೂರನ್ನು ಆಳಿದ ಯದುವಂಶದ ಎಲ್ಲ ಮಹಾರಾಜರ ಚಿತ್ರಗಳನ್ನ, ಮಹಾರಾಜರು ಬಳಸಿದ ಅಪರೂಪದ ವಸ್ತುಗಳ ಚಿತ್ರಗಳನ್ನ, ಅರಮನೆಯಲ್ಲಿರುವ ಬಹು ಹಿಂದಿನ ವಸ್ತುಗಳ ಚಿತ್ರಗಳನ್ನ, ನಾಲ್ವಡಿ ಕೃಷ್ಣರಾಜರ ಬಾಲ್ಯದ ಚಿತ್ರಗಳನ್ನ ಛಾಯಾ ಚಿತ್ರ ಪ್ರದರ್ಶನದಲ್ಲಿ ಇರಿಸಲಾಗಿದೆ.

ಶ್ರೀ ದೇವಿ ದಿವ್ಯ ದರ್ಶನ, ಅರಮನೆಯಲ್ಲಿ ದುರ್ಗೆಯ ಪೂಜೆ, ವಿಷ್ಣು ಲೀಲೆ, ಸ್ವಾತಂತ್ರೋತ್ಸವದ ಅಮೃತ ಮಹೋತ್ಸವದ ಸಂಭ್ರಮ, ಸಾಂಪ್ರದಾಯಿಕ ಬೊಂಬೆ ಪ್ರದರ್ಶನ ಎಂಬ ವಿಷಯಗಳ ಮಾದರಿಯಲ್ಲಿ ಬೊಂಬೆಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

**–ದೇವರಾಜ್ ವನಗೇರಿ**

# ನಾ ಕಂಡ ಮೈಸೂರು ದಸರಾ ವೈಭವ

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಾಡಹಬ್ಬ ದಸರಾ ಎಂದರೆ ಅದೇನೋ ವಿಶೇಷತೆ,ಸಡಗರ ನಾವಿನ್ಯತೆಯಿಂದ ಕೂಡಿ ಹೊಸ ಒಂದು ವಾತಾವರಣದ ನಿರ್ಮಾಣವನ್ನು ಕಾಣಬಹುದು. ಪ್ರತಿಯೊಂದು ರಸ್ತೆ ಅರಮನೆ, ಹೊಂಬಣ್ಣದ ಅಂಬಾವಿಲಾಸ ಎಲ್ಲವೂ ವಿದ್ಯುತ್ ದೀಪ ಅಲಂಕಾರ ಹಾಗೂ ಪುಷ್ಪ ಮೇಳದ ಪುಷ್ಪಗಳಿಂದ ಕಂಗೊಳಿಸುತ್ತಿವೆ.

ದಸರಾ ಚಲನಚಿತ್ರ ಕ್ರೀಡಾಕೂಟ ಗ್ರಾಮೀಣ ಕ್ರೀಡೆ, ಸಂಸ್ಕೃತಿಕ ಕಾರ್ಯಕ್ರಮಗಳನ್ನು ಸೇರಿ ನವ ರಾತ್ರಿಯ ೯ ದಿನಗಳನ್ನು ಹೊಸಬಗೆಯ ನಾವಿನ್ಯತೆಯಿಂದ ವಿಶೇಷವಾಗಿ ಆಚರಿಸಲಾಗುತ್ತದೆ.

ಸಾವಿರಾರು ಪ್ರೇಕ್ಷಕರ ಸಮ್ಮುಖದಲ್ಲಿ ವರ್ಣ ರಂಜಿತ ವೇದಿಕೆಯಲ್ಲಿ ವೈವಿಧ್ಯಮ ನೃತ್ಯ ಸಂಗೀತ ಕಾರ್ಯಕ್ರಮಗಳ ಮೂಲಕ ಕಂಗೊಳಿಸಿದ ಯುವ ಸಂಭ್ರಮ ಯುವ ದಸರಾ ಕಾರ್ಯಕ್ರಮಗಳು ಮೈಸೂರು ದಸರೆಯಲ್ಲಿ ಗರಿಗೆದರಿವೆ.

ಅರಮನೆ ಆವರಣ ಜಗನ್ಮೋಹನ ಅರಮನೆ ಚಿಕ್ಕ ಗಡಿಯಾರ ಪುರಭವನ ರಂಗಮಂದಿರಗಳಲ್ಲಿ ನಡೆಯಲಿರುವ ಸಂಸ್ಕೃತಿಕ ಸಡಗರವು ವಿದ್ಯುಕ್ತ ಆರಂಭ ಕಂಡಿವೆ. ವಿವಿಧ ಭಾಗದ ಕಲಾವಿದರಿಂದ ಪ್ರತಿಭೆಯ ಹೊನಲು ಸಹ ಹರಿದು ಬಂದಿದೆ. ದಸರಾ ಸಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಂಗೀತ ಕಲೆಗಳು ರಸಿಕರಿಗೆ ಒಂದೆಡೆ ರಸದೌತವನ್ನು ಉಣ ಬಡಿಸಿದರೆ ಇನ್ನೊಂದೆಡೆ ಅರಮನೆಯನ್ನು ಸುತ್ತುವರಿದ ಪುಷ್ಪ ಪ್ರದರ್ಶನ ನೋಡುಗರಿಗೆ ಮುದ ನೀಡುವಂತಿದೆ.

ಇನ್ನು ಪುಷ್ಪ ಮೇಳದ ಬಗ್ಗೆ ನೋಡುವುದಾದರೆ ರಾಷ್ಟ್ರಪತಿ ಭವನದ ದೊಂದಿಗೆ, ವರನಟ ರಾಜ್ ಕುಮಾರ್ ಮತ್ತು ಡಾಕ್ಟರ್ ಪುನೀತ್ ರಾಜಕುಮಾರ್ ಶಿಲ್ಪಗಳ ಜೊತೆ ಗಾಜಿನೂರಿನ ಮನೆಯನ್ನು ನಿರ್ಮಿಸಿರುವುದು ಅಚ್ಚರಿಯನ್ನ ಮೂಡಿಸುವಂತಿದೆ.

ಹಾಗೂ ಬಿಪಿನ್ ರಾವತ್, ಕಿತ್ತೂರಾಣಿ ಚೆನ್ನಮ್ಮ, ನಾಲ್ವಡಿ ಕೃಷ್ಣರಾಜ ಒಡೆಯರ್,ಜಂಬೂ ಸವಾರಿಯ ಮಾದರಿಗಳು ಹೂವಲ್ಲಿ ಅರಳಿರುವುದನ್ನು ಕಾಣಬಹುದು.

ಇನ್ನು ದಸರೇಯಲ್ಲಿ ಕಂಗೊಳಿಸುವ ಬೊಂಬೆ ಮನೆಗಳನ್ನ ಗಮನಿಸಿದರೆ ಕಳೆದ ಎರಡು ವರ್ಷಗಳಿಂದ ಕರೋನದ ಹಿನ್ನೆಲೆಯಲ್ಲಿ ಮರೆಯಾದ ಬೊಂಬೆಗಳು ಇಂದು ಮೈಸೂರಿನಲ್ಲಿ ನೂರಾರು ಮನೆಗಳಲ್ಲಿ ಬೊಂಬೆಯ ಪ್ರದರ್ಶನವನ್ನು ನೋಡಬಹುದು. ದಸರಾ ಬೊಂಬೆಗಳು ವಿಶೇಷವಾಗಿ ದೇವ ದೇವತೆಗಳ ಪುರಾಣಗಳ ಕಥೆಗಳೊಂದಿಗೆ ಬಾಲ್ಯದ ನೆನಪುಗಳ ಚಿತ್ರಣವನ್ನು ಬಿಚ್ಚಿಡುತ್ತದೆ.

ಕೆಲವು ಗೊಂಬೆಗಳು ಪಾಂಡುರಂಗ ವಿಠಲ, ಶಿವ ಪಾರ್ವತಿ, ಕೃಷ್ಣ ಲೀಲೆ, ಕಲ್ಪವೃಕ್ಷ,

ದಸರೆಯ ಅಂಗವಾಗಿ ಚಿತ್ರ ರಸಿಕರಿಗೆ ವಿವಿಧ ಭಾಷೆಯ ಸದಭಿರುಚಿಯನ್ನು ನೀಡಲು ದಸರಾ ಚಲನಚಿತ್ರೋತ್ಸವವು ವಿವಿಧ ರೀತಿಯ ಚಲನಚಿತ್ರಗಳ ಮೂಲಕ ಸ್ವದೇಶ ಹಾಗೂ ವಿದೇಶಗಳಲ್ಲಿನ ಸ್ಥಿತಿಗತಿಗಳು ಸಾಂಸ್ಕೃತಿಕ ಸಾಮಾಜಿಕ ವೈವಿಧ್ಯತೆಯನ್ನು ಕಟ್ಟಿಕೊಡುವ ದಯೋದ್ದೇಶವನ್ನು ಹೊತ್ತು ದಸರಾ ಚಲನಚಿತ್ರೋತ್ಸವವನ್ನು ಆಯೋಜಿಸಿದೆ.

ರೈತರಿಗೆ ಎಂದೇ ಗ್ರಾಮೀಣ ದಸರಾ ಪ್ರಾರಂಭಗೊಳಿಸಿರುವ ಹಿನ್ನೆಲೆಯಲ್ಲಿ ಕೆಸರುಗದ್ದೆ ಓಟ,ಒಂಟಿ ಕಾಲಿನ ಓಟ. ಗೋಣಿಚೀಲಗಳ ಓಟ ಸೇರಿ ಅನೇಕ ಸ್ಪರ್ಧೆಗಳು ಗ್ರಾಮೀಣ ಜನತೆಯಲ್ಲಿ ಸಂಚಲನ ಮೂಡಿಸಲು ಕಾರಣವಾಗಿವೆ.

**–ಭೀಮಸಿ ಎಮ್. ಕೆ**

# ಮಾನಸ ಗಂಗೋತ್ರಿ



# ದಸರಾ ವಿಶೇಷ ವರದಿಗಾರಿಕೆ

## “ಗಾಜಿನ ಮನೆಯಲ್ಲೊಂದು ಸಾವಯುವ ಕೃಷಿ ಮಳಿಗೆ”

**ಮೈಸೂರು;**ಕೃಷಿ ಉತ್ಪನ್ನ ಎನ್ನುವುದು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ ಪ್ರತಿಯೊಬ್ಬರ ಸರಳ ಜೀವನದ ಮುಖ್ಯ ಅಂಗವಾಗಿದೆ. ಕೃಷಿಯು ನಮ್ಮ ರಾಷ್ಟದ ಬೆನ್ನೆಲುಬು ಎಂದರೆ ತಪ್ಪಾಗಲಾರದು. ಒಬ್ಬ ರೈತ ಬೀಜವನ್ನು ಬಿತ್ತಿ ಅದನ್ನ ಪೋಷಿಸಿ ಫಲವನ್ನ ಗಳಿಸಬೇಕಾದರೆ ಅದೆಷ್ಟೋ ವರ್ಷಗಳ ತ್ಯಾಗ,ಪರಿಶ್ರಮ ಬೇಕಾಗುತ್ತದೆ. ಅದೇ ರೀತಿಯಲ್ಲಿ ಒಬ್ಬ ಯಶಸ್ವಿ ರೈತನ ಹಿಂದೆ ಬೆಳೆ ಬೆಳೆದು ಫಸಲನ್ನ ಪಡೆಯುವಷ್ಟು ಅನುಭವ ವವೂ ಅಷ್ಟೇ ಮುಖ್ಯವಾಗಿರುತ್ತದೆ.

ಈ ನಿಟ್ಟಿನಲ್ಲಿ ಮೈಸೂರಿನ ಗಾಜಿನ ಮನೆಯಲ್ಲಿ ಹಮ್ಮಿಕೊಂಡಿರುವ ಪುಷ್ಪ ಮೇಳದಲ್ಲಿ ಇಲ್ವಾಲ ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿಗ ಳಿಂದ ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 5ರ ವರೆಗೆ ಸಾವಯವ ಕೃಷಿಗೆ ಸಂಬಂಧಪಟ್ಟ ವ್ಯಾಪಾರ ಮಳಿಗೆಯನ್ನು ಇಡಲಾಗಿತ್ತು. ಗಿಡಗಳಿಗೆ ತಾಕುವ ರೋಗಗಳಿಂದ ರಕ್ಷಿಸಲು ಜೈವಿಕ ನಿಯಂತ್ರಣ ಏಜೆಂಟಗಳು ಕೊತ್ತಂಬರಿ, ಕಾಳು ಮೆಣಸು,ಸಾವಯವ ಗೊಬ್ಬರ ಹಾಗೂ ಮನೆಗೆ ಬೇಕಾದ ಹತ್ತು ತರಹ ತರಕಾರಿ ಬೀಜಗಳನ್ನು ಒಂದೇ ಪ್ಯಾಕೆಟ್ ನಲ್ಲಿ ಹೊಂದಿಸಿ ಕೃಷಿಗೆ ಸಂಬಂಧಪಟ್ಟ ಉತ್ಪನ್ನಗಳನ್ನು ಮತ್ತು ಬೇವು, ದಾಸವಾಳ ,ನುಗ್ಗೆಕಾಯಿ ಸೇರಿದಂತೆ ವಿವಿಧ ಎಲೆಗಳನ್ನು ಬಳಸಿ ಪೌಡರ್ ಮಿಶ್ರಣವನ್ನು ತಯಾರಿಸಿ ತಲೆಯ ಕೂದಲು ,ಮುಖದ ಮಾಸ್ಕ್ ಅಥವಾ ನೀರಿನೊಂದಿಗೆ ಸೇರಿಸಿ ಕುಡಿಯುವು ದರಿಂದ ತ್ವಚೆಗೆ ಒಳಿತಾಗುತ್ತದೆ ಎಂದು




ಈ ಪೌಡರ್ಗ್ಗಳನ್ನು ಇಲ್ಲಿ ಮಾರಾಟ ಮಾಡಲಾಯಿತು.

ದಾಸವಾಳ, ಬೇವು ಇನ್ನೂ ಹಲವಾರು ಹೂವುಗಳನ್ನ ಒಣಗಿಸಿ ರೆಸಿನ್ ಎಂಬ ರಾಸಾಯ ನಿಕದೊಂದಿಗೆ ಕೊಯ್ಲು ನಂತರದ ತಂತ್ರಜ್ಞಾನವನ್ನು ಬಳಸಿ ಕೊಂಡು ವಿವಿಧ ರೀತಿಯ ಅಲಂಕಾರಿಕ ವಸ್ತುಗಳು,ಪದಕಗಳು ಮತ್ತು ಕೀ ಬಂಚ್ ಗಳನ್ನು ವಿದ್ಯಾರ್ಥಿಗಳು ತಯಾರಿಸಿರುವುದು ನಿಜಕೂ ಗಮನಾರ್ಹ.

ಹೀಗೆ ಮುಂದುವರೆದಂತೆ ಪುಷ್ಪ ಕೃಷಿ, ಹೂವಿನ ಬೇಸಾಯವನ್ನು ಇಲ್ಲಿ ಗಮನಿಸಬಹುದಾಗಿದೆ. ಇಖೇವೇರಿಯ, ಬನ್ನಿ ಕಾರ್ ಒಪೆನ್ಸಿಯ, ಹವೋರ್ತಿಯ, ಫೌಕಾರಿಯ,ಕ್ರಾಶುಲ್ಲ, ಮಮ್ಮಿ ಲ್ಲಾರಿಯ, ಸಿಂಗೊನಿಯವ್,ಪೇಪೆರೋಮಿಯ, ಲಕ್ಕಿ ಬ್ಯಾಂಬೂ, ಫಿಟ್ಟೋನಿಯ, ಜಮಿಯ ಸೇರಿದಂತೆ ಹಲವಾರು ಗಿಡಗಳನ್ನು ಇಲ್ಲಿ ಕಾಣಬಹುದಾಗಿದೆ.

ಮನೆಯ ಆವರಣದ ಉದ್ಯಾನದ ಅಲಂಕಾರಕ್ಕಾಗಿ ಈ ಗಿಡಗಳನ್ನು ಬಳಸಬಹುದು. ಕ್ಯಾಲೆನ್ಶೋ ಎಂಬ ಗಿಡದಿಂದ ಕೆಂಪು ಅಥವಾ ಕೇಸರಿ ಬಣ್ಣದ ಹೂವು ಗಳನ್ನು ಬೆಳೆಯಬಹುದಾಗಿದೆ. ಆಗ್ಲೋನಿಮಸ್ ಎಂಬ ಜಾತಿಯ ಸಸ್ಯ ವರ್ಗವು ಲಿಪ್ಸ್ಟಿಕ್ ಮಾದರಿಯ ಗಿಡವಾಗಿದ್ದು ಇದರ ಎಲೆಯ ಅಂಚು ಕೆಂಪು ಬಣ್ಣದಿಂದ ಕೂಡಿರುತ್ತದೆ. ಇಂಗ್ಲಿಷ್ ಐವಿ ಎನ್ನುವ ಗಿಡವು ಅಲಂಕಾರಿಕ ಸಸ್ಯವಾಗಿದ್ದು ಇದನ್ನು ಬಾಲ್ಕನಿಯಲ್ಲಿ ಹಾಕುವುದರಿಂದ ಉದ್ಯಾನದ ಇನ್ನಷ್ಟು ರಂಗನ್ನು ಹೆಚ್ಚಿಸುತ್ತದೆ.

. ಈ ಕೃಷಿ ಮೇಳದಲ್ಲಿ ಮೊದಲ ಬಾರಿ ಈ ರೀತಿಯ ಸಾವಯುವ ಕೃಷಿ ಉತ್ಪನ್ನಗಳ ಮಳಿಗೆಯನ್ನು ಇಲ್ಲಿ ಹಾಕಿರುವುದು ಒಂದು ಒಳ್ಳೆಯ ವಿಚಾರವಾಗಿದ್ದು, ಒಬ್ಬ ಗ್ರಹಕನಿಗೆ ಉತ್ಪನ್ನಗಳ ಕುರಿತು ಅರಿವು ಮೂಡಿಸಿ, ಕೊಂಡುಕೊಳ್ಳುವುದಕ್ಕೆ ಬೇಕಾದ ಸಂಪೂರ್ಣ ಮಾಹಿತಿಯನ್ನು ನೀಡುವುದು ವಿದ್ಯಾರ್ಥಿಗಳಾದ ನಮ್ಮ ಜವಾಬ್ದಾರಿ ಎಂದು ತೋಟಗಾರಿಕೆ ಮಹಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಅಭಿಷೇಕ್ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದರು.

**–ದಿವ್ಯಶ್ರೀ.ಎಚ್.ಎಂ**

## ದಸರಾದಲ್ಲಿ ವೈಭವದ ಫಲಪುಷ್ಪ ಪ್ರದರ್ಶನ

**ಮೈಸೂರು;**ನಾಡಹಬ್ಬ ಮೈಸೂರು ದಸರಾ ಎಂದರೆ ವಿಶ್ವವೇ ತಿರುಗಿ ನೋಡುವಂತಹ ಭವ್ಯೋತ್ಸವ. ಯದುವಂಶದ ಅಂಬವಿಲಾಸ ಅರಮನೆ, ಚಾಮುಂಡಿ ಬೆಟ್ಟ , ಜಗನ್ಮೋಹನ ಅರಮನೆ, ಲಲಿತ ಮಹಲ್, ಕರ್ನಾಟಕದ ಕಿರೀಟವೇ ಆಗಿರುವ ಚಿನ್ನದ ಅಂಬಾರಿ. ಎಲ್ಲವೂ ಮೈಸೂರಿಗೆ ಹಿರಿಮೆಯನ್ನು ಹೆಚ್ಚಿಸಿವೆ ಮೈಸೂರಿಗೆ ಅರಮನೆಗಳ ನಗರ ಎಂಬ ಹೆಸರನ್ನು ಹೊರತುಪಡಿಸಿ ಮೈಸೂರಿಗೆ ಉದ್ಯಾನನಗರ ಎಂಬ ಬಿರುದು ಬರಲು ಮುಖ್ಯ ಕಾರಣವೇ ಅರಮನೆ ನಗರಿ ಮೈಸೂರಿನ ಉದ್ದಗಲಕ್ಕೂ ಹರಡಿರುವ ಉದ್ಯಾನವನಗಳು.



**ಮೈಸೂರು ಉಸ್ತುವಾರಿ ಸಚಿವರಾದ ಎಸ್. ಟಿ. ಸೋಮಶೇಖರ್‌ರವರು ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನವನ್ನೂ ಉದ್ಘಾಟಿಸಿದರು.**

ಮೈಸೂರಿನ ನಿತ್ಯಹರಿದ್ವರ್ಣ ವಿವಿಧ ಉದ್ಯಾನವನಗಳಲ್ಲಿ ಸದಾ ಅರಳುವ ಫಲಪುಷ್ಪಗಳು ದಸರಾ ಹೊತ್ತಿಗೆ ತಮ್ಮನ್ನು ಪ್ರದರ್ಶಿಸಿಕೊಂಡು ತಮ್ಮ ಸುಂದರತೆಯನ್ನು ಹೆಚ್ಚಿಸಿಕೊಳ್ಳುತ್ತವೆ.

ಇಂತಹ ಪ್ರದರ್ಶನ ಕಾರ್ಯಕ್ರಮದ ಭವ್ಯ ವೇದಿಕೆಯೇ ನಮ್ಮ ಮೈಸೂರು ದಸರಾ.ಈಗಾಗಲೇ ನಾಡಹಬ್ಬ ದಸರಾಗೆ ಚಾಲನೆ ಸಿಕ್ಕಿದ್ದು ನವರಾತ್ರಿಯ ಆರಂಭದಲ್ಲಿಯೇ ಕಾರ್ಯಕ್ರಮಗಳು ಉದ್ಘಾಟನೆಗೊಂಡವು. .

ದಸರಾದ ಆಕರ್ಷಣೆಯಾದ ಫಲಪುಷ್ಪ ಪ್ರದರ್ಶನವು ನಗರದ ಕುಪ್ಪಣ್ಣ ಪಾರ್ಕ್ ಆವರಣದಲ್ಲಿ ಮೈಸೂರು ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ರವರಿಂದ ಉದ್ಘಾಟನೆಗೊಂಡಿತು. ದಿನಾಂಕ 26–09–2022 ರಿಂದ 05–10–2022 ರವರೆಗೆ ಪ್ರವಾಸಿಗರನ್ನು ಆಕರ್ಷಿಸಲು ಸಜ್ಜಾಗಿದ್ದು.

ಈ ಫಲಪುಷ್ಪ ಪ್ರದರ್ಶನವು ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆಯೂ ಹೌದು. ವಿಭಿನ್ನವಾದ ಕುಸುಮಗಳನ್ನು ಪೋಷಿಸುವಲ್ಲಿ ನಿರತವಾಗಿದ್ದ ತೋಟಗಾರಿಕೆ ಇಲಾಖೆ ಜಿಲ್ಲಾ ಪಂಚಾಯಿತಿ ಮೈಸೂರು ಮತ್ತು ಜಿಲ್ಲಾ ತೋಟಗಾರಿಕೆ ಸಂಘವು ಜನರ ಧನಾತ್ಮಕ ಅಭಿಪ್ರಾಯಗಳಿಗೆ ಭಾಜನ ವಾಗುತ್ತಿದೆ.ಹಾಗೆ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಈ ಬಾರಿಯ ಫಲ ಪುಷ್ಪ ಪ್ರದರ್ಶನವ ವಿವಿಧ ವಿಶೇಷತೆಗಳಿಂದ ಕೂಡಿದೆ ಈ ಬಾರಿಯ ಫಲ ಪುಷ್ಪ ಪ್ರದರ್ಶನದಲ್ಲಿ ಡಾ. ಪುನೀತ್ ರಾಜಕುಮಾರ್ ರವರ ಪ್ರತಿಮೆಯನ್ನು ವಿವಿಧ ಬಗೆಯ ಹೂಗಳಿಂದ ನಿರ್ಮಿಸಲಾಗಿದೆ.

ಹಾಗೆಯೇ ದೆಹಲಿಯ ಕೆಂಪು ಕೆಂಪುಕೋಟೆಯನ್ನು ಹಲವು ಬಗೆಯ ವರ್ಣ ರಂಜಿತ ಫಲ ಪುಷ್ಪಗಳಿಂದ ಸ್ಥಾಪಿಸಲಾಗಿದೆ. ವಿವಿಧ ಬಗೆಯ ಹೂಗಳು ಹಾಗೂ ಹಲವು ಬಗೆಯ ಹಣ್ಣುಗಳಿಂದ ವಿವಿಧ ಕಲಾಕೃತಿ ರಚಿಸಿ ನೋಡುಗರ ಕಣ್ಮನ ಸೆಳೆಯುವಂತೆ ಮಾಡಲಾಗಿದೆ. ಸಹಸ್ರಾರು ಸಂಖ್ಯೆಯಲ್ಲಿ ಪ್ರವಾಸಿಗರು ನಮ್ಮ ಮೈಸೂರಿಗೆ 'ಆಗಮಿಸಿ ಪುಷ್ಪಮೇಳದ ರಂಗಿನ ಸೌಂದರ್ಯವನ್ನು ಸವಿಯುತ್ತಿದ್ದಾರೆ.

**–ಮಹಾಶಾಂತೇಶ್**

## ಮೆರವಣಿಗೆಗೆ ಮೆರಗು ನೀಡಿದ ಗಾರುಡಿ ಗೊಂಬೆ

**ಮೈಸೂರು;**ಈ ಸಲದ ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ' ಸರ್ಕಾರದ ಪ್ರಗತಿ ಯನ್ನು ಸಾರುವ ವಿವಿಧ ಜಿಲ್ಲೆಗಳ ವೈವಿಧ್ಯತೆ ತುಂಬಿದ ಹಾಗೂ ವಿವಿಧ ಇಲಾಖೆಗಳ ಒಟ್ಟು 47 ಸ್ತಬ್ಧ ಚಿತ್ರಗಳು ಪ್ರದರ್ಶನ ನೀಡಿದವು. ಕಲಾ ವೈವಿಧ್ಯತೆಯ ಪ್ರಕಾರಗಳನ್ನುಹೊಂದಿರುವ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿ ಸಿದ್ದವು. ಸ್ತಬ್ಧ ಚಿತ್ರಗಳು ಈ ಸಲದ ದಸರಾ ಮೆರವಣಿಗೆಗೆ ಮೆರಗನ್ನು ಹೆಚ್ಚಿಸಿದವು.

47 ಸ್ತಬ್ಧ ಚಿತ್ರಗಳಲ್ಲಿ 'ಗಾರುಡಿ ಗೊಂಬೆ' ಸ್ತಬ್ಧ ಚಿತ್ರವು ವಿಭಿನ್ನವಾಗಿತ್ತು. ಗಾರುಡಿ ಗೊಂಬೆ ದಕ್ಷಿಣ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಪ್ರಚಲಿತವಿದೆ. ಮಲೆನಾಡಿನಲ್ಲಿ ಇದನ್ನು ತಟೇರಾಯನ ಕುಣಿತ ಎಂದು ಹೇಳುತ್ತಾರೆ. ಶುದ್ಧ ಮನರಂಜನೆಯ ಕಲೆ ಗಾರುಡಿ ಗೊಂಬೆ ಕುಣಿತ ದೊಡ್ಡ ಆಕಾರದ ಒಂದು ಗಂಡು ಮತ್ತು ಒಂದು ಹೆಣ್ಣಿನ ಗೊಂಬೆಗಳನ್ನು ಕುಣಿಸುವುದೇ ಗಾರುಡಿ ಗೊಂಬೆ ಕುಣಿತ.

ಗಾರುಡಿ ಗೊಂಬೆಯನ್ನು ಹತ್ತು ಹದಿನೈದು ಅಡಿ ಎತ್ತರವಿರುವ ಬಿ ದಿರಿನ ತಡಿಕೆಗಳಿಂದ ಮಾಡಿರುತ್ತಾರೆ. ಅದಕ್ಕೆ ಹಗುರವಾದ ಮರ ದಿಂದ ಮಾಡಿದ ತಲೆ ಹಾಗೂ ಪುಂಗಿಯನ್ನು ಇದಕ್ಕೆ ‌ಅಳವಡಿಸಿರುತ್ತಾರೆ.



ಇದು ಗಂಡು ಗೊಂಬ: ಇದಕ್ಕೆ ಪೇಟ,ಅಂಗಿ ತೊಡಿಸಿ ಕೆಳಭಾಗಕ್ಕೆ ಪಂಚೆಯಂತೆ ಒಂದು ಬಟ್ಟೆ ಸುತ್ತಿರುತ್ತಾರೆ. ಹೆಣ್ಣು ಗೊಂಬೆಗೆ ರವಿಕೆ ತೊಡಿಸಿ ಕೆಳಭಾಗಕ್ಕೆ ಉದ್ದನೆಯ ಲಂಗ ಇಳಿಬಿಟ್ಟಿರುತ್ತಾರೆ. ಗೊಂಬೆಗಳನ್ನು ಹೊರುವ ಕಲಾವಿದರು ತಮಟೆ, ಡೋಲು, ವಾಲಗ ಮೊದಲಾದ ಹಿಮೇಳದ ವಾದ್ಯಗಳ ಸದ್ದಿಗೆ ತಕ್ಕಂತೆ ಹಿಂದಕ್ಕೆ ವಾಲಾಡುತ್ತ ಕುಣಿಯುತ್ತಾರೆ. ಗೊಂಬೆಗಳ ಎದೆ ಭಾಗದಲ್ಲಿ ಅಥವಾ ಸೊಂಟದ ಮಧ್ಯಭಾಗದಲ್ಲಿ ಸಣ್ಣ ಕಿಂಡಿ ಇದು ಇದರಿಂದ ಹೊತ್ತು ಕುಣಿಯುವವರು ಹೊರಗೆ ನೋಡುತ್ತಾ ಕುಣಿಸುತ್ತಾರೆ .ಇತ್ತೀಚಿಗೆ ಪೌರಾಣಿಕ ಹಿನ್ನೆಲೆಯ ಗೊಂಬೆಗಳು ಬಳಕೆಯಲ್ಲಿವೆ ಹಾಗೂ ಮೆರವಣಿಗೆಯಲ್ಲಿ ಎದ್ದು ಕಾಣುವುದರಿಂದ ಆ ಬಾಲ್ಯ ವೃದ್ಧರಾದಿಯಾಗಿ ಕಣ್ಣಿಗೆ ಆಕರ್ಷಣೆಯಾಗಿ ಕಾಣುತ್ತದೆ.

**–ದಿವ್ಯ.ಎಸ್.**

## "ಹಳೆ ಮೈಸೂರಿನ ಬೊಂಬೆ ಹಬ್ಬ."

**ಮೈಸೂರು;**ನಾಡಹಬ್ಬ ಮೈಸೂರು ದಸರಾ ಬಂತೆಂದರೆ ಎಲ್ಲರಿಗೂ ನೆನಪಾಗುವುದು ಅಲ್ಲಿ ಆಚರಿಸುವಂತಹ ಪಾರಂಪರಿಕ ಆಚರಣೆಗಳು ಅದರಲ್ಲಿ ಮಹತ್ವವಾದ ಸ್ಥಾನ ಪಡೆದಿರುವುದು ಬೊಂಬೆ ಹಬ್ಬ.

ಪ್ರೀತಿಗಾಗಿ ಬೊಂಬೆ ಕೊಳ್ಳುವುದು ಸಾಮಾನ್ಯ, ಆದರೆ ಬೊಂಬೆ ಮೂಲಕ ಭಕ್ತಿ ತೋರಿ ನೀತಿ ಸಾರುವುದು ವಿಶೇಷ ಎನ್ನುವ ಮಾತಿನೊರಗೆ ಪುರಾಣ ಕಥೆಗಳ ವೈಭವವನ್ನು ತೋರಿಸುವ ಬೊಂಬೆಗಳ ಆಕರ್ಷಣ ಒಂದು ಕಡೆಯಾದರೆ, ಸಾಂಸ್ಕೃತಿಕ ನಗರಿ ಎಂದೇ ಖ್ಯಾತಿಯನ್ನು ಪಡೆದಿರುವ ಮೈಸೂರಿನ ಇತಿಹಾಸವನ್ನು ತಿಳಿಸುವ ಬೊಂಬೆಗಳ ಮತ್ತೊಂದೆಡೆ.

ಕಂಡದ್ದಕ್ಕೆಲ್ಲ ಕಣ್ಣು,ಕಥೆಕಟ್ಟಿ ಕೈ ಮುಗಿಯುವವರು ನಾವು ಮಹಾದಂಶದ ಬೊಂಬೆ ಅವತಾರ ರೂಪಿಗಳ ಪೂಜಾಅನುಷ್ಠಾನ. ಈ ಸಂಪ್ರದಾಯ



ಇದರಲ್ಲಿ ಅಡಗಿರುವ ವಿನಂಬ್ರತೆ, ಭಕ್ತಿ, ಧನಾತ್ಮಕ ಚಿಂತನೆಗಳು ಸುಮಾರು ನೂರಾರು ಬೊಂಬೆ ಹಬ್ಬದ ಮೂಲ ಸೂತ್ರವಾದ 'ಧನಾತ್ಮಕ ಚಿಂತನೆಯನ್ನು' ವಿವಿಧ ರೀತಿ ಪ್ರಧಾನ ರೂಪದಲ್ಲಿ ಬೊಂಬೆಮನೆ ಬಿಂಬಿಸುತ್ತಾ ಬಂದಿದೆ.

ರಾಜ ರಾಣಿ, ಮದುವೆ ಸೆಟ್ಟು, ಊಟದ ಸೆಟ್ಟು, ಗುಡಿ ಗೋಪುರ, ಅರಮನೆ ಸೈನಿಕ, ಆಕಳು ಕರು, ಹೇಗೆ ಮನೆಯಲ್ಲಿರುವ ಎಲ್ಲ ಬೊಂಬೆಗಳನ್ನು ಅವುಗಳ ಮುಂದೆ ಕಳಶ ಸ್ಥಾಪಿಸಿ ದಸರೆಯ ಹತ್ತು ದಿನ ಅದರ ಉಪಾಸನೆ,ಇದು ಹಳೆ ಮೈಸೂರಿನ ಬೊಂಬೆ ಹಬ್ಬ.

**–ಅನುಶ್ರೀ**

# ಕಲಾಮಂದಿರದಲ್ಲಿ ದಸರಾ ಚಲನಚಿತ್ರೋತ್ಸವಕ್ಕೆ ಚಾಲನೆ



ಮೈಸೂರಿನ ಕಲಾ ಮಂದಿರದಲ್ಲಿ 2022ನೇ ಸಾಲಿನ ಚಲನ ಚಿತ್ರೋತ್ಸವದ ಉದ್ಘಾಟನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ಮೈಸೂರು ಉಸ್ತುವಾರಿ ಸಚಿವರಾದ ಎಸ್ ಟಿ ಸೋಮಶೇಖರ್ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದ್ದರು. ನಂತರ ಚಲನಚಿತ್ರದ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿರುವ ಪುಸ್ತಕವನ್ನು ಅತಿಥಿ ಗಣೇರಿನಿಂದ ಬಿಡುಗಡೆ ಮಾಡಲಾಯಿತು. ಬಳಿಕ ಮಾತನಾಡಿದ ಎಸ್ ಟಿ ಸೋಮಶೇಖರ್ ಅವರು ಸೆಪ್ಟೆಂಬರ್ 27ರಿಂದ ಅಕ್ಟೋಬರ್ ಮೂರರವರೆಗೆ ನಡೆಯುವ ಚಿತ್ರ ಪ್ರದರ್ಶನದ ಕುರಿತು ಮಾತನಾಡಿ ಚಲನಚಿತ್ರೋತ್ಸವದ ಒಂದು ದಿನವನ್ನು ಜಡಿ.ಪುನೀತ್ ರಾಜಕುಮಾರ್ ರವರನ್ನು ಸ್ಮರಿಸುವ ಸಲುವಾಗಿ ಅವರ ಚಿತ್ರಗಳನ್ನು ಪ್ರದರ್ಶಿಸುತಿದ್ದೇವೆ ಎಂದರು.

ಮತ್ತೋರ್ವ ಅತಿಥಿಯಾಗಿ ಆಗಮಿಸಿದ ಕನ್ನಡ ಚಿತ್ರರಂಗದ ಖ್ಯಾತ ನಟಿ ಅನುಪ್ರಭಾಕರ್ ಅವರು ಮೈಸೂರು ದಸರಾ ನೋಡುವುದೇ ಒಂದು ಸಡಗ.ರ ಕನ್ನಡಿಗರು ಇರುವ ತನಕ ಅಪ್ಪು ಅಜರಾಮರ. ನಟಸಾರ್ವಭೌಮ ಪುನೀತ್ ರಾಜಕುಮಾರ್ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಂಚಾರಿ ವಿಜಯ್ ಅವರ ನೆನಪುಗಳು ಎಂದೆಂದಿಗೂ ಶಾಶ್ವತ .ಅವರು ಅಭಿನಯಿಸಿದ ಚಿತ್ರಗಳನ್ನು ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸ್ತಾ ಇರೋದು ಹೆಮ್ಮೆಯ ವಿಚಾರ ಎಂದರು.

ನಂತರ ಚಲನಚಿತ್ರ ನಟಿ ಕಾವ್ಯಶೆಟ್ಟಿ ಮಾತನಾಡಿ ಮೊದಲ ಬಾರಿ ಚಲನಚಿತ್ರೋತದ ಉದ್ಘಾಟನೆಗೆ ಆಗಮಿಸಿರುವುದು ಸಂತಸದ ವಿಷಯ. ಚಲನಚಿತ್ರೋತ್ಸವದಲ್ಲಿ ಆಯ್ಕೆಯಾಗಿರುವ ಚಿತ್ರಗಳು ಒಳ್ಳೆಯ ಸಂದೇಶವನ್ನು ನೀಡುತ್ತದೆ.ಆದ್ದರಿಂದ ಚಿತ್ರ ಪ್ರದರ್ಶನಗಳನ್ನು ನೋಡಿ ಎಂದು ತಿಳಿಸಿದರು.

ನಂತರ ಚಲನಚಿತ್ರದ ಖ್ಯಾತ ನಟಿಯಾದ ಅಮೃತ ಅಯ್ಯಂಗಾರ್ ರವರು ಕರೋನ ಮಹಾಮಾರಿಯ ನಂತರ ದಸರವನ್ನ ಮತ್ತೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಹಾಗು ಕನ್ನಡ ಚಿತ್ರಗಳನ್ನು ಚಿತ್ರಮಂದಿರಗಳಲ್ಲಿ ಹೋಗಿ ನೋಡಿ , ಕನ್ನಡದ ಅಭಿಮಾನ ಸದಾ ನಿಮ್ಮಲಿರಲಿ ಅಂದರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ನಾಗೇಂದ್ರ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಕಾರ್ಯಕ್ರಮದ ಉದ್ಘಾಟನೆಗೆ ಖ್ಯಾತ ಚಲನಚಿತ್ರ ನಟ ಶಿವರಾಜ್ ಕುಮಾರ್‌ರವರು ಕಾರಣಾಂತರಗಳಿಂದ ಬರಲು ಸಾಧ್ಯವಾಗಲಿಲ್ಲ ಹಾಗೂ ಬಾಲ ನಟನಾಗಿ ಅಭಿನಯಿಸಿ ಹಲವಾರು ಪ್ರಶಸ್ತಿಯನ್ನು ಪಡೆದು ಖ್ಯಾತಿಯ ಚಲನಚಿತ್ರ ನಟನಾಗಿ ಹೊರಹೊಮ್ಮಿತ ಎಲ್ಲರ ಪ್ರೀತಿಯನ್ನು ಗಳಿಸಿದ ಅಪ್ಪು ಇಂದು ನಮ್ಮೊಂದಿಗೆ ಇಲ್ಲದೆ ಇರುವುದು ಬೇಸರದ ಸಂಗತಿ ಆದರೆ ಅವರ ಸ್ಮರಣೆಗಾಗಿ ಆಯೋಜಿಸಿರುವ ಅಪ್ಪು ಉತ್ಸವ ನಿಜಕ್ಕೂ ಅರ್ಥಪೂರ್ಣ ವಾದದ್ದು ಎಂದರು.

ನಂತರ ಕಾರ್ಯಕ್ರಮದ ಕೊನೆಯಲ್ಲಿ ರಾಷ್ಟ್ರ ಪ್ರಶಸ್ತಿ ಪಡೆದ ತಲೆತಂಡ ಚಿತ್ರದ ನಿರ್ದೇಶಕರಾದ ಪ್ರವೀಣ್ ಕೃಪಾಕರ್ ಅವರಿಗೆ ಈ ಕಾರ್ಯಕ್ರಮದಲ್ಲಿ ಸನ್ಮಾನವನ್ನು ಮಾಡಿ ಗೌರವಿಸಲಾಯಿತು.

- ದಿವ್ಯಶ್ರೀ.ಎಚ್.ಎಮ್.

# ಅರಮನೆಯಲ್ಲಿ ಪುರಾತನ ಕಾಲದ ಆಯುಧಗಳಿಗೆ ಪೂಜೆ



ಮೈಸೂರು ದಸರಾ ಹಿನ್ನೆಲೆಯಲ್ಲಿ ನವರಾತ್ರಿಯ ಆರಂಭದಲ್ಲಿಯೇ ಮೈಸೂರಿ ನಾದ್ಯಂತವಿವಿಧ ಕಾರ್ಯಕ್ರಮಗಳು ಉದ್ಘಾಟನೆಗೊಂಡು ಅದ್ಭುತ ಪ್ರದರ್ಶನ ನೀಡುವಲ್ಲಿ ಮುಂದಾದವು. ಅದೇ ರೀತಿಯಾಗಿ ದಸರಾ ಹಿಂದಿನ ದಿನ ಅಂಬಾವಿಲಾಸ ಅರಮನೆಯಲ್ಲಿ ಪುರಾತನ ಕಾಲದ ಆಯುಧಗಳಿಗೆ ಪೂಜೆ ಮಾಡಲ ಾಗುತ್ತೆ.ಆಯುಧಪೂಜೆ ಯೂ ಇಡೀ ಕರ್ನಾಟಕದಾದ್ಯಂತ ಎಲ್ಲಾಕಡೆಯೂ ಆಚರಿಸುವಂತಹ ಹಬ್ಬ ಎಂದು ಹೇಳಬಹುದು.

ಪ್ರತಿಯೊಬ್ಬರು ತಮ್ಮ ಮನೆಯಲ್ಲಿರುವ ಆಯುಧಗಳು ಹಾಗೂ ತಮ್ಮ ವಾಹನಗಳನ್ನ ಸಿಂಗರಿಸಿ ಪೂಜೆ ಮಾಡುವಂತಹದ್ದು ಇಡೀ ರಾಜ್ಯದಲ್ಲಿ ನಡೆಯುವ ಬಹುದೊಡ್ಡ ಹಬ್ಬ.ಅದೇ ರೀತಿಯಾಗಿ ಆಯುಧಪೂಜೆಯು ಮೈಸೂರಿನಾದ್ಯಂತ ಸಾಂಗವಾಗಿ ನೆರವೇರಿತು.ವಿಶೇಷ ಏನಂದರೆ , ವರ್ಷದ 365 ದಿನಗಳೂ ಮೈಸೂರನ್ನು ಸ್ವಚ್ಛವಾಗಿಡಲಿಕ್ಕೆ ಶ್ರಮವಹಿಸುವ ಪ್ರತಿಯೊಂದು ವಾಹನಗಳನ್ನೂ ಸಿಂಗರಿಸಿ ಸಾಂಪ್ರದಾಯಿಕವಾಗಿ ಪೂಜೆ ಮಾಡಲಾಯಿತು .

ಇಡೀ ಮೈಸೂರನ್ನು ಸ್ವಚ್ಛ ಮಾಡಿ ಮೈಸೂರಿಗರಿಗೆ ಶಿಸ್ತು ಬದ್ಧ ಜೀವನ ನಡೆಸಲಿಕ್ಕೆ ಅನುವು ಮಾಡಿಕೊಡುವ ಮೈಸೂರು ಸಿಟಿ ಕಾರ್ಪೋರೇಶನ್ ತಮ್ಮ ಸ್ವಚ್ಛತಾ ಕಾರ್ಯಕ್ಕೆ ಬಳಸುವ ವಾಹನಗಳನ್ನು ಸ್ವಚ್ಛಗೊಳಿಸಿ ಸಿಂಗರಿಸಿ ಕುಕ್ಕರಹಳ್ಳಿ ಕೆರೆಯ ಮಗ್ಗುಲಿನಲ್ಲಿರುವ ಆವರಣದಲ್ಲಿ ಬಹಳ ಶಿಸ್ತಿನಿಂದ ಪಾರ್ಕ್ ಮಾಡಿದ್ದರು

–ದಿವ್ಯ.ಎಸ್.

# ಪಾರಂಪರಿಕ ಸೈಕಲ್ ಸವಾರಿಗೆ ಚಲಾನೆ ನೀಡಿದ ಎಸ್ ಟಿ ಎಸ್



**ಪಂಚೆ ಯುಟ್ಟುಕೊಂಡೇ ಸೈಕಲ್ ತುಳಿದ ಸೈಕಲ್ ಸವಾರಿಗೆ ಚಲಾನೆ ನೀಡಿದ ಸಚಿವ ಎಸ್‌ಟಿ ಸೋಮಶೇಖರ್**

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಪುರಭವನ (ಟೌನ್ ಹಾಲ್) ಎದುರು ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯೋಜಿಸಿದ್ದ "ಪಾರಂಪರಿಕ ಸೈಕಲ್ ಸವಾರಿ(ಟ್ರಿನ್-ಟ್ರಿನ್) ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮ ಶೇಖರ್ ಚಾಲನೆ ನೀಡಿದರು.ಅದಲ್ಲದೇ ಪಂಚೆಯುಟ್ಟುಕೊಂಡೇ ಸೈಕಲ್ ತುಳಿದ ಸಚಿವ ಎಸ್‌ಟಿ ಸೋಮಶೇಖರ್ ಎಲ್ಲರ ಗಮನಸೆಳೆದರು. ನಾಡಹಬ್ಬ ದಸರಾ ಅಂಗವಾಗಿ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯವರು ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ವೀಕ್ಷಣೆಗಾಗಿ ಸೈಕಲ್ ಸವಾರಿಯನ್ನು ಏರ್ಪಡಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಯುವಕರು, ಹಿರಿಯರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಸೈಕಲ್ ಸವಾರಿಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ ಎಂದು ಇದೇವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಎಸ್ ತಿಳಿಸಿದರು.ಸೈಕಲ್ ಸವಾರಿಯಲ್ಲಿ 60 ವರ್ಷದ ಒಳಗಿನ ಸಾರ್ವಜನಿಕರು ಹಾಗೂ15 ವರ್ಷ ಮೇಲ್ಪಟ್ಟ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮೈಸೂರು, ಮಂಡ್ಯ, ಕೊಡಗು,ಸೇರಿದಂತೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ನೂರಕ್ಕೂ ಹೆಚ್ಚು ಮಂದಿ ಭಾಗವಹಿ ಸಿದ್ದರುಶಾಸಕಎಲ್. ನಾಗೇಂದ್ರ, ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು .

ರಂಜಿತ ರೇವಣ್ಣ

# ದಸರಾ ಅಂಗವಾಗಿ ಪಾರಂಪರಿಕ ನಡಿಗೆ



**ಮೈಸೂರು–** ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಪಾರಂಪರಿಕ ನಡಿಗೆ ಕಾರ್ಯಕ್ರಮ ಆರಂಭವಾಗಿದೆ.ಮೈಸೂರಿನ ಪುರಭವನದಿಂದ ಪಾರಂಪರಿಕ ನಡಿಗೆ ಆರಂಭವಾಗಿ, ಮೈಸೂರು ನಗರದ ಪರಂಪರೆಯ ಹಾಗೂ ಕಟ್ಟಡಗಳ ಬಗ್ಗೆ ಮಾಹಿತಿ ನೀಡಲಾಯಿತು.ನಡಿಗೆಯಲ್ಲಿ ನಗರದ ನಾನಾ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರೂ.ಪುರಾತತ್ವ ತಜ್ಞ ಪ್ರೊ. ಎನ್.ಎಸ್ ರಂಗರಾಜು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.ಕಾರ್ಯಕ್ರಮಕ್ಕೆ ಶಾಸಕ ಎಲ್ ನಾಗೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು 2022ರ ದಸರಾದ ಪಾರಂಪರಿಕ ನಡಿಗೆಯನ್ನು ಪ್ರತಿವರ್ಷದಂತೆ ಈ ವರ್ಷವೂ ಕೂಡ ಪ್ರಾರಂಭ ಮಾಡಿದ್ದು ಪುರಾತತ್ವ ವಿಭಾಗದ ಸಮಿತಿಯ ಅಧ್ಯಕ್ಷರಾಗಿರುವ ದೇವರಾಜ ಅವರು ಮತ್ತು ಎಲ್ಲ ಕಾಲೇಜಿನ ವಿದ್ಯಾರ್ಥಿಗಳು ಬಂದಿದ್ದಾರೆ. ಎಲ್ಲರೂ ಒಟ್ಟಾಗಿ ಸೇರಿ ಮೈಸೂರು ಪಾರಂಪರಿಕ ಕಟ್ಟಡದ ಬಗ್ಗೆ ನಡಿಗೆ ಮೂಲಕ ಪರಿಚಯಿಸುವ ಕೆಲಸವನ್ನು ಮಾಡಲಾಗುತ್ತಿದೆ. ಸರ್ಕಾರ ಪ್ರತಿವರ್ಷವೂ ದಸರಾ ವೇಳೆ ಈ ಕಾರ್ಯಕ್ರಮವನ್ನು ಆಯೋಜಿಸುತ್ತದೆ. ಸಂತೋಷದಿಂದ ಭಾಗವಹಿಸಿದ್ದೇನೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಜೊತೆ ಪಾರಂಪರಿಕ ನಡಿಗೆಯಲ್ಲಿ ಭಾಗಿಯಾಗಿದರು. ಪುರಭವನದಿಂದ ಆರಂಭವಾದ ಪಾರಂಪರಿಕ ನಡಿಗೆ ದೊಡ್ಡಗಡಿಯಾರ, 10 ನೇ ಚಾಮರಾಜ ಒಡೆಯರ್ ವೃತ್ತ, ಅರಮನೆ, ಕೆ.ಆರ್.ಸರ್ಕಲ್, ಚಿಕ್ಕಗಡಿಯಾರ, ದೇವರಾಜ ಮಾರುಕಟ್ಟೆ, ಕೆ.ಆರ್. ಆಸ್ಪತ್ರೆ, ಮೆಡಿಕಲ್ ಕಾಲೇಜು ವರೆಗೆ ಸಾಗಿಬಂತು. -

ದಿವ್ಯಶ್ರೀ.ಎಚ್.ಎಮ್.

# ಮತ್ತೆರಡು ದಿನ ದಸರಾ ದೀಪಾಲಂಕಾರ ವಿಸ್ತರಣೆ

ಮೈಸೂರಿನ ಹೃದಯಭಾಗ ಹಾಗೂ ಪ್ರಮುಖ ರಸ್ತೆಗಳ ವಿದ್ಯುತ್ ದೀಪಾಲಂಕಾರವನ್ನು ಮತ್ತೆರಡು ದಿನ ವಿಸ್ತರಿಸಲಾಗಿದ್ದು, ಅ.12ರ ವರೆಗೆ ಬೆಳಕಿನ ಸೊಬಗನ್ನು ಕಣ್ತುಂಬಿ ಕೊಳ್ಳಬಹುದಾಗಿದೆ. ದಸರಾ ದೀಪಾ ಲಂಕಾರದ ಅವಧಿಯನ್ನು ವಿಜಯದಶಮಿವರೆಗೆ ನಿಗದಿಪಡಿಸಲಾಗಿತ್ತಾದರೂ ಉದ್ಯಮಿಗಳು, ಸಾರ್ವಜನಿಕರ ಅಪೇಕ್ಷೆ ಮೇರೆಗೆ ಇಂದಿನವರೆಗೆ(ಅ.10) ವಿಸ್ತರಿಸಲಾಗಿತ್ತು. ಆದರೆ ಮತ್ತಷ್ಟು ದಿನ ದೀಪಾಲಂಕಾರ ಉಳಿಸಿಕೊಳ್ಳಬೇಕೆಂಬುದು ಜನಪ್ರತಿ ನಿಧಿಗಳು, ಸಾರ್ವಜನಿಕರು, ವ್ಯಾಪಾರಿಗಳ ಒತ್ತಾಸೆಯಾಗಿರುವ ಕಾರಣ ಹೆಚ್ಚುವರಿ ಆರ್ಥಿಕ ಹೊರೆಯಾ ದರೂ ನಗರದ ಹೃದಯ ಭಾಗ ಹಾಗೂ ಮುಖ್ಯರಸ್ತೆಗಳಲ್ಲಿ ಅ.12ರವರೆಗೆ ದೀಪಾಲಂಕಾರ ಅವಧಿ ವಿಸ್ತರಿಸಲಾಗಿದೆ ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಹಾಗೂ ದಸರಾ ವಿದ್ಯುತ್ ದೀಪಾಲಂಕಾರ ಉಪಸಮಿತಿ ಅಧ್ಯಕ್ಷ ಟಿ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಂದರೆ ಅಂಬಾವಿಲಾಸ ಅರಮನೆ ಸುತ್ತಲಿನ ವೃತ್ತಗಳು ಹಾಗೂ ರಸ್ತೆಗಳು, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸ್ ರಸ್ತೆ ಇನ್ನಿತರ ಪ್ರಮುಖ ರಸ್ತೆಗಳಲ್ಲಿ ನಾಳೆ(ಅ.11) ಹಾಗೂ ನಾಳಿದ್ದು(ಅ.12) ಸಂಜೆ 6.30ರಿಂದ ರಾತ್ರಿ 10.30ರವರೆಗೆ ವಿದ್ಯುತ್ ದೀಪಾಲಂಕಾರವನ್ನು ಕಣ್ತುಂಬಿಕೊಂಡು ಸಂಭ್ರಮಿಸಬಹುದು. ದೀಪಾಲಂಕಾರ ಮುಕ್ತಾಯವಾಗುವುದೆಂದು ಸೋಮವಾರ ರಾತ್ರಿ ಸಾವಿರಾರು ಜನ ಮೈಸೂರಿನ ರಸ್ತೆಗಳನ್ನು ಸುತ್ತುಹಾಕಿ ದೀಪಾಲಂಕಾರ ವೀಕ್ಷಿಸಿದರು. .

ಭೂಮಿಕಾ ಬಿ ಎಸ್



# ದಸರಾ ಪುರವಣಿ

## ಮೈಸೂರು ದಸರಾದ ಆಕರ್ಷಣೀಯ ತಾಣ ವಸ್ತು ಪ್ರದರ್ಶನ



ದಸರಾ ವಸ್ತು ಪ್ರದರ್ಶನಕ್ಕೆ ಮೈಸೂರು ಉಸ್ತುವಾರಿ ಸಚಿವರು ಹಾಗೂ ಇತರ ಗಣ್ಯರಿಂದ ಚಾಲನೆ

ಮೈಸೂರು: ಮೈಸೂರು ದಸರಾ ವಿಶೇಷ ಆಕರ್ಷಣೀಯ ಸ್ಥಾನವಾದ ವಸ್ತು ಪ್ರದರ್ಶನವು ಸೆಪ್ಟೆಂಬರ್ 26ರಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್ ಟಿ ಸೋಮಶೇಖರ್ ರವರಿಂದ ಉದ್ಘಾಟನೆಗೊಂಡಿತು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ಟೇಪ್ ಕತ್ತರಿಸಿ, ದೀಪ ಬೆಳಗಿಸುವ ಮೂಲಕ ದಸರಾ ವಸ್ತು ಪ್ರದರ್ಶನವನ್ನು ಚಾಲನೆ ನೀಡಿದರು. ಬಳಿಕ ಮಾತನಾಡಿದವರು, ಮೂರು ತಿಂಗಳ ಕಾಲ ನಡೆಯುವ ದಸರಾ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದ್ದು, ಹಿಂದೆಂದಿಗಿಂತಲೂ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ ಎಂದರು. ದಸರಾ ವಸ್ತು ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್ ಟಿ ಸೋಮಶೇಖರ್ ಚಾಲನೆ ನೀಡಿದರು. ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ ಶಿವಕುಮಾರ್, ಡಾ.ಬಗಾದಿ ಗೌತಮ್, ಉಪಮೇಯ ಜಿ ರೂಪ, ಬಿಜೆಪಿ ನಗರಾಧ್ಯಕ್ಷ ಶ್ರೀವಸ್ತ ಮತ್ತಿತ್ತರು. ಮಿರ್ಲೆ ಶ್ರೀನಿವಾಸ್ ಗೌಡ ಅವರು, ದಸರಾ ಪ್ರಾಧಿಕಾರ ಅಧ್ಯಕ್ಷರಾದ ಬಳಿಕ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡುವುದರ ಜೊತೆಗೆ ಉತ್ತಮವಾಗಿ ಆಯೋಜನೆ ಮಾಡಿದ್ದಾರೆ. ಹಲವು ಇಲಾಖೆಗಳ ಮಳಿಗೆಗಳಿದ್ದು, ಕಲಾ ಗ್ಯಾಲರಿ ವೀಕ್ಷಣೆಗೆ ಅವಕಾಶ ನೀಡುವ ಮೂಲಕ ಪ್ರವಾಸಿಗರನ್ನು ಆಕರ್ಷಿಸುವಂತೆ ಮಾಡಲಾಯಿತು ಎಂದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡರವರು ಮಾತನಾಡಿ, ಈ ವರ್ಷ ದಸರಾ ವಸ್ತು ಪ್ರದರ್ಶನವನ್ನು ಬಹಳ ವ್ಯವಸ್ಥಿತವಾಗಿ ಆಯೋಜಿಸಿದ್ದು, ಆಕರ್ಷಣೀಯವಾಗಿದೆ.

ಉದ್ಘಾಟನೆಗೂ ಮುನ್ನವೇ ಶೇ.80ರಷ್ಟು ಮಳಿಗೆಗಳು ತೆರೆದಿದ್ದು. ವ್ಯಾಪಾರಸ್ತರಿಗೆ ಮತ್ತು ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದರು.

ಹೊಸತನ: ದಸರಾ ವಸ್ತು ಪ್ರದರ್ಶನಕ್ಕೆ ಹೊಸತನ ನೀಡಲಾಗಿದೆ. 'ಸ್ಯಾಂಡ್ ಮ್ಯೂಸಿಯಂ'ಮತ್ತು ಲೇಸರ್ ಶೋ ಪ್ರಮುಖ ಆಕರ್ಷಣೀಯ ಇದರ ಜೊತೆಯಲ್ಲಿ ಡಾ ರಾಜಕುಮಾರ್ ಸೇರಿದಂತೆ ಸ್ವತಂತ್ರ ಹೋರಾಟಗಾರರ ಮರಳು ಶಿಲ್ಪ ಕಲಾಕೃತಿ ರೂಪಿಸಲಾಗಿದೆ. ಡಿಜಿಟಲ್ ಮೊಬೈಲ್ ಆಪ್, ಎರಡು ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, 60ಕ್ಕೂ ಹೆಚ್ಚು ಬಗೆಯ ಅಮ್ಯೂಸ್ಮೆಂಟ್ ಐಟಂಗಳನ್ನು ಅಳವಡಿಸಲಾಗಿದೆ. ವಸ್ತು ಪ್ರದರ್ಶನ ಪ್ರಾಧಿಕಾರದ ಮುಂಭಾಗ ಕಾಂಕ್ರೀಟ್ ಹಾಗೂ ರಸ್ತೆ ಡಾಂಬರೀಕರಣ ಸೇರಿ ಶಾಶ್ವತ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ವಿವರಿಸಿದರು. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ ಶಿವಕುಮಾರ್, ಜಿಲ್ಲಾಧಿಕಾರಿ ಡಾ ಬಗಾದಿ ಗೌತಮ್, ಉಪಮೇಯ ಜಿ ರೂಪ, ಪಾಲಿಕೆ ಸದಸ್ಯ ಛಾಯಾದೇವಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ಕೆ ರುದ್ರೇಶ್, ಬಿಜೆಪಿ ನಗರ ಅಧ್ಯಕ್ಷ ಶ್ರೀವತ್ಸ, ಕಾರ್ಯದರ್ಶಿ ಗಿರಿಧರ್ ಉಪಸ್ಥಿತರಿದ್ದರು.

– ಮನೋಜ್ ಕೆ ಎಂ

## ವೈದ್ಯರಿಂದ ಆಯೋಜಿಸಲಾದ ಆರೋಗ್ಯ ದಸರಾ




ಆರೋಗ್ಯ ದಸರಾದಲ್ಲಿ ಉಪಸ್ಥಿತರಿರುವ ವೈದ್ಯರು

ಮೈಸೂರು ಅ.27: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಮೆಡಿಕಲ್ ಕಾಲೇಜಿನ ಸಂಶೋಧನಾ ಸಂಸ್ಥೆಯಲ್ಲಿ ಆರೋಗ್ಯ ದಸರಾ ವೈದ್ಯಕೀಯ ವಸ್ತು ಪ್ರದರ್ಶನವನ್ನು ಏರ್ಪಡಿಸಿದ್ದು. ಇಲ್ಲಿ ವೈದ್ಯಕೀಯ ಕ್ಷೇತ್ರದ ಕೆಲವೊಂದು ಕುತೂಹಲಕಾರಿ ವಿಷಯಗಳ ಬಗ್ಗೆ ಸಾರ್ವಜನಿಕರಿಗೆ

ತಿಳಿಸಿಕೊಡಲಾಯಿತು. ಮಾನವನ ದೇಹದ ಅಂಗಾಂಗಗಳು, ಮೂಳೆಗಳು, ತಲೆ ಬುರುಡೆ ಸೇರಿದಂತೆ ವಿವಿಧ ರೀತಿಯ ಪಳೆಯುಳಿಕೆಗಳನ್ನ

ಕಾಣಬಹುದಾಗಿದೆ. ಹಾಗೆ ಭ್ರೂಣದಿಂದ ಜನನವರೆಗೆ ಮಗುವಿನ ಬೆಳವಣಿಗೆಯ ಹಂತಗಳನ್ನು

ರಾಸಾಯನಿಕಗಳನ್ನು ಬಳಸಿಕೊಂಡು ಸಂರಕ್ಷಿಸಲ್ಪಟ್ಟ ನೈಜ್ಯ ಮಗುವಿನ ದೇಹಗಳನ್ನು ನೋಡಬಹುದುಸತ್ತ ಮನುಷ್ಯರು ತಮ್ಮ ದೇಹವನ್ನು ವೈದ್ಯಕೀಯ ಸಂಶೋಧನೆಗೆ ದಾನ ಮಾಡಿರುವ ದೇಹಗಳ ಅಂಗಾಂಗಗಳನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಗಿದ್ದು. ಮತ್ತೊಂದು ಕಡೆ ಮನುಷ್ಯನ ಕಣ್ಣುಗಳು, ಮೆದುಳು, ಹೃದಯ, ಮೂತ್ರಪಿಂಡ, ಯಕೃತ್, ಯಕೃತ್ ಸಿರೋಸಿಸ್ ಹಾಗೂ ಶ್ವಾಸಕೋಶಕ್ಕೆ ಸಂಬಂಧಪಟ್ಟಂತೆ ಬರುವಂತಹ ಮಾರಣಾಂತಿಕ ಕಾಯಿಲೆಗಳ ಬಗ್ಗೆ ಅರಿವು ಮೂಡಿಸಲಾಯಿತ.

ಒಟ್ಟಾರೆಯಾಗಿ ಮಾನವನ ದೇಹದ ಭಾಗಗಳಿಗೆ ಸಂಬಂಧಪಟ್ಟಂತೆ ಮಧ್ಯಪಾನ, ಧೂಮಪಾನ ಹಾಗೂ ಇತರ ಮಾದಕ ದ್ರವ್ಯಗಳ ಸೇವನೆಯಿಂದ ಬರುವಂತಹ ಕಾಯಿಲೆಗಳ ಸಂಪೂರ್ಣ ಮಾಹಿತಿಯನ್ನು ನೀಡುವ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ವೈದ್ಯರು ಜಿಲ್ಲಾಡಳಿತ ಸಿಬ್ಬಂದಿಗಳು ಉಪಸ್ಥಿತರಿದ್ದರು.

–ಮಹೇಶ್‌ಬಾಬು ಹೆಚ್

## ದೀಪಾಲಂಕಾರಗಳ ನಡುವೆ ಸಾಗಿದ ಜಂಬೂಸವಾರಿ

### ಇತಿಹಾಸ ಸೃಷ್ಟಿಸಿದ ಈ ಬಾರಿಯ ದಸರಾ



ಅಂಬಾರಿ ಹೊತ್ತ ಅಭಿಮನ್ಯು

ಮೈಸೂರು, ಅ.5– ದಸರಾ ಮಹೋತ್ಸವದ ಇತಿಹಾಸದಲ್ಲಿ ಇದೆ ಮೊಟ್ಟ ಮೊದಲ ಬಾರಿಗೆ ಜಂಬೂ ಸವಾರಿ ಮೆರವಣಿಗೆಯು ವರ್ಣರಂಜಿತ ದೀಪಾಲಂಕಾರದ ನಡುವೆ ಸಾಗಿ ಬಂದಿದೆ. ಹಿಂದೆ ಯಾವ ವರ್ಷವೂ ಕೂಡ ಜಂಬೂಸವಾರಿಯೂ ದೀಪ ಅಲಂಕಾರ ನಡುವೆ ಸಾಗಿರಲಿಲ್ಲ. ಈ ಬಾರಿ ಪುಷ್ಪಾರ್ಚನೆ ಲಗ್ನ ಬಹಳ ತಡವಾಗಿದ್ದಿದ್ದರಿಂದ

ದೀಪಾಲಂಕಾರಗಳ ನಡುವೆ ಅಭಿಮನ್ಯು ಚಿನ್ನದ ಅಂಬಾರಿಯನ್ನು ಹೊತ್ತಿ ರಾಜ ಮಾರ್ಗದ ಮೂಲಕ ಸಾಗಿದರು ಈ ಸಮಯದಲ್ಲಿ ಸಾವಿರಾರು ಜನರು ಅಮ್ಮನವರ ದರ್ಶನ ಪಡೆದು ಕಣ್ತುಂಬಿಕೊಂಡರು. ಇಂದು ಚಿನ್ನದ ಅಂಬಾರಿಯಲ್ಲಿ ಆಸೀನಳಾಗಿರುವ ಚಾಮುಂಡೇಶ್ವರಿ ದೇವಿಗೆ ಪುಷ್ಪ ಆಚರಣೆ ಮಾಡುವ ಶುಭಗಳಿಗೆ ಸಂಜೆ 5.07 ರಿಂದ 5. 15 ರವರೆಗೆ ನಿಗದಿಪಡಿಸಿದ ಕಾರಣ ಕತ್ತಲಾವರಿಸಿದ್ದರಿಂದ ದೀಪ ಅಲಂಕಾರ ನಡುವೆಯೇ ನಡೆಯಲಿದೆ ಎಂಬುದನ್ನು ಮನಗಂಡಿದ್ದ ಅರಣ್ಯ ಇಲಾಖೆ ಅಧಿಕಾರಿಗಳು,ಜಂಬುಸವಾರಿಯಲ್ಲಿ ಸಾಗಿ ಬರುವ ಗಜಪಡೆಗೆ ಪ್ರಜ್ವಲಿಸುವ ಬೆಳಕಿನ ಪರಿಚಯವಾಗಬೇಕೆಂಬ ಕಾರಣದಿಂದ

ದೀಪಾಲಂಕಾರವನ್ನು ಮೂರು ದಿನ ಮುಂಚಿತವಾಗಿಯೇ ಆರಂಭಿಸಬೇಕೆಂದು ಚಸ್ಕಾಂಗೆ ಮನವಿ ಮಾಡಿದ್ದರು. ಆದ್ದರಿಂದ ಪ್ರಚಲಿಸುವ ವಿದ್ಯುತ್ ದೀಪಗಳ ನಡುವೆ ಹೆಜ್ಜೆ ಹಾಕುವ ತಾಲಿಮನ್ನು ಕೂಡ ಗಜಪಡೆಗೆ ನಡೆಸಲಾಗಿತ್ತು.

–ಪವಿತ್ರ.ವಿ

## ದಸರಾದಲ್ಲಿ ಮಿಂಚಿದ ಪೊಲೀಸ್ ಬ್ಯಾಂಡ್...



ವಾದ್ಯ ಬೃಂದಾವನ ನುಡಿಸುತ್ತಿರುವ ಪೊಲೀಸ್ ಬ್ಯಾಂಡ್ ತಂಡ

ಮೈಸೂರು: ಮೈಸೂರು ಮಲ್ಲಿಗೆ, ಶ್ರೀಗಂಧ, ಮೈಸೂರ್ ಪಾಕ್, ಮೈಸೂರ್ ಸಿಲ್ಕ್, ಮೈಸೂರು ಒಡೆಯರು ಎಲ್ಲವನ್ನು ತನ್ನ ಒಂದು ಹೂವಿನಲ್ಲಿ ಸೆಳೆದಿಟ್ಟುಕೊಂಡಿರುವುದು ನಮ್ಮ ಮೈಸೂರು. ಮೈಸೂರು ದಸರಾ ವಿಶ್ವದ ವಿಖ್ಯಾತಿಯನ್ನು ಪಡೆದುಕೊಂಡಿದೆ, ದಸರವನ್ನು ನೋಡಲು ದೇಶವಿದೇಶದಿಂದ ಜನರು ಬರುತ್ತಾರೆ. ಆಕರ್ಷಣೀಯ ಕಾರ್ಯಕ್ರಮಗಳಲ್ಲಿ ತನ್ನದೇ ಆದ ವಿಶೇಷತೆಯನ್ನು ಪಡೆದುಕೊಂಡು ಜನರ ಕಣ್ಮನವನ್ನು ಸೆಳೆಯುವ ಒಂದು ಆಕರ್ಷಣೀಯ ಬಿಂದುವಾಗಿರುವುದು ಪೊಲೀಸ್ ಬ್ಯಾಂಡ್. ಪೊಲೀಸ್ ಬ್ಯಾಂಡ್ ಎಂಬುದು ಇಂದು ನೆನ್ನೆಯದಲ್ಲ. ಪೊಲೀಸ್ ಬ್ಯಾಂಡ್ ಮತ್ತು ಮೈಸೂರು ಅರಮನೆಗೆ ಒಂದೂವರೆ ಶತಮಾನದ ನಂಟು. ಮೊದಲ ಬಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರು 1868ರಲ್ಲಿ ಇಂಡಿಯನ್ ಆರ್ಕೆಸ್ಟ್ರವನ್ನು ಪ್ರಾರಂಭಿಸಿದರು. ತದನಂತರ ಜಯಚಾಮರಾಜ ಒಡೆಯರು 1918ರಲ್ಲಿ ಇದನ್ನು ಇನ್ನಷ್ಟು ಎತ್ತರದ ಸ್ಥಾನಕ್ಕೆ ಕರೆದೊಯ್ದರು. ಮುಂದಿನ ದಿನಗಳಲ್ಲಿ ಅಂದರೆ 1951ರಲ್ಲಿ ವಾದ್ಯವೃಂದಾವನ್ನು ಪೊಲೀಸ್ ಇಲಾಖೆಗೆ ಸೇರಿಸಿಕೊಳ್ಳಲು ಅನುಮತಿಸಿದರು. ಸ್ವತಂತ್ರದ ನಂತರ 1981ರಲ್ಲಿ ಅಂದಿನ ಪೊಲೀಸ್ ಆಯುಕ್ತರದ ಡಾ ಪಿ ಬಿ ರಾವ್ ರವರು ಎಲ್ಲಾ ಜಿಲ್ಲೆಗಳ ವಾದ್ಯ ವೃಂದವನ್ನು ಸೇರಿಸಿ ಕರ್ನಾಟಕ ಪೊಲೀಸ್ ಬ್ಯಾಂಡ್ ಎಂದು ನಿರ್ಮಾಣ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಬಾರಿಯ ದಸರದಲ್ಲೂ ಕೂಡ ಪೊಲೀಸ್ ಇಲಾಖೆಯು ಆಂಗ್ಲ ಮತ್ತು ಕರ್ನಾಟಕ ವಾದ್ಯ ವೃಂದಗಳ ಸಂಗೀತ ಕಾರ್ಯಕ್ರಮವನ್ನು 20–09–2022ರ ಗುರುವಾರದ ಸಂಜೆ 5:30ಕ್ಕೆ ಅರಮನೆಯ ವೇದಿಕೆಯಲ್ಲಿ ಆಯೋಜಿಸಲಾಯಿತು. ಅರಮನೆ ವೇದಿಕೆಯ ಕಾರ್ಯಕ್ರಮದಲ್ಲಿ ಪೊಲೀಸ್ ಬ್ಯಾಂಡ್ ಜನರ ಆಕರ್ಷಣೆಯ ಈ ವಾದ್ಯ ವೃಂದದ ರಚನೆ: ಶ್ರೀ ಪುಟ್ಟಂ ಸುಬ್ರಹ್ಮಣ್ಯ ಅಯ್ಯರ್ ರಾಗ: ನವರಾಗ ತಾಳ: ಆದಿ ಸಂಯೋಜನೆ: ಆರ್ ಮೋಹನ್ ರವರ ವಾದ್ಯ ವೃಂದವನ್ನು ನಡೆಸಿದರು. ನಂತರ ಆಂಗ್ಲ ವಾದ್ಯ ವೃಂದದವರಿಂದ ಸೆಲೆಕ್ಷನ್ ಆಫ್ ಅಬ್ಬಾ. ವಿಶ್ವ ಪ್ರಸಿದ್ಧ ಸ್ವೀಡಿಶ್ ಪಾಪ್ ಸೂಪರ್ ಗ್ರೂಪ್ ಅಬ್ಬಾ ತಂಡದ ಹಾಡುಗಳ ಸಂಗೀತ, ಸಂಯೋಜನೆ: ಎ ಸಿ ಫ್ರಾನ್ಸಿಸ್ ವಾದ್ಯ ವೃಂದದ ಮೂಲಕ ಪ್ರಾರಂಭವಾಯಿತು. ಕರ್ನಾಟಕ ವಾದ್ಯ ವೃಂದದವರಿಂದ ಶ್ರೀ ಮಹಾಗಣಪತಿಂ, ರಾಗರಂಗ್, ಸರಸ್ವತಿ ಭಗವತಿಂ, ನೋಟುಸ್ವರ ಮತ್ತು ಫ್ಯೂಜನ್ (ಕರ್ನಾಟಕ ಮತ್ತು ಆಂಗ್ಲವಾದ್ಯವರಿಂದ ತಂಡದ ಮಿಶ್ರ) ವಾದ್ಯ ಯುವೃಂದಗಳನ್ನು ನುಡಿಸಲಾಯಿತು. ಆಂಗ್ಲ ಬಾಧ್ಯವೃಂದದವರಿಂದ ಕೆ ಜಿ ಎಫ್ ಥೀಮ್, ಸಂತೋಷಕ್ಕೆ ಹಾಡು ಸಂತೋಷಕ್ಕೆ ಮತ್ತು ಫ್ಯೂಜನ್ ವಾದ್ಯವೃಂದಾವನ್ನು ನುಡಿಸಿದರು. ಇನ್ನು ಟೋನಿ ಮ್ಯಾಥ್ಯು ಮತ್ತು ತಂಡದವರಿಂದ ಪಿಯಾನೋ ಸೋಲೋ ಪ್ರಸ್ತುತಿ, ಪಿಯಾನೋ ವಯಲಿನ್ ಮತ್ತು ಕ್ಲಾರಿನೆಟ್ ಟ್ರಿಯೋ. ಕೀರ್ತನ್ ಮತ್ತು ತಂಡದವರಿಂದ ಗುಲಾಬ್ ಅಂಕೇನ್ ಹಾಗೂ ಕೊನೆಯದಾಗಿ ಎ ಸಿ ಫ್ರಾನ್ಸಿಸ್ ಮತ್ತು ತಂಡದವರಿಂದ ಗೋಯಿಂಗ್ ಹೋಮ್ ವಾದ್ಯ ವೃಂದವನ್ನು ನುಡಿಸಲಾಯಿತು. ಅರಮನೆ ವೇದಿಕೆ ಕಾರ್ಯಕ್ರಮದಲ್ಲಿ ಪೊಲೀಸ್ ಬ್ಯಾಂಡ್ ರವರು ಬರೋಬರಿ 13 ವಾದ್ಯ ವೃಂದಗಳನ್ನು ನುಡಿಸಿದರು. ಹಿಂದಿನ ಕಾಲದಲ್ಲಿ ಜನರು ಪೊಲೀಸ್ ಬ್ಯಾಂಡ್ ಅನ್ನು ನೋಡಲು ಬಹಳ ಉತ್ಸಾಹದಿಂದ ಮತ್ತು ಕಾತುರದಿಂದ ಕಾಯುತ್ತಿದ್ದರು. ಮೈಸೂರು ದಸರಾ ಕಾರ್ಯಕ್ರಮಗಳಲ್ಲಿ ರಾಜಮನೆತವದವರು ಪೊಲೀಸ್ ಬ್ಯಾಂಡ್ ಅನ್ನು ಬಹಳ ಇಷ್ಟಪಟ್ಟು ಕೇಳುತ್ತಿದ್ದರು.ನೂರಾರು–ಸಾವಿರಾರು ಜನರು ಮೈಸೂರು ಅರಮನೆ ಮುಂದೆ ಸೇರಿದನ್ನು ನೋಡುವುದೇ ಒಂದು ರೀತಿಯ ಸಂತೋಷ. ಎರಡು ಕಣ್ಣುಗಳು ಸಾಲದು. ಪೊಲೀಸ್ ಬ್ಯಾಂಡ್ ವಾದ್ಯವೃಂದಾವನ್ನು ನೋಡಲು ನೂರಾರು ಜನರು ನೆರೆದಿದ್ದರು. ವಾದ್ಯವೃಂದ ನಡೆಯುವಾಗ ಪ್ರತಿಯೊಬ್ಬರು ಆನಂದಿಸುತ್ತಾ ಇದು ನಮ್ಮ ಮೈಸೂರಿನ ಹೆಮ್ಮೆ. ಸಾಂಸ್ಕೃತಿಕ ನಗರಿ ಎಂದರೆ ಅದೇ ನಮ್ಮ ಮೈಸೂರು.

ಕಾರ್ಯಕ್ರಮದಲ್ಲಿ ಡಾ ಚಂದ್ರಗುಪ್ತ ಐಪಿಎಸ್, ಪೊಲೀಸ್ ಆಯುಕ್ತರು ಮೈಸೂರು ನಗರ. ಮೈಸೂರು ಜಿಲ್ಲಾ ಪಂಚಾಯತ್ ನ ಅಧ್ಯಕ್ಷರು ಮತ್ತು ಸದಸ್ಯರು, ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಹಾಗೂ ಇತರ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

– ಪವಿತ್ರ..ಎಂ.ಎಸ್

ಮಾನಸ ಗಂಗೋತ್ರಿ

ಶುಕ್ರವಾರ ೧೪ ಅಕ್ಟೋಬರ್

# ದಸರಾ ಪುರವಣಿ

## ಚಾಮುಂಡಿ ಬೆಟ್ಟದ ಇತಿಹಾಸ...!



ಚಾಮುಂಡಿ ಬೆಟ್ಟದ ಮೇಲ್ಭಾಗವನ್ನು ಹತ್ತನೆಯ ಶತಮಾನದ ಹೊತ್ತಿಗಾಗಲೇ ಪುಣ್ಯ ಕ್ಷೇತ್ರವೆಂದು ಪರಿಗಣಿಸಲಾಗಿತ್ತು. ಇಲ್ಲಿರುವ ಆ ಕಾಲದ ಶಾಸನ ಗಳಲ್ಲಿ ಇದನ್ನು ಮಬ್ಬಲದ ತೀರ್ಥ ಅಥವಾ ಮಬ್ಬಳದ ತೀರ್ಥ ಎಂದು ಕರೆಯಲಾಯಿತು. ಇಲ್ಲಿ ಹಲವಾರು ಜನ ಸಿದ್ಧಿ ಪಡೆದರೆಂದು ಶಾಸನಗಳು ತಿಳಿಸುತ್ತವೆ.

ಈಗ ಇಲ್ಲಿರುವ ಮಹಾಬಲೇಶ್ವರ ದೇವಸ್ಥಾನ ಹೊಯ್ಸಳ ವಿಷ್ಣುವರ್ಧನನ ಕಾಲಕ್ಕಿಂತ ಮುಂಚೆಯೇ ನಿರ್ಮಿತವಾಗಿತ್ತು ಎಂದು ಹೇಳಲಾಗುತ್ತದೆ. ವಿಷ್ಣುವರ್ಧನನ ಕಾಲದಲ್ಲಿ , ಅಂದರೆ 1128ರಲ್ಲಿ ಈ ಮಬ್ಬಳದ ತೀರ್ಥಕ್ಕೆ ದತ್ತಿ ಬಿಟ್ಟಿದ್ದ ಬಗ್ಗೆ ಶಾಸನವಿದೆ. ಬೆಟ್ಟದ ಮೇಲೆ ಪ್ರತಿಷ್ಠಾಪಿಸ ಲಾಗಿದ್ದ

ಮಹಿಷಾಸುರ ಮರ್ಧಿನಿಯನ್ನು ಮೈಸೂರು ಅರಸರು ಬೆಟ್ಟದ ತಾಯಿ ಚಾಮುಂಡೇಶ್ವರಿ ಎಂದು ಕರೆದು, ತಮ್ಮ ಕುಲದೇವತೆಯಾಗಿ ಪೂಜಿಸಿದರು ಎನ್ನುತ್ತದೆ ಇತಿಹಾಸ. ಅಂದಿನಿಂದ ಮಬ್ಬಳ ತೀರ್ಥಕ್ಕೆ ಚಾಮುಂಡಿ ಬೆಟ್ಟ ಎಂಬ ಹೆಸರು ಬಂದಿರಬಹುದು ಎನ್ನುತ್ತಾರೆ ಇತಿಹಾಸ ತಜ್ಞರು. 16 ಅಡಿ ಎತ್ತರದ ಹೆಬ್ಬಂಡೆಯಲ್ಲಿ ಕೆತ್ತಲಾಗಿರುವ ನಂದಿಯ ಸುಂದರ ಮೂರ್ತಿ ಬೆಟ್ಟದ ಪ್ರಮುಖ ತಾಣಗಳಲ್ಲಿ ಒಂದಾಗಿದೆ. ನಂದಿಯ ಮೂರ್ತಿ ಯಲಿ ಸ ಳನ್ನು, ಶಿಲ್ಪಿಸುಂದ ರಾಗಿ ಕೆತ್ತಿದ್ದಾರೆ. ಬೆಟ್ಟದ ಮೇಲಿರುವ ಚಾಮುಂಡೇಶ್ವರಿಯ ಪುರಾತನ ದೇವಾಲಯ ದ್ರಾವಿಡ ಶೈಲಿಯಲ್ಲಿದೆ .

ಹಳೆಯ ದೇವಾಲಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ನವೀಕರಿಸಿ ಇದರ ಮಹಾದ್ವಾರಕ್ಕೆ ಒಂದು ಸುಂದರವಾದ ಗೋಪುರ ವನ್ನು ಕಟ್ಟಿಸಿದ್ದಾರೆ. ದೇವಾಲಯ ಇವರ ಕಾಲದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡಿತು. ದ್ರಾವಿಡ ಶೈಲಿಯ ದೇವಾಲಯಗಳಂತೆ ಈ ದೇವಾಲಯದಲ್ಲೂ ಸುಕನಾಸಿ ಮತ್ತು ನವರಂಗಗಳಿವೆ. ನವರಂಗಗಳಿಗೆ ಹಾಕಿಸಿರುವ ಹಿತ್ತಾಳೆ ತಗಡು ಗಳು ಸಿಂಹ ವಾಸನ, ಹಲವ ವಾಹನಗಳು, ದೇವಿಯ ಸ್ತೋತ್ರವನ್ನೊಳಗೊಂಡ ನಕ್ಷತ್ರ ಮಾಲಿಕೆ ಮತ್ತು ಇತರ ಆಭರಣಗಳನ್ನು ರಾಜಮನೆ ತವರು ದೇವಿಗೆ ಸಮರ್ಪಿಸಿದ್ದಾರೆ.

ಪ್ರತಿವರ್ಷ ಆಶ್ವೀಜ ಶುದ್ಧ ಹುಣ್ಣಿಮೆಯಂದು ಚಾಮುಂಡೇಶ್ವರಿ ರಥೋತ್ಸವ ಜರುಗುತ್ತದೆ. ರಥೋತ್ಸವದ ಎರಡು ದಿನಗಳ ಬಳಿಕ ರಾತ್ರಿ ದೇವಾಲಯದ ಸಮೀಪದಲ್ಲೇ ಇರುವ ಕೊಳದಲ್ಲಿ ನಡೆಯುವ ತೆಪ್ಪೋತ್ಸವ ನೋಡಲು ದೇಶ ವಿದೇಶಗಳಿಂದಲೂ ಪ್ರವಾಸಿಗರು ಆಗಮಿಸುತ್ತಾರೆ.

ಬೆಟ್ಟದ ಮೇಲೆ ಹೋಗಲು ಡಾಂಬರು ರಸ್ತೆಯೂ ಇದೆ, ನಗರ ಸಾರಿಗೆ ಸೌಲಭ್ಯವೂ ಕೂಡ ಇದೆ. ವಾಹನದಲ್ಲಿ ಬೆಟ್ಟಕ್ಕೆ ಹೋಗಿಇಳಿಯುತ್ತಿದ್ದಂತೆಯೇ

ದೇವಾಲಯಕ್ಕೆ ಹೋಗುವ ದಾರಿಯಲ್ಲಿರುವ 12 ಅಡಿ ಎತ್ತರದ ಮಹಿಷಾಸುರನ ಬೃಹತ್ ಪ್ರತಿಮೆ ಪ್ರವಾಸಿಗರನ್ನು, ಭಕ್ತರನ್ನು ಸ್ವಾಗತಿಸುತ್ತದೆ. ಅಂಗಡಿಗಳ ಸಾಲಿನಲ್ಲಿ ಮುಂದೆ ಸಾಗಿದರೆ ಮಹಿಷಾಸುರನನ್ನೇ ಕೊಂದ ತಾಯಿ ಚಾಮುಂಡಿಯ ದರ್ಶನವೂ ದೊರಕುತ್ತದೆ.

– ಪ್ರದೀಪ್ ಸೋನಿ

## ಕುಸ್ತಿಪಟುಗಳಿಗೆ ನಮ್ಮ ಸರ್ಕಾರದಿಂದ ಪ್ರೋತ್ಸಾಹ-ಪ್ರತಿ ಗರಡಿ ಮನೆ ನಿರ್ಮಾಣಕ್ಕೆ 10ಲಕ್ಷ ಅನುದಾನ : ಸಚಿವ ಡಾ.ನಾರಾಯಣಗೌಡ



ಮೈಸೂರು, ಸೆ.26: ನಾಡಹಬ್ಬ ದಸರಾ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿರುವ ನಾಡ ಕುಸ್ತಿ ಪಂದ್ಯಾವಳಿಗಳಿಗೆ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್ ಟಿ ಸೋಮಶೇಖರ್ ಅವರು ಚಾಲನೆ ನೀಡಿದರು.

ನಾಡಹಬ್ಬ ದಸರಾದ ಪ್ರಯುಕ್ತ ಹಲವು ಕಾರ್ಯಕ್ರಮಗಳು, ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ. ಅದರಲ್ಲಿ ಕುಸ್ತಿಯೂ ವಿಶೇಷವಾದದ್ದು. ನಮ್ಮ ರಾಜ-ಮಹಾರಾಜರು ಹಿಂದಿನಿಂದಲೂ ನಾಡ ಕುಸ್ತಿಗೆ ವಿಶೇಷ ಪ್ರಾಧ್ಯಾನತೆ ನೀಡಿ, ಪ್ರೋತ್ಸಾಹಿಸಿ ಬೆಳೆಸಿದ್ದರು. ಜಿಮ್‌ಗಳ ಅಬ್ಬರ ಹೆಚ್ಚಾಗಿದ್ದರೂ ಗರಡಿ ಮನೆಗಳಿಗೆ ವಿಶೇಷ ಮಾನ್ಯತೆ ಇದ್ದೇ ಇದೆ. ಮೈಸೂರು ವಿಭಾಗ ಹಾಗೂ ಉತ್ತರ ಕರ್ನಾಟಕ ಭಾಗದಲ್ಲಿ ಹಲವು ಗರಡಿ ಮನೆಗಳಲ್ಲಿ ಕುಸ್ತಿಪಟುಗಳನ್ನು ತಯಾರು ಮಾಡಿ, ಪಂದ್ಯಾವಳಿಗಳಿಗೆ ಕಳುಹಿಸುತ್ತಿದ್ದಾರೆ. ನಮ್ಮ ಸರ್ಕಾರ ಕೂಡ ಕುಸ್ತಿಪಟುಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದೆ. ಗರಡಿಮನೆಗಳ ನಿರ್ಮಾಣಕ್ಕೆ ನಮ್ಮ ಕ್ರೀಡಾ ಇಲಾಖೆಯಿಂದ 10 ಲಕ್ಷ ಅನುದಾನ ನೀಡುತ್ತಿದ್ದೇವೆ ಎಂದು ಸಚಿವ ಡಾ.ನಾರಾಯಣಗೌಡ ಅವರು ಹೇಳಿದರು. ಶಾಸಕ ನಾಗೇಂದ್ರ, ಜಿಲ್ಲಾಧಿಕಾರಿ ಬಗಾದಿ ಗೌತಮ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

– ಪ್ರದೀಪ್ ಸೋನಿ

## ಮೈಸೂರು ವಸ್ತು ಪ್ರದರ್ಶನ; ಖಾಲಿ ಮಳಿಗೆಗಳೆ ಹೆಚ್ಚು...



ಮೈಸೂರು: ಶೇ.೮೦ರಷ್ಟು ಮಳಿಗೆಗಳು ಭರ್ತಿಯಾಗುವ ಜೊತೆಗೆ ಜಿ.ಪಂ. ಮಳಿಗೆಗಳು ಭರ್ತಿಯಾಗಿವೆ ಎಂದುಕೊಂಡು ಉದ್ಘಾಟನೆಗೊಂಡ ವಸ್ತು ಪ್ರದರ್ಶನದಲ್ಲಿ ಖಾಲಿ ಮಳಿಗೆಗಳು ಎದ್ದು ಕಾಣುತ್ತಿದ್ದವು.

ಮೈಸೂರು ದಸರಾ ಎಂದರೆ, ವಿವಿಧ ರೀತಿಯ ಕಾರ್ಯಕ್ರಮಗಳು ನಡೆಯುತ್ತಿರುತ್ತದೆ. ಹಾಗೆ ಅತಿ ಹೆಚ್ಚು ಜನಪ್ರಿಯತೆಯನ್ನು ಪಡೆದಿರುವ ಮೈಸೂರು ದಸರಾ ವಸ್ತು ಪ್ರದರ್ಶನ ಈ ಬಾರಿಯೂ ಬಹಳ ಅದ್ದೂರಿಯಾಗಿ ಪ್ರಾರಂಭಗೊಂಡು ಉಸ್ತುವಾರಿ ಸಚಿವರಿಂದ ಉದ್ಘಾಟನೆಗೊಂಡಿತು.

ಆದರೆ ಈ ಬಾರಿ ಹೆಚ್ಚಾಗಿ ಖಾಲಿ ಮಳಿಗೆಗಳು ಎದ್ದು ಕಾಣುತ್ತಿದ್ದವು. ವಸ್ತು ಪ್ರದರ್ಶನದ ಆವರಣದಲ್ಲಿ ವಿದ್ಯುತ್ ದೀಪ ಅಲಂಕಾರ, ತಳಿರು–ತೋರಣಗಳನ್ನು ಕಟಿ ಸಿಂಗಾರ ಮಾಡಿದ್ದರು ಒಳಗೆ ಮಾತ್ರ ನಿರಾಸವಾಗಿತ್ತು.

ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಆಯೋಜಿಸಿರುವ ದಸರಾ ವಸ್ತು ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್ ಟಿ ಸೋಮಶೇಖರ್ ಉದ್ಘಾಟಿಸಿದರು.

ಈ ಬಾರಿಯ ವಸ್ತು ಪ್ರದರ್ಶನ ಹಲವಾರು ವಿಶೇಷತೆಗಳಿಂದ ಕೂಡಿದೆ ಎಂದ ಸಚಿವರು. ಒಟ್ಟು ಪ್ರದರ್ಶನದಲ್ಲಿ ಮಕ್ಕಳ ಬಟ್ಟೆ ಮಳಿಗೆಗಳು, ಮಕ್ಕಳ ಆಟಿಕೆ ವಸ್ತುಗಳ ಮಳಿಗೆಗಳಲ್ಲಿ ಅರ್ಧ ಭರ್ತಿಯಾಗಿದ್ದರೆ, ಹಲವಾರು ಈಗ ಜೋಡಿಸುವ ಕೆಲಸ ಮಾಡುತ್ತಿದ್ದರು. ಮತ್ತೊಂದೆಡೆ ವಾಹನ ಪಾರ್ಕಿಂಗ್ ಗೇಟ್ ನ ಕಡೆ ಬರುವ ಇರುವ ಆಹಾರ ಮಳಿಗೆಗಳಲ್ಲಿ ಶೇ. ೭೦ರಷ್ಟು ಭರ್ತಿಯಾಗಿದ್ದರೆ, ಈಗ ತಮ್ಮ ಅಂಗಡಿಗಳಿಗೆ ಸಾಮಗ್ರಿಗಳನ್ನು ತುಂಬಿಸುತ್ತಿದ್ದರು ಹಾಗೂ ನಾಮಫಲಕಗಳನ್ನು ಅಳವಡಿಸುತ್ತಿದ್ದು ಕಂಡುಬಂದಿತು.

ಮತ್ತೊಂದೆಡೆ ಶೇ.೮೦ರಷ್ಟು ಸರ್ಕಾರಿ ಮಳಿಗೆಗಳು ಭರ್ತಿಯಾಗಿ ಪ್ರವಾಸಿಗರ ವೀಕ್ಷಣೆಗೆ ಲಭ್ಯವಾಗಲಿವೆ ಎನ್ನುವ ಮಾತನ್ನು ಹೇಳಿದ್ದರೂ ಪ್ರವಾಸೋದ್ಯಮ ಇಲಾಖೆ ಸೇರಿದಂತೆ ಹತ್ತು ಮಳಿಗೆಗಳು ಮಾತ್ರ ವೀಕ್ಷಣೆ ಮಾಡಬಹುದು ಎನ್ನುವಂತಿದ್ದವು. ಕೆಲವು ಮಳಿಗೆಗಳ ಕಾರ್ಯದಲ್ಲಿ ಕಲಾವಿದರು ಕಾರ್ಯೋನ್ಮುಖವಾಗಿದ್ದರು.

ಪಿ ಕಾಳಿಂಗ ರಾವ್ ಕಲಾಮಂಟಪದ ಸಮೀಪ ವಿದ್ಯುತ್ ದೀಪಾಲಂಕಾರ ಮಾಡಿದ್ದಾರೆ, ಮತ್ತೊಂದು ಕಡೆ ಪ್ರವಾಸಿಗರು ವಿಹಾರಿಸಲು ಹಾಕಿರುವ ಕುರ್ಚಿಗಳಿಗೆ ತಿಂಗಳ ಮಾಡಿದ್ದರಿಂದ ಗಮನ ಸೆಳೆಯುತ್ತಿದ್ದವು. ಎಂ ಜಿ ರಸ್ತೆಗೆ ಹೊಂದಿಕೊಂಡಂತೆ ಇರುವ ಜಾಗದಲ್ಲಿ ಅಮ್ಯೂಸ್ ಮೆಂಟ್ ಪಾರ್ಕ್ ಗಳಲ್ಲಿ ಕೆಲವು ಸಜ್ಜಾಗಿದರೆ, ಹಲವು ಜೋಡಿಸಲ್ಪಡುತ್ತಿದ್ದವು. ವಸ್ತು ಪ್ರದರ್ಶನದಲ್ಲಿ ಒಂದು ಸುತ್ತು ಹಾಕಿ ಬರುವುದಕ್ಕೆ ಎರಡರಿಂದ ಮೂರು ಗಂಟೆಗಳ ಕಾಲ ಸಮಯ ಕಳೆಯಬಹುದೆಂದು ಸಾರ್ವಜನಿಕರಿಗೆ ಅರ್ಧಕ್ಕೆ ಅರ್ಧ ಖಾಲಿ ಖಾಲಿ ಕಾಣಿಸುತ್ತಿದ್ದರಿಂದ ಬಹುಬೇಗನೆ ನಿರ್ಮಿಸಿದರು. ಅದರಿಂದ ಬಹಳ ಬೇಗ ವಸ್ತು ಪ್ರದರ್ಶನದವರು ಖಾಲಿ ಇರುವ ಮಳಿಗೆಯನ್ನು ಭರ್ತಿ ಮಾಡಬಹುದು ಎನ್ನುವ ಆಶಯದಲ್ಲಿ ಸಾರ್ವಜನಿಕರು ಇದ್ದಾರೆ.

೧೫ ದಿನಗಳ ಮುಂಚಿತವಾಗಿ ವಸ್ತು ಪ್ರದರ್ಶನ ಆರಂಭಿಸಬೇಕಿತ್ತಾದರೂ ಮಳೆಯ ಕಾರಣದಿಂದ ವಿಳಂಬವಾಯಿತು. ಈ ಬಾರಿ ತ್ರಿಡಿ ಮ್ಯಾಪಿಂಗ್, ವಿಡಿಯೋ ಮ್ಯಾಪಿಂಗ್, ನಟ ಪುನೀತ್ ರಾಜಕುಮಾರ್, ಸ್ವಾತಂತ್ರ ಹೋರಾಟಗಾರರ ಪ್ರತಿಮೆಗಳ ಸ್ಯಾಂಡ್ ಮ್ಯೂಸಿಯಂ ಆಕರ್ಷಿಸುತ್ತಿದೆ.

–ಪವಿತ್ರಾ ಎಂ.ಎಸ್.



ಚಿತ್ರಕೃಪೆ – ಪವಿತ್ರಾ ವಿ.

# ದಸರೆಯಲ್ಲಿ ರಾರಾಜಿಸಿದ ಅಪ್ಪು

ಕಳೆದ ಎರಡು ವರ್ಷಗಳಿಂದ ಕೊರೋನಾ ಕಾರಣ ಸರಳ ದಸರಾ ಆಚರಿಸಲಾಗಿತ್ತು. ಆದರೆ ಈ ಬಾರಿ ಬಹಳ ವಿಜೃಂಭಣೆಯಿಂದ ದಸರಾ ಆಚರಿಸಲಾಯಿತು. ಅದೇ ರೀತಿ ಮರೆಯಾದ ಮಾಣಿಕ್ಯ ಅಪ್ಪು ಅವರ ನೆನಪು ಮೈಸೂರು ದಸರೆಯಲ್ಲಿ ಪ್ರತಿಯೊಂದು ದಿನವು ಮರುಕಳಿಸಿತ್ತು. ಎಲ್ಲ ಕಾರ್ಯಕ್ರಮಗಳಲ್ಲೂ ಅಪ್ಪುವಿನ ನೆನಪಿ ಮರುಕಳಿಸುತ್ತಿತ್ತು. ಕಲಾಮಂದಿರದ ಚಿತ್ರಶಿಲ್ಪಕಲಾ ಶಿಬಿರದಲ್ಲಿ ಆನೆ ದಂತದ ಮಾದರಿಯನ್ನು ಒಳಗೊಂಡ ಪುನೀತ್ ರಾಜಕುಮಾರ್ ಅವರ ಭಾವಚಿತ್ರವು ಎಲ್ಲರ ಗಮನ ಸೆಳೆಯಿತು.

ದಸರಾ ಚಲನಚಿತ್ರೋತ್ಸವದಲ್ಲಿ ಪುನೀತ್ ರಾಜಕುಮಾರ್ ಬಾಲ ಕಲಾವಿದನಾಗಿ ನಟಿಸಿ ಕನ್ನಡಕ್ಕೆ ರಾಷ್ಟ್ರ ಪ್ರಶಸ್ತಿ ತಂದುಕೊಟ್ಟ "ಬೆಟ್ಟದ ಹೂವು' ಚಿತ್ರವನ್ನು ಪ್ರದರ್ಶಿಸಲಾಗಿತ್ತು. ಅಭಿಮಾನಿಗಳ ಕಣ್ಣಲ್ಲಿ ನೀರು ತರಿಸಿತ್ತು. ಅದೇ ದಿನ ಮತ್ತು ರಾಜಕುಮಾರ ಚಿತ್ರವನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ವೀಕ್ಷಿಸಿದ್ದರು. ಇಡೀ ದಿನ ಪುನೀತ್ ರಾಜ್‌ಕುಮಾರ್ ಸಿನಿಮಾದ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಇದು ಅಪ್ಪು ಅಭಿಮಾನಿಗಳಿಗೆ ಅಲ್ಲದೆ ಎಲ್ಲರಿಗೂ ಖುಷಿ ನೀಡಿತ್ತು .



ಫಲಪುಷ್ಪ ಪ್ರದರ್ಶನದಲ್ಲೂ ಅಪ್ಪುವಿನ ನೆನಪೇ ಅರಮನೆ ಆವರಣದಲ್ಲಿ ಮತ್ತು ಕುಪ್ಪಣ್ಣ ಗಾರ್ಡನ್ ಫಲಪುಷ್ಪ ಪ್ರದರ್ಶನದಲ್ಲೂ ವಿವಿಧ ಬಗೆಯ ಹೂಗಳಿಂದ ಅಪ್ಪು ಅವರ ಕಲಾಕೃತಿಯನ್ನು ರಚಿಸಲಾಗಿತ್ತು. ಇದು ಫಲ ಪುಷ್ಪ ಪ್ರದರ್ಶನದಲ್ಲಿ ಎಲ್ಲರ ಮೆಚ್ಚುಗೆಗೆ ಮೆಚ್ಚುಗೆಗೆ ಕಾರಣವಾಯಿತು. ಅಭಿಮಾನಿಗಳು ಫೋಟೋ ಕ್ಲಿಕ್ಕಿಸಿ ಸಂತಸ ಪಟ್ಟರು. ಮರೆಯಾದ ಅಪ್ಪುವನ್ನು ಮರಳಿನಲ್ಲಿ ಕಂಡರು. ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಮರಳು ಶಿಲ್ಪ ಕಲೆಯ ಮೂಲಕ ಕಲಾವಿದ ಗೌರಿ ಅವರು ಅಪ್ಪು ಅವರ ಹಲವು ಪ್ರತಿಮೆಗಳನ್ನು ರಚಿಸಿದ್ದಾರೆ. ಬಾಲ್ಯದಿಂದ ಹಿಡಿದು ಜೇಮ್ಸ್ ಚಿತ್ರದವರೆಗಿನ ಎಂಟು ಕಲಾಕೃತಿಗಳು ಜನರನ್ನು ಆಕರ್ಷಿಸುತ್ತಿವೆ.

ದಸರಾ ದೀಪಾಲಂಕಾರದಲ್ಲೂ ಬೆಳಗಿದ ಅಪ್ಪು. ನಗರದ ಪ್ರಮುಖ ರಸ್ತೆಗಳಲ್ಲಿ ಪುನೀತ್ ಅವರ ಡಿಜಿಟಲ್ ಕಲಾಕೃತಿಗಳನ್ನು ಅಳವಡಿಸಲಾಗಿತ್ತು. ಯುವ ದಸರ ವೇದಿಕೆಯಲ್ಲೂ ಅಪ್ಪುವಿನ ನೆನಪೇ. ಮೊದಲ ದಿನದ ಕಾರ್ಯಕ್ರಮದಲ್ಲಿ ಅಶ್ವಿನಿ ಪುನೀತ್ ರಾಜಕುಮಾರ್ ರಾಘವೇಂದ್ರ ರಾಜಕುಮಾರ್ ಸೇರಿದಂತೆ ಪುನೀತ್ ಕುಟುಂಬಸ್ಥರೆಲ್ಲರೂ ವೇದಿಕೆಯಲ್ಲಿ ಅಪ್ಪುವನ್ನು ಸ್ಮರಿಸಿ, ಅಭಿಮಾನಿಗಳ ದುಃಖದಲ್ಲಿ ಭಾಗಿಯಾದರು. ದಸರಾ ಸ್ತಬ್ಧ ಚಿತ್ರ ಮೆರವಣಿಗೆಯಲ್ಲೂ ಅಪ್ಪು, ಚಾಮರಾಜನಗರ ಜಿಲ್ಲೆಯ ಸ್ತಬ್ಧ ಚಿತ್ರದಲ್ಲಿ ಅಪ್ಪುವನ್ನು ಕಂಡು ಅಭಿಮಾನಿಗಳು ಖುಷಿಪಟ್ಟರು. ಹೀಗೆ ದಸರಾದ ಪ್ರತಿಯೊಂದು ಕಾರ್ಯಕ್ರಮದಲ್ಲೂ ಅಪ್ಪುವಿನ ನೆನಪೇ ಅಜರಾಮರ.

–ಶ್ವೇತ.ಸಿ

## ದಸರಾ ಸಿನಿ ರಂಗ



ಮೈಸೂರು:ಸಾಂಸ್ಕೃತಿಕ ನಗರದಲ್ಲಿ ಇಂದು ದಸರಾ ಅತಿ ವಿಜೃಂಭಣೆಯಿಂದ ನಡೆಯುತ್ತಿದೆ. ಅದರಲ್ಲಿ ಹಲವಾರು ಕಾರ್ಯಕ್ರಮಗಳು ಸಹ ನಡೆಯುತ್ತಿದೆ. ದಸರಾ ಚಲನಚಿತ್ರೋತ್ಸವ ೨೬/ ೯ / ೨೨ರಂದು ಬೆಳಗ್ಗೆ ೧೨ಗಂಟೆಗೆ ಈ ಕಾರ್ಯಕ್ರಮವನ್ನು ಎಸ್ ಟಿ ಸೋಮಶೇಖರ್ ಅವರು ಉದ್ಘಾಟಿಸಿದರು. ಈ ಕಾರ್ಯಕ್ರಮಕ್ಕೆ ಸಿನಿಮಾರಂಗದ ನಟ–ನಟಿಯರು ನಿರ್ದೇಶಕರು ಪಾಲ್ಗೊಂಡಿದ್ದರು. ಅನುಪ್ರಭಾಕರ್, ಕಾವ್ಯ ಶೆಟ್ಟಿ, ಅಮೃತ ಅಯ್ಯಂಗಾರ್, ಪ್ರವೀಣ್ ಕೃಪಾಕರ್, ಸಹ ಪಾಲ್ಗೊಂಡಿದ್ದರು .ಈ ಕಾರ್ಯಕ್ರಮವನ್ನು ಸರ್ಕಾರದ ವಾರ್ತಾಇಲಾಖೆ ಸಹಯೋಗದೊಂದಿಗೆ ನಡೆಯುತ್ತದೆ.ದಸರಾ ಚಲನ ಚಿತ್ರೋತ್ಸವದಲ್ಲಿ ಇನ್ಬಾಕ್ಸ್‌ನಲ್ಲಿ ೩ ಸ್ಕ್ರೀನ್, ಡಿಯರ್ ಸಿನಲ್ಲಿ ಒಂದು ಸ್ಕ್ರೀನ್,,ದೇಶದ ವಿವಿಧ ಸಿನಿಮಾಗಳನ್ನು ಹಾಗೆ ಕನ್ನಡ ಸಿನಿಮಾಗಳು ಪ್ರಶಸ್ತಿ ಲಭ್ಯವಿರುವ ಮೂವಿಗಳನ್ನು ಜನರಿಗೆ ತೋರಿಸುವುದು.ಕಾರ್ಯ ಕ್ರಮವಾಗಿದೆ. ೨೮/ ೯ /೨೨ರಂದು ಪುನೀತ್ ರಾಜಕುಮಾರ್ ಅವರ ನೆನಪಿಗಾಗಿ ಆ ದಿನದಂದು ಪುನೀತ್ ರವರ ಮೂವಿಗಳನ್ನು ಏರ್ಪಡಿಸಿದರು. ಬೆಟ್ಟದ ಹೂವು, ರಾಜಕುಮಾರ, ಯುವರತ್ನ, ರಣವಿಕ್ರಮ, ಪೃಥ್ವಿ, ಅಂಜನಿಪುತ್ರ, ಈ ಮೂವಿಗಳನ್ನು ವೀಕ್ಷಿಸಲು ಪುನೀತ್ ರಾಜಕುಮಾರ್ ಅವರ ಧರ್ಮಪತ್ನಿ ಅಶ್ವಿನಿ ಅವರನ್ನು ಬರಮಾಡಿಕೊಂಡಿತ್ತು. ಚಲನ 'ಚಿತ್ರೋತ್ಸವ. ಭಾರತೀಯ ಚಿತ್ರ ಆಗಿದ್ದ ತಮಟೆ ಮೂವಿ ನೋಡಲು ನಿರ್ದೇಶಕರು ಆದಂತಹ ಮಯೂರ್ ಪಟೇಲ್ ಅವರ ತಂದೆ ಮದನ್ ಪಟೇಲ್ ಆಗಿ ಲೇಖಕರು ಅರವಿಂದ ಮಾಲಗತ್ತಿ ಹೀಗೆ ಹಲವಾರು ಜನರು ಸೇರಿದ್ದರು. ತಮಟೆ ಮೂವಿಯ ಬಗ್ಗೆ ಅರವಿಂದ ಮಾಲಗತ್ತಿಯವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ೩ /೧೦/ ೨೦೨೨ ರಂದು ಎಲ್ಲಾ ಜನರಿಗೂ ಉಚಿತ ಮೂವಿಗಳನ್ನು ನೋಡಲು ಉಚಿತ ಪ್ರವೇಶವನ್ನು ಏರ್ಪಡಿಸಿದರು.

–ರೋಹಿಣಿ.ಎಂ.ಸಿ

## ಪತ್ರಕರ್ತರಿಗೆ ಜನಪ್ರತಿನಿಧಿಗಳಿಗೆ ಯೋಗಶಿಬಿರ






**ನಾಡ ಹಬ್ಬ ದಸರಾ ಮಹೋತ್ಸವದ ಯೋಗ ದಸರಾ ಉಪಸಮಿತಿವತಿಯಿಂದ ಹಮ್ಮಿಕೊಂಡಿದ್ದ ಯೋಗವಾಹಿನಿ ಶಿಬಿರದಲ್ಲಿ ಯೋಗ ಮಾಡುತ್ತಿರುವ ಯೋಗಪಟುಗಳು**

ಮೈಸೂರು:ಮಂಗಳವಾರ ಬೆಳಗಿನ ವೇಳೆಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸದಸ್ಯರು ಯೋಗ ಶಿಬಿರದಲ್ಲಿ ಪಾಲ್ಗೊಂಡು ವಿವಿಧ ಭಂಗಿಯ ಯೋಗಾಸನಗಳನ್ನು ಪ್ರದರ್ಶಿಸಿದರು. ಅವರಿಗೆ ಆಯುಷ್ ಇಲಾಖೆ, ಜಿ.ಎಸ್.ಎಸ್ ಯೋಗ ಸಂಸ್ಥೆ, ಪತಂಜಲಿ ಯೋಗ ಶಿಕ್ಷಣ ಸಮಿತಿಯು ಕಾರ್ಯಕ್ರಮಕ್ಕೆ ಬೆಂಬಲವನ್ನು ನೀಡಿದವು. ನಾಡಹಬ್ಬ ದಸರಾ ಎಂದರೆ ಹಲವಾರು ವಿಶಿಷ್ಟತೆಗಳನ್ನು ಒಳಗೊಂಡಿದೆ ಅದರಲ್ಲಿ ಯೋಗ ಕಾರ್ಯಕ್ರಮವು ಕೂಡ ಒಂದು. ಯೋಗ ದಸರದ ಎರಡನೇ ದಿನದ ಕಾರ್ಯಕ್ರಮವು ಸರಸ್ವತಿಪುರಂನಲ್ಲಿರುವ ಜವರೇಗೌಡ ಪಾರ್ಕ್ ನಲ್ಲಿ ನೆರವೇರಿತು. ದಸರಾದ ಉಪ ಸಮಿತಿಯು ಹಮ್ಮಿಕೊಂಡಿದ್ದ ಯೋಗ ಶಿಬಿರ ಕಾರ್ಯಕ್ರಮವನ್ನು ಶಾಸಕ ಎಲ್ ನಾಗೇಂದ್ರರವರು ಉದ್ಘಾಟಿಸಿದರು. ಈ ಸಮಯದಲ್ಲಿ ಮಾತನಾಡಿದ ಅವರು ಜನರು ದಿನನಿತ್ಯದ ಯೋಗ ಮಾಡುವ ಮೂಲಕ ತಮ್ಮ ಆರೋಗ್ಯವನ್ನು ಉತ್ತಮವಾಗಿ ಇಟ್ಟುಕೊಳ್ಳಬಹುದು ಎಂದು ತಿಳಿಸಿದರು. ಮೈಸೂರಿಗೂ ಮತ್ತು ಯೋಗಕ್ಕೂ ಏನೋ ಸಂಬಂಧವಿದೆ ಎಂದು ಗೋಕುಲಂ ಬಡಾವಣೆಗೆ ಪ್ರತಿ ವರ್ಷವೂ ದೇಶ ವಿದೇಶಗಳಿಂದ ಸಾವಿರಾರು ಮಂದಿ ಆಗಮಿಸಿ ಯೋಗವನ್ನು ಕಲಿಯುತ್ತಾರೆ .ಇದು ಮೈಸೂರಿಗೆ ಹೆಮ್ಮೆಯ ವಿಚಾರ ಎಂದು ಹೇಳಿದರು.ಆದರೆ ಮೈಸೂರಿನ ಜನರು ಯೋಗವನ್ನು ಮಾಡಲು ನಿರ್ಲಕ್ಷ್ಯ ಮಾಡುತ್ತಾರೆ ಎಂದು ತಿಳಿಸಿದರು.ಭಾರತದ ಪ್ರಧಾನ ಮಂತ್ರಿ ಮೋದಿಯವರು ಯೋಗ ದಿನದಂದು ಮೈಸೂರಿನ ಅರಮನೆ ಆವರಣದಲ್ಲಿ ಯೋಗವನ್ನು ಆಚರಿಸಿಲು ಪ್ರಮುಖ ಕಾರಣಕರ್ತರು. ಅದೇ ರೀತಿ ಮುಂದಿನ ದಿನಗಳಲ್ಲಿ ಲಕ್ಷಾಂತರ ಮಂದಿಯನ್ನು ಒಂದೆಡೆಗೆ ಸೇರಿಸಿ ಯೋಗ ಮಾಡಲು ತಯಾರಿ ನಡೆಸುತ್ತೇವೆ ಎಂದರು. ಕಾರ್ಯಕ್ರಮದಲ್ಲಿ ಯೋಗ ದಸರಾ ಸಮಿತಿ ಅಧ್ಯಕ್ಷ ಬಾಲಕೃಷ್ಣ ,ಉಪಮೇಯ ರೂಪ ,ನಗರ ಪಾಲಿಕೆ ಸದಸ್ಯರಾದ ಬಿ.ವಿ ಮಂಜುನಾಥ, ಶಿವಕುಮಾರ್ ,ಪ್ರಮೀಳಾ ಭರತ್ ,ಪತ್ರಕರ್ತರ ಅಧ್ಯಕ್ಷ ರವಿಕುಮಾರ್, ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತಿಯಿದ್ದರು.

**– ತೇಜ ಎಸ್**

## ದಸರಾ ವಸ್ತುಪ್ರದರ್ಶನ ಬರಿ ಹೆಸರಲ್ಲ ಒಂದು ಸುಂದರ ತಾಣ



ನಗರದ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಕೆಇಎ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಅವರೊಂದಿಗೆ ಮರಳು ಕಲಾವಿದೆ ಎಂಎನ್ ಗೌರಿ, ಮೈಸೂರು ದಸರಾ ಎಂದರೆ, ಅದರಲ್ಲಿ ಅತಿ ಹೆಚ್ಚು ಜನರನ್ನು ಆಕರ್ಷಿಸುವುದು ದಸರಾ ವಸ್ತು ಪ್ರದರ್ಶನ. ಇದು ೯೦ ದಿನಗಳ ಕಾಲ ಇರುವ ವಸ್ತು ಪ್ರದರ್ಶನವಾಗಿದೆ. ಈ ವಸ್ತು ಪ್ರದರ್ಶನಕ್ಕೆ ವಯಸ್ಕರಿಗೆ: ೩೦ರೂ ಹಾಗೂ ಮಕ್ಕಳಿಗೆ:೨೦ರೂಗಳನ್ನು ಎಂಟ್ರಿ ಚಾರ್ಜ್ ಆಗಿರುತ್ತದೆ.

ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಮರಳಿನ ಶಿಲ್ಪಗಳು ...ನಗರದ ಕಲಾವಿದೆ ಎಂ.ಎನ್.ಗೌರಿ ಅವರು ಸೆ.೨೦ರೊಳಗೆ ಡಾ.ಪುನೀತ್ ರಾಜ್ ಕುಮಾರ್, ಪ್ರಧಾನಿ ನರೇಂದ್ರ ಮೋದಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಶಿಲ್ಪಗಳನ್ನು ರಚಿಸಿದರು. ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಎರಡು ವರ್ಷಗಳಿಂದ ದಸರಾ ಎಕ್ಸಿಮಿಷನ್ ನಡೆಯದ ಕಾರಣ, ಈ ವರ್ಷ ಎಕ್ಸಿಮಿಷನ್ ಅನ್ನು ವಿಶಿಷ್ಟ ರೀತಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ ಮತ್ತು ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುವ ಪ್ರಯತ್ನದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ (ಕೆಇಎ), ಸ್ಥಳದಲ್ಲಿ ಮರಳು ಶಿಲ್ಪಗಳಿಗೆ ದಾರಿ ಮಾಡಿಕೊಡುತ್ತಿದೆ. ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಹೆಚ್ಚು ಜನ ಸೇರುವ ಸ್ಥಳದಲ್ಲಿಯೇ ಮರಳು ಶಿಲ್ಪಗಳನ್ನು ರಚಿಸಲಾಗುತ್ತಿದೆ. ಮಳೆ–ಗಾಳಿಯಿಂದ ಶಿಲ್ಪಗಳನ್ನು ರಕ್ಷಿಸಲು ಕಬ್ಬಿಣದ ಕಂಬಗಳು ಮತ್ತು ತಗಡಿನ ಶೀಟ್‌ಗಳನ್ನು ಬಳಸಿ ತಲಾ ೨೦x೫೦ ಅಡಿ ಅಳತೆಯ ಎರಡು ಪ್ರತ್ಯೇಕ ಶೆಡ್‌ಗಳನ್ನು ನಿರ್ಮಿಸಲಾಗಿದೆ ಮತ್ತು ನೀರು ನಿಲ್ಲುವುದನ್ನು ತಡೆಯಲು ಕಾರ್ಮಿಕರು ಸಿಮೆಂಟ್ ಬಳಸಿ ವೇದಿಕೆ ನಿರ್ಮಿಸುತ್ತಿದ್ದಾರೆ. ನಗರದ ಖ್ಯಾತ ಮರಳು ಕಲಾವಿದೆ ಎಂ.ಎನ್.ಗೌರಿ ಮರಳು ಶಿಲ್ಪಗಳನ್ನು ರಚಿಸಿದರು .ನದಿ ಮರಳಿನ ಬದಲಿಗೆ ಎಂ–ಸ್ಯಾಂಡ್ ರಚನೆಗೊಂಡಿದೆ . ನಿತ್ಯ ನದಿ ಮರಳು ಸಿಗದ ಕಾರಣ ಮೂರ್ತಿ ರಚನೆಗೆ ಎಂ–ಸ್ಯಾಂಡ್ ಬಳಸಲಾಗುತ್ತಿದ್ದು, ನಿನ್ನೆ ೧೦ ಲೋಡ್ ಎಂ–ಸ್ಯಾಂಡ್ ಪೂರೈಕೆಯಾಗಿದೆ. ನದಿಯ ಮರಳನ್ನು ಬಳಸಿ ಶಿಲ್ಪಗಳನ್ನು ರಚಿಸಿದ್ದರೆ, ಅವುಗಳಿಗೆ ಬಣ್ಣಗಳನ್ನು ಬಳಸುವ ಅಗತ್ಯವಿಲ್ಲ, ಆದರೆ ಈಗ ಎಂ–ಸ್ಯಾಂಡ್ ಬಳಸುತ್ತಿರುವುದರಿಂದ, ಎಂ–ಸ್ಯಾಂಡ್ ಒಣಗಿದ ನಂತರ ಶಿಲ್ಪಗಳು ಬಿಳಿಯಾಗಬಹುದು, ಅದು ಆಕರ್ಷಕವಾಗಿರುವುದಿಲ್ಲ. ಆದ್ದರಿಂದ, ಮರಳು ಶಿಲ್ಪಗಳನ್ನು ಆಕರ್ಷಕವಾಗಿಸಲು, ಸ್ಪ್ರೇ ಬಣ್ಣಗಳನ್ನು ಬಳಸಲಾಗುವುದು. ಪವರ್ ಸ್ಟಾರ್' ಪುನೀತ್ ರಾಜ್‌ಕುಮಾರ್ ಅವರ ನೆನಪಿಗಾಗಿ, ಅವರ ಚಿಕ್ಕ ದಿನಗಳಲ್ಲಿ ದಿವಂಗತ ನಟನ ನಾಲ್ಕೈದು ಮರಳು ಶಿಲ್ಪಗಳು ಅವರ ಪೋಷಕರೊಂದಿಗೆ ಡಾ. ರಾಜ್‌ಕುಮಾರ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್, ಅವರ ಕೊನೆಯ ಚಿತ್ರ 'ಜೇಮ್ಸ್' ನಲ್ಲಿ ಸೈನಿಕನಾಗಿ ಪಾರಿವಾಳ ಕುಳಿತು ಪುನೀತ್ ಅವರ ಭುಜದ ಮೇಲೆ ಶೆಡ್‌ನಲ್ಲಿ ರಚಿಸಲಾಗಿದೆ. ಎರಡನೇ ಶೆಡ್‌ನಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವದ ಸಂದರ್ಭವನ್ನು ಗುರುತಿಸುವ ಯೋಗ ಭಂಗಿಯಲ್ಲಿ ಪ್ರಧಾನಿ ಮೋದಿ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಮರಳು ಶಿಲ್ಪಗಳನ್ನು ರಚಿಸಲಾಯಿತು. 'ಕೋಟಿ ವೆಚ್ಚದಲ್ಲಿ ಮರಳು ಶಿಲ್ಪಗಳನ್ನು ರಚಿಸಲಾಗುತ್ತಿದೆ. ೫ ಲಕ್ಷದಿಂದ ರೂ. ೬ ಲಕ್ಷ. ಪ್ರತಿ ಶಿಲ್ಪವು ೧೦ ಅಡಿ ಎತ್ತರ ಮತ್ತು ೨೦ ಅಡಿ ಅಗಲವಿದೆ. ಮಳೆ, ಗಾಳಿಯಿಂದ ಶಿಲ್ಪಗಳನ್ನು ರಕ್ಷಿಸಲು ಕ್ರಮ ಕೈಗೊಳ್ಳಲಾಗಿದೆ. ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಕುಟುಂಬದ ಸದಸ್ಯರು ದಸರಾ ಮಹೋತ್ಸವದಲ್ಲಿ ಭಾಗವಹಿಸಲಿದ್ದು, ಅವರನ್ನು ಇಲ್ಲಿಗೆ ಕರೆತರುವ ಯೋಜನೆ ಇದೆ ಎಂದು ಕೆಇಎ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ರುದ್ರೇಶ ್ ತಿಳಿಸಿದ್ದಾರೆ.

–ಪವಿತ್ರ..ವಿ

# ಜಟಕಾ ಕುದುರೆ ಹತ್ತಿ ಮೈಸೂರು ನೋಡುವ



ಭವ್ಯವಾದ ಮೈಸೂರು ಅರಮನೆಗೆ ಭೇಟಿ ನೀಡಿದಾಗ ನೀವು ರಾಜಮನೆತನದವರಂತೆ ಭಾವಿಸಿದ್ದರೆ, ಹಿಂದಿನ ಕಾಲದ ಗಾಂಭೀರ್ಯ ಮತ್ತು ಇಂದಿನ ಅದ್ಭುತಗಳ ನಡುವೆ ನಿಮ್ಮ ಸವಾರಿಯನ್ನು ಟಾಗಲ್ ಮಾಡುವ ಟೊಂಗಾದಲ್ಲಿ ಸವಾರಿ ಮಾಡಲು ಮರೆಯದಿರಿ. ಗಾಡಿಗಳು (ಬಗ್ಗಿಗಳು), ಭವ್ಯವಾದ ಕುದುರೆಗಳಿಂದ ಸೊಗಸಾಗಿ ಚಿತ್ರಿಸಲ್ಪಟ್ಟಿವೆ, ರಾಜ ಸಾಮ್ರಾಜ್ಯದ ಸ್ಮರಣಾರ್ಥವು ಭಾಗಶಃ ಸಾಕ್ಷಿಯಾಗಿದೆ ಎಂದು ಖಚಿತಪಡಿಸುತ್ತದೆ.ಟಾಂಗಾಗಳು ಇನ್ನೂ ಇರುವ ಕೆಲವು ಸ್ಥಳಗಳಲ್ಲಿ ಮೈಸೂರು ಕೂಡ ಇದೆ. ಅವರು ಸುದೀರ್ಘ ಇತಿಹಾಸವನ್ನು ಹೊಂದಿದ್ದಾರೆ, ಮಹಾರಾಜರ ಕಾಲದಿಂದಲೂ ಕುದುರೆ-ಎಳೆಯುವ ಟಾಂಗಾಗಳು ಆದ್ಯತೆಯ ಸಾರಿಗೆ ವಿಧಾನವಾಗಿತ್ತು. ಈಗ ಜಾಯ್ ರೈಡ್‌ಗಳಿಗೆ ಮಾತ್ರ ಬಳಸಲಾಗುತ್ತಿದ್ದು, ಟಾಂಗಾಗಳು ವಿನೋದಮಯವಾಗಿವೆ, ಬಾಡಿಗೆಗೆ ಅಗ್ಗವಾಗಿವೆ ಮತ್ತು ಪರಿಸರ ಸ್ನೇಹಿಯಾಗಿವೆ. ನಗರದಲ್ಲಿ ೪೦ ಟಾಂಗಾಗಳು ಮತ್ತು ೨೦ ಸಾರೋಟ್‌ಗಳು ಕಾರ್ಯನಿರ್ವಹಿಸುತ್ತವೆ. 'ವಿಕ್ಟೋರಿಯಾ' ಎಂದೂ ಕರೆಯಲ್ಪಡುವ ಸಾರೋಟ್‌ಗಳು ನಾಲ್ಕು ಚಕ್ರಗಳನ್ನು ಹೊಂದಿದ್ದು ಎಂಟು ಜನರನ್ನು ಹೊತ್ತೊಯ್ಯಬಲ್ಲವು. ಟೊಂಗಾ ಅಥವಾ 'ಮೈಸೂರು ಶಾ ಪಸಂದ್ ಟೊಂಗಾ' ದ್ವಿಚಕ್ರಗಳಾಗಿದ್ದು, ನಾಲ್ಕು ಜನರನ್ನು ಹೊತ್ತೊಯ್ಯಬಹುದು ಮತ್ತು ತುಲನಾತ್ಮಕವಾಗಿ ಸಣ್ಣ ಕುದುರೆಯಿಂದ ಎಳೆಯಲಾಗುತ್ತದೆ .

ಪ್ರವಾಸೋದ್ಯಮಕ್ಕೆ ಅವಿಭಾಜ್ಯ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ಪರಿಚಯಿಸಿದ ಸಾರೋಟ್‌ಗಳು ಅಂದಿನಿಂದ ಮೈಸೂರು ಪ್ರವಾಸೋದ್ಯಮದ ಅವಿಭಾಜ್ಯ ಅಂಗವಾಗಿದೆ. ದಸರಾ ಸಂದರ್ಭದಲ್ಲಿ ಈ ಟಾಂಗಾವಾಲಾಗಳ ವ್ಯಾಪಾರ ಉತ್ತುಂಗಕ್ಕೇರುತ್ತದೆ. ಒಂದು ಸಾರೋಟ್ ಬೆಲೆ ಸುಮಾರು ರೂ. ೩ ಲಕ್ಷ ಮತ್ತು ಈ ಗಾಡಿಗಳನ್ನು ಎಳೆಯುವ ಗಟ್ಟಿಮುಟ್ಟಾದ ಕುದುರೆಗಳ ಬೆಲೆ ರೂ. ೧ ಲಕ್ಷ - ರೂ. ಅವರ ತಳಿಗೆ ಅನುಗುಣವಾಗಿ ೨ ಲಕ್ಷ ರೂ. ಚಿಕ್ಕ ಟೊಂಗೆ ರೂ. ೨೫,೦೦೦ - ರೂ. ೫೦,೦೦೦ ಮತ್ತು ಟಾಂಗಾಗೆ ಸೂಕ್ತವಾದ ಸಣ್ಣ ಕುದುರೆಯನ್ನು ರೂ. ನಡುವೆ ಖರೀದಿಸಬಹುದು. ೧೦,೦೦೦ ಮತ್ತು ರೂ. ೨೫,೦೦೦. ಬಿಜಾಪುರದಿಂದ ಕುದುರೆಗಳನ್ನು ತರಲಾಗುತ್ತದೆ ಮತ್ತು ಎಲ್ಲಾ ಸಾರೋಟ್‌ಗಳು ಪಂಜಾಬ್‌ನ ಪಟಿಯಾಲದಿಂದ ಬಂದವು. ರಾಷ್ಟ್ರೀಕೃತ ಬ್ಯಾಂಕುಗಳು ಈ ಗಾಡಿಗಳನ್ನು ಖರೀದಿಸಲು ಸಾಲವನ್ನು ನೀಡುತ್ತವೆ .ಕುದುರೆ ಎಳೆಯುವ ರಥಗಳ ಸಂಘದ ಅಧ್ಯಕ್ಷ ಫಯಾಜ್ ಅಹಮದ್, ದಸರಾ ಪ್ರವಾಸಿಗರನ್ನು ಸೆಳೆಯುತ್ತದೆ ಮತ್ತು ಸಾರೋಟ್‌ಗಳು ವಿಶಿಷ್ಟ ಮತ್ತು ರಾಯಲ್ ಆಗಿ ಕಾಣುವುದರಿಂದ ಅವು ನೆಚ್ಚಿನವಾಗಿವೆ. ರಾಜಮನೆತನ ಮತ್ತು ಪ್ರಾಣಿಗಳ ಮೇಲಿನ ಅವರ ಪ್ರೀತಿಯಿಂದಾಗಿ ಅವರು ಇನ್ನೂ ಉಳಿಸಿಕೊಳ್ಳಲು ಮತ್ತು ಬದುಕಲು ಸಮರ್ಥರಾಗಿದ್ದಾರೆ ಎಂದು ಅವರು ಸೇರಿಸುತ್ತಾರೆ. ಅರಮನೆಯ ವರಾಹಸ್ವಾಮಿ ದ್ವಾರದ ಎದುರು ಇರುವ ಜಾಗವು ಪ್ರವಾಸಿಗರನ್ನು ಸೆಳೆಯಲು ವೇದಿಕೆಯಾಗಿದೆ. ಸಿಟಿ ಪೊಲೀಸರು ತಮ್ಮ ವ್ಯವಹಾರವನ್ನು ನಡೆಸಲು ನಿಜವಾಗಿಯೂಸಹಾಯಕವಾಗಿದ್ದಾರೆ ಎಂದು ಅವರು ಸೇರಿಸುತ್ತಾರೆ .ಕೇರಳದ ಪ್ರವಾಸಿ ಎಂ.ಮುರಳಿ ಅವರು ಟಾಂಗಾ ಸವಾರಿ ಮುಗಿಸಿ ಸಂಭ್ರಮಿಸಿದರು. "ಮೈಸೂರು ದಸರಾ ವಿಶೇಷ ಎಂದು ನಾನು ಕೇಳಿದ್ದೆ ಮತ್ತು ನಾನು ಮೊದಲ ಬಾರಿಗೆ ಟಾಂಗಾ ರೈಡ್ ಮಾಡಿದ್ದೇನೆ. ಈ ಬಗ್ಗಿಗಳು ಇಂಗ್ಲೆಂಡಿನ ವಿಕ್ಟೋರಿಯಾ ಬಗ್ಗಿಗಳನ್ನು ಹೋಲುತ್ತವೆ. ಹೆರಿಟೇಜ್ ಸಿಟಿಯ ಮೂಲಕ ಟಾಂಗಾ ಸವಾರಿ ವಿಭಿನ್ನ ಅನುಭವವಾಗಿತ್ತು, "ಎಂದು ಅವರು ನೆನಪಿಸಿಕೊಳ್ಳುತ್ತಾರೆ ಸಾರೋಟ್ ಸವಾರಿಯ ಹೊರತಾಗಿ, ಇನ್ನೂ ಕೆಲವು ಜನರು ದ್ವಿಚಕ್ರದ ಶಾ ಪಸಂದ್ ಟಾಂಗಾವನ್ನು ಇಷ್ಟಪಡುತ್ತಾರೆ, ಅದು ರೂ. ೧೫೦ ರಿಂದ ರೂ. ಪ್ರತಿ ಸವಾರಿಗೆ ೨೦೦ ರೂ. ಈ ಟಾಂಗಾಗಳು ಅರಮನೆಯ ಬಲರಾಮ ದ್ವಾರ, ವರಾಹಸ್ವಾಮಿ ದ್ವಾರ, ಮೈಸೂರು ಮೃಗಾಲಯ, ಸೇಂಟ್ ಫಿಲೋಮಿನಾ ಚರ್ಚ್ ಮತ್ತು ಜಗನ್ಮೋಹನ ಅರಮನೆಯ ಬಳಿ ಕಂಡುಬರುತ್ತವೆ. . ನಿರ್ವಹಿಸಬೇಕಾಗುತ್ತದೆ. ಫಯಾಜ್ ಅಹಮದ್ ತಮ್ಮ ನಿರಾಶೆಯನ್ನು ವ್ಯಕ್ತಪಡಿಸುತ್ತಾರೆ ಮತ್ತು ಟಾಂಗಾ ಸ್ಟ್ಯಾಂಡ್‌ಗಳನ್ನು ಮಂಜೂರು ಮಾಡುವ ತಮ್ಮ ಮನವಿ ಇನ್ನೂ ಬಾಕಿಯಿದೆ ಎಂದು ಹೇಳುತ್ತಾರೆ.

**-ರಾಕೇಶ್ ಡಿ ಎಂ**



ಮೈಸೂರು ವಿಶ್ವವಿದ್ಯಾಲಯದ ಮನಸ ಗಂಗೋತ್ರಿ ಪತ್ರಿಕೋದ್ಯಮ ಮತ್ತು ಸಮೂಹ ಸಂವೋಹನ ವಿಭಾಗದಲ್ಲಿ ದಸರಾ ವಿಶೇಷಾಂಕ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆಯನ್ನು ಬಿಡುಗಡೆಗೊಡಿಸಲಾಯಿತು ಕಾರ್ಯಕ್ರಮದಲ್ಲಿ ಡೆಕ್ಕನ್ ಎಲಾಡ್ ದಿನಪತ್ರಿಕೆಯ ಸಹಾಯಕ ಸಂಪಾದಕರಾದ ಸತೀಶ್ ರವರು ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎನ್ ಮಮತಾ, ಪ್ರಾಧ್ಯಾಪಕಿ ಡಾ. ಪ್ರೊ. ಎಂ ಎಸ್ ಸಪ್ನಾಹಾಗೂ ಸಂಶೋಧಕರು ಮತ್ತು ವಿಭಾಗದ ವಿದ್ಯಾರ್ಥಿಗಳು ಹಾಜರಿದ್ದರು.

## ೬ ಲಕ್ಷಕ್ಕೂ ಹೆಚ್ಚು ಜನರಿಂದ ಜಂಬೂಸವಾರಿ ವೀಕ್ಷಣೆ



ತಾಯಿ ದರ್ಶನಕ್ಕೆ ಮುಗ್ಗಿ ಬಿದ್ದ ಭಕ್ತರು

ನಗರದಲ್ಲಿ ಬುಧವಾರ ನಡೆದ ನಾಡ ಹಬ್ಬ ಮೈಸೂರು ದಸರಾದ ಕೊನೆಯ ಹಂತದ ಜಂಬೂ ಸವಾರಿಗೆ ಸುಮಾರು ಐದರಿಂದ ಏಳು ಲಕ್ಷ ಜನರು ಸಾಕ್ಷಿಯಾದರು.

ಮೈಸೂರು ಅರಮನೆಯಿಂದ ಮೆರವಣಿಗೆಯ ಪರಾಕಾಷ್ಠೆಯಾದ ಬನ್ನಿಮಂಟಪದವರೆಗೆ ಐದು ಕಿಲೋಮೀಟರ್ ಉದ್ದದ ಮೆರವಣಿಗೆ ಮಾರ್ಗವನ್ನು ರೂಪಿಸುವ ರಾಜಮಾರ್ಗದಲ್ಲಿ ೭೫೦ ಕೆಜಿ ತೂಕದ ಗೋಲ್ಡನ್ ಹೌದಾವನ್ನು ಸುಲಭವಾಗಿ ಹೊತ್ತೊಯ್ಯುವ ಆನೆ ಅಭಿಮನ್ಯುವನ್ನು ನೋಡುವುದು ಒಂದು ದೃಶ್ಯ ಮನೋಹರವಾಗಿದೆ.

ಇದಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೇಯರ್ ಶಿವಕುಮಾರ್, ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮತ್ತು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರು ಸುವರ್ಣ ಸೌಧದಲ್ಲಿರುವ ಚಾಮುಂಡೇಶ್ವರಿ ದೇವಿಯ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿದರು. ಶುಭ ಮೀನ ಲಗ್ನ.

ಕೋವಿಡ್ -೧೯ ಸಾಂಕ್ರಾಮಿಕ ರೋಗದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಇದು ಕಡಿಮೆ ಪ್ರಮುಖ ವ್ಯವಹಾರವಾಗಿರುವುದರಿಂದ ಈ ವರ್ಷ ದಸರಾ ಮಹತ್ವವನ್ನು ಪಡೆದುಕೊಂಡಿದೆ. ಎರಡು ವರ್ಷಗಳ ಅಂತರದ ನಂತರ, ವಾರ್ಷಿಕ ಈವೆಂಟ್‌ಗೆ ಸಂಬಂಧಿಸಿದ ವೈಭವವು ಪ್ರಪಂಚದಾದ್ಯಂತದ ಜನರನ್ನು ಆಕರ್ಷಿಸುತ್ತಿದೆ.

ಇತ್ತೀಚಿನ ವರದಿಯ ಪ್ರಕಾರ, ಅಭಿಮನ್ಯು ಗೋಲ್ಡನ್ ಹೌಡಾವನ್ನು ಹೊತ್ತುಕೊಂಡು ಕೆಆರ್ ಸರ್ಕಲ್ ಮೂಲಕ ಸಯ್ಯಾಜಿ ರಾವ್ ರಸ್ತೆಯನ್ನು ಈಗಾಗಲೇ ತಲುಪಿದ್ದಾರೆ.

**-ತೇಜ ಎಸ್**

## ಅರಮನೆ ನಗರಿಯಲ್ಲಿ ದಸರಾ ವೈಭವ

ಅರಮನೆಯಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್ ನಡೆಸಿದ್ದಾರೆ.ಬೆಳಗ್ಗೆ ೧೧:೧೫ ರಿಂದ ಆರಂಭವಾದ ಖಾಸಗಿ ದರ್ಬಾರ್ ಸುಮಾರು ೪೫ ನಿಮಿಷಗಳ ಕಾಲ ನಡೆದಿದೆ. ರತ್ನ ಖಚಿತ ಸಿಂಹಾಸನವೇರಿ ರಾಜಮನೆತನದ ಕತ್ತಿಯೊಂದಿಗೆ ಸಾಂಪ್ರದಾಯಿಕ ರಾಜ ಪೋಷಾಕಿನಲ್ಲಿ ನವರಾತ್ರಿ ದರ್ಬಾರ್ ನಡೆಸಿದರು. ಹಾಗೂ ಹೊರಾಂಗಣದಲ್ಲಿರುವ ದೇವಾಲಯಕ್ಕೆ ಪೂಜೆ ಸಲ್ಲಿಸಿ ದರ್ಬಾರ್ ಮುಕ್ತಾಯಗೊಳಿಸಿದರು .



ಇನ್ನೂ, ಮೈಸೂರು ದಸರಾ ಮಹೋತ್ಸವ ಉದ್ಘಾಟಿಸಿದ ಪ್ರಪ್ರಥಮ ರಾಷ್ಟ್ರಪತಿ ಎಂಬ ಗೌರವಕ್ಕೆ ಪಾತ್ರರಾದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರಿನಲ್ಲೇ ತಯಾರಾದ ಮೈಸೂರು ರೇಷ್ಮೆ ಸೀರೆ ಧರಿಸಿ, ದಸರಾ ಉದ್ಘಾಟಿಸುವ ಮೂಲಕ ಮೈಸೂರಿಗೆ ವಿಶೇಷ ಗೌರವ ನೀಡಿದ್ದಾರೆ. ರಾಷ್ಟ್ರಪತಿಯವರಿಗಾಗಿ ವಿಶೇಷವಾಗಿ ನೇಯ್ದ ಮೈಸೂರು ರೇಶ್ಮೆ ಸೀರೆ ಇದು. ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಅವರು ಜಿಲ್ಲಾಡಳಿತದ ಪರವಾಗಿ ರಾಷ್ಟ್ರಪತಿಯವರನ್ನು ಅಧಿಕೃತವಾಗಿ ಆಹ್ವಾನಿಸುವಾಗ ಗೌರವಸೂಚಕವಾಗಿ ಈ ಮೈಸೂರು ರೇಶ್ಮೆ ಸೀರೆ, ಫಲ ತಾಂಬೂಲ ನೀಡಿ ಗೌರವಿಸಿದ್ದರು. ಇದೇ ಉಡುಪು ಧರಿಸಿ ರಾಷ್ಟ್ರಪತಿಯವರು ಮೈಸೂರು ದಸರಾ ಮಹೋತ್ಸವಕ್ಕೆ ಆಗಮಿಸಿದ್ದು ಮೈಸೂರಿಗರಿಗೆ ಸಂತಸ ತಂದಿದೆ. ರಾಷ್ಟ್ರಪತಿಯವರು ಬಿಳಿ ಸೀರೆ ಇಷ್ಟಪಡುತ್ತಾರೆ ಎಂಬುದನ್ನು ಅರಿತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಸರ್ಕಾರಿ ಸ್ವಾಮ್ಯದ ಕೆ.ಎಸ್.ಐ.ಸಿ.ಯ ಸರ್ಕಾರಿ ರೇಶ್ಮೆ ಕಾರ್ಖಾನೆಗೆ ಈ ಉಡುಪು ತಯಾರಿಕೆಗೆ ಆದೇಶ ನೀಡಿ, ಸಿದ್ಧಪಡಿಸಿದ್ದರು. ಮೈಸೂರಿನ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ೧೯೧೨ರಲ್ಲಿ ನಿರ್ಮಿಸಿದ ರೇಷ್ಮೆ ಕಾರ್ಖಾನೆ ಎಂಬ ಹೆಮ್ಮೆ ಈ ಕಾರ್ಖಾನೆಗೆ ಇದೆ.

**-ಪುಷ್ಪಲತ**

# ದಸರಾ ವೈಭವ



## ಸಾಂಸ್ಕೃತಿಕ ನಗರಿಯಲ್ಲಿ ಚಿಣ್ಣರ ಕಲರವ...



ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸ್ವರ್ಗವೇ ಧರಗಿಳಿದಂತೆ ಧಾವಿಸುತ್ತಿದೆ ವರ್ಷಾನು ವರ್ಷನಗಳಿಂದ ದಸರಾ ಹಬ್ಬವನ್ನು ವೈಭವ ಹಾಗೂ ವಿಜೃಂಭಣೆಯಿಂದ ಮಾಡುವುದು ಮೈಸೂರಿನ ಸಂಪ್ರದಾಯ. ದಸರಾದ 9 ದಿನ ಹಾಗೂ ವಿಜಯದಶಮಿಯ ಒಂದು ದಿನ ಮೈಸೂರು ಹಲವಾರು ಕಾರ್ಯಕ್ರಮಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತದೆ ಅದರಲ್ಲಿ ಮಕ್ಕಳಾ ದಸರಾವೂ ಒಂದು.ನಾಡ ಹಬ್ಬದ ಪ್ರಯುಕ್ತ ಸೆಪ್ಟೆಂಬರ್ 29 ಹಾಗೂ 30 ರಂದು ನಗರಿಯ ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ಮಕ್ಕಳ ದಸರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಶಿಕ್ಷಣ ಸಚಿವ ಸುರೇಶ್ ಕುಮಾರ್, ಅವರು "ಕೋವಿಡ್ ನಂತರ ಹಲವಾರು ದಿನ ಯೋಚನೆ ಮಾಡಲಾಗಿತ್ತು ಇದನ್ನು ಯಶಸ್ವಿಗೊಳಿಸಲು ಹಾಗೂ ಒಳ್ಳೆಯ ಸಮಾಜ ಸುಷ್ಟಿಸಲು ಎಲ್ಲರೂ ಕೈಜೋಡಿಸುವುದು ಮುಖ್ಯ"ಎಂದು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಎಲ್ ನಾಗೇಂದ್ರ ಅವರು " ಮಕ್ಕಳ ಆಕರ್ಷಣೀಯ ಪ್ರತಿಭೆಯನ್ನು ಸರ್ಕಾರ ಗುರುತಿಸಿದೆ ಮಕ್ಕಳಿಂದ ಕೂಡಿ ಬಂದ ವಸ್ತು ಪ್ರದರ್ಶನ ಮನಸ್ಸಿಗೆ ಬಹಳ ಖುಷಿ ನೀಡಿದೆ ಅನ್ನುವುದರ ಜೊತೆಗೆ ಪುಟಾಣಿ ಪ್ರತಿಭೆಯಾದ ದಮನಿ ಅನ್ನುವ ಬಾಲಕಿಗೆ 10,000 ನಗದು ಬಹುಮಾನ ಕೊಡುವುದರ ಮೂಲಕ ಪ್ರೋತ್ಸಾಹ ತೋರಿದರು. ಕಾರ್ಯಕ್ರಮಕ್ಕೆ ವಿಶೇಷ ಆಕರ್ಷಣೀಯವಾದ ಗಿಚ್ಚಿ ಗಿಲಿ ಗಿಲಿ ವಿಜೇತ ವಂಶಿಕ ಅಂಜನಿ ಕಶ್ಯಪ್ ಮುದ್ದಾದ ನೃತ್ಯದ ಮೂಲಕ ಎಲ್ಲರ ಮನಸೆಳೆದಳು. ಕಾರ್ಯಕ್ರಮದಲ್ಲಿ ಡಾ.ಜಿ. ಬಗಾದಿ ಗೌತಮ್, ಮೇಯರ್ ಶಿವಕುಮಾರ್, ಉಪ 'ಮೇಯರ್ ಡಾ.ಜಿ.ರೂಪ,ಮೃಗಾಲಯದ ಪ್ರಾಧಿಕಾರ ಅಧ್ಯಕ್ಷ ಎಂ.ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಉದ್ಘಾಟನಾ ಕಾರ್ಯಕ್ರಮದ ನಂತರ ಶಾಲಾ ವಿದ್ಯಾರ್ಥಿಗಳಿಂದ ಸುಗಮ ಸಂಗೀತ ಆಶುಭಾಷಣ ನಾಟಕ ಪ್ರಬಂಧ ಸ್ಪರ್ಧೆ ಹಾಗೂ ವಿಶೇಷವಾಗಿ ಗಜಪಡೆಯ ಮಾವುತರ ಮಕ್ಕಳಿಂದ ನೃತ್ಯ ಪ್ರದರ್ಶನಕಾರ್ಯಕ್ರಮವು ನಡೆಯಿತು.

### ಅಚ್ಚರಿ ಮೂಡಿಸಿದ ಬಾಲಪ್ರತಿಭೆ

ಗಿನ್ನಿಸ್ ರೆಕಾರ್ಡ್ ಮಾಡಿರುವ ಬಾಲ ಪ್ರತಿಭೆ ದಮನಿ ಈಕೆ 224 ವಿಧಾನಸಭಾ ಕ್ಷೇತ್ರದ ಹೆಸರನ್ನು ತೃತರಾಷ್ಟನ 101 ಮಕ್ಕಳ ಹೆಸರನ್ನು ಅಂಬೇಡ್ಕರ್ ಅವರ ಬಿರುದುಗಳನ್ನು ಹಾಗೂ ಪುನೀತ್ ರಾಜ-ಕುಮಾರ್ ನಟಿಸಿದ ಚಲನಚಿತ್ರಗಳ ಇಸುವಿಗಳನ್ನು ಒಂದೇ ನಿಮಿಷದಲ್ಲಿ ಹೇಳಿ ಎಲ್ಲರ ಆಶ್ಚರ್ಯ ಒಳಗಾದಳು.
ಇದಷ್ಟೇ ಅಲ್ಲದೆ ವೇದ ಉಪನಿಷತ್ತು, ರಾಮಾಯಣ, ಮಹಾಭಾರತ, ಶ್ಲೋಕಗಳು, ಜನಪದ ಗೀತೆ, ಭಾವಗೀತೆ, ಚಲನಚಿತ್ರ ಗೀತೆಗಳ ಹಾಡೋಕು ಈಕೆ ಸೈ.



### ಮಕ್ಕಳಿಂದ ವಸ್ತು ಪ್ರದರ್ಶನ



ವಸ್ತು ಪ್ರದರ್ಶನದಲ್ಲಿ ಜಿಲ್ಲೆಯ ಹೆಚ್.ಡಿ.ಕೋಟೆ ಸರ್ಕಾರಿ ಶಾಲಾ ಮಕ್ಕಳು ಶಿಕ್ಷಣದಲ್ಲಿ ಚಿತ್ರಕಲೆಯ ಉಪಯುಕ್ತತೆ, ಸರ್ಕಾರಿ ಶಾಲಾ ಮಕ್ಕಳಿಂದ ಭೌಗೋಳಿಕ ಮತ್ತು ಪ್ರಾಕೃತಿಕ ವೈಪರೀತ್ಯ ಕಾರಣಗಳು, ಪರಿಣಾಮಗಳು, ಪಿರಿಯಾಪಟ್ಟಣ ಶಾಲಾ ಮಕ್ಕಳಿಂದ ಕನ್ನಡದ ಶ್ರೇಷ್ಠ ಕವಿ ಪರಂಪರೆ, ತಿ.ನರಸೀಪುರದಿಂದ ಶಿಕ್ಷಣ ಇಲಾಖೆಯ ಪ್ರೋತ್ಸಾಹದಾಯಕ ಯೋಜನೆಗಳು, ಕೆ.ಆರ್.ನಗರದ ಶಾಲಾ ಮಕ್ಕಳಿಂದ ಕಲಿಕಾ ಚೇತರಿಕೆ ಕುರಿತು, ನಂಜನಗೂಡು ಶಾಲೆಯಿಂದ ಮೈಸೂರು ಜಿಲ್ಲೆಯ ಪ್ರವಾಸಿ ತಾಣಗಳ ಬಗ್ಗೆ, ಮೈಸೂರು ದಕ್ಷಿಣ, ಉತ್ತರ ಹಾಗೂ ಗ್ರಾಮಾಂತರ ವಲಯದ ಸರ್ಕಾರಿ ಶಾಲಾ ಮಕ್ಕಳಿಂದ ಯೋಗ, ಸ್ವಾಸ್ಥ್ಯ ಹಾಗೂ ಕರೋನಾ ಮುನ್ನೆಚ್ಚರಿಕೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳ ಕುರಿತು ವಸ್ತು ಪ್ರದರ್ಶ ಪ್ರದರ್ಶನ ಆಯೋಜಿಸಲಾಗಿತ್ತು.

–ದೀಕ್ಷಾ.ಎಮ್.ಭಟ

## ರಾಜ್ಯ ಮಟ್ಟದ ದಸರಾ ಯೋಗಾಸನದ ಸ್ಪರ್ಧೆ

ಮೈಸೂರು :ಸಪ್ಟೆಂಬರ್ 29ರಂದು ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಯೋಗಾ ದಸರಾ ಉಪಸಮಿತಿ ವತಿಯಿಂದ ಕರ್ನಾಟಕ ವಸ್ತು ಪ್ರದರ್ಶನ ಆವರಣದ ಪಿ .ಕಾಳಿಂಗರಾವ್ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆಯನ್ನು ದೀಪ ಬೆಳಗಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ .ಟಿ ಸೋಮಶೇಖರ್ ಹಾಗೂ ಪ್ರತಾಪ್ ಸಿಂಹ ರವರು ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆಯಲ್ಲಿ ನೂರಾರು ಯೋಗ ಪಟುಗಳು ಪಾಲ್ಗೊಂಡು ವಿವಿಧ ಆಸನಗಳನ್ನು ಪ್ರದರ್ಶಿಸಿದರು. ಯೋಗಾಸನ ಸ್ಪರ್ಧೆಯಲ್ಲಿ ಮೈಸೂರು ,ಬೆಂಗಳೂರು, ಮಂಡ್ಯ, ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಯೋಗ ಪಟುಗಳು ಕೆಲವು ಆಸನಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ ರವರು ಮಾತನಾಡಿ ನಾಡ ಹಬ್ಬ ದಸರಾದ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು ಬಹಳ ವಿಶೇಷ ಆಸಕ್ತಿ ಹೊಂದಿದ್ದು ,ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಸ್ಪರ್ಧೆಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಎಂದರು. ಎರಡು ವರ್ಷಗಳಿಂದ ಕೊರೋನಾ ಇದ್ದ ಕಾರಣದಿಂದ ಅದ್ದೂರಿ ದಸರಾ ಆಚರಣೆ ಮಾಡಲಾಗಿರಲಿಲ್ಲ.ಪ್ರಸಕ್ತ ಸಾಲಿನ ದಸರಾ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು



ಆಗಮನ ಹಾಗೂ ಯುವ ದಸರದಲ್ಲಿ ಅಪ್ಪುನಮನ ಕಾರ್ಯಕ್ರಮ ಆಚ-'ರಣೆಯ ಇದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಆಗಮಿಸಿದ್ದರಿಂದ ಯೋಗ ನಗರಿ ಮೈಸೂರಿನ ಕೀರ್ತಿ ಇನ್ನಷ್ಟು ಹೆಚ್ಚಾಯಿತು. ಮುಂದಿನ ದಿನಗಳಲ್ಲಿ ಯೋಗಕ್ಕೆ ಮೈಸೂರಿನಲ್ಲಿ ಮತ್ತಷ್ಟು ಹೊತ್ತು ನೀಡುವ ಮೂಲಕ ಯೋಗವನ್ನು ಗಟ್ಟಿಗೊಳಿಸುವ ಕಾರ್ಯ ಬೇಕಾಗಿದೆ. ದಸರಾ ಯೋಗಾಸನ ಸ್ಪರ್ಧೆಯ 11 ವಿಭಾಗಗಳಲ್ಲಿ ಯೋಗಾಸನ ಸ್ಪರ್ಧೆ ಜರುಗಿತು. 12 ವರ್ಷ ಮೇಲ್ಪಟ್ಟವ-ರಿಂದ 65 ವರ್ಷ ವರೆಗಿನ ರವ-ರಿಗೆ ಸ್ಪರ್ಧೆ ನಡೆಸಲಾಯಿತು. ಇದರೊಂದಿಗೆ ವಿಶೇಷ ಚೇತನರಿಗೂ ಪ್ರತ್ಯಕ್ಷ ಸ್ಪರ್ಧೆ ಆಯೋಜಿಸಲಾಗಿ-ತ್ತು.ಬಾಲಕ- ಬಾಲಕಿ, ಪುರುಷ -ಮಹಿಳೆಯರಿಗೆ ಸ್ಪರ್ಧೆ ನಡೆಸಲಾಯಿತು. ಈ ಸ್ಪರ್ಧೆಯಲ್ಲಿ ಕಡ್ಡಾಯವಾಗಿ ವೃಕ್ಷಾಸನ, ಚಕ್ರಾಸನ, ವೀರಭದ್ರಾಸನ, ಹಲಾಸನ, ಉಷ್ಟ್ರಾಸನ, ಧನುರಾಸನ ಇನ್ನು ಕೆಲವು ಆಸನಗಳನ್ನು ಕಡ್ಡಾಯವಾಗಿ ಮಾಡಲು ನಿರ್ಬಂಧ ಮಾಡಲಾಗಿ-ತ್ತು.

ಈ ಸಂದರ್ಭ ದಸರಾ ಯೋಗಾ ಉಪಸಮಿತಿ ಅಧ್ಯಕ್ಷರಾದ ಬಾಲಕೃಷ್ಣ, ಜಂಗಲ್ ರೆಸಾರ್ಟ್ ಮಾಜಿ ಅಧ್ಯಕ್ಷ ಅಪ್ಪಣ್ಣ, ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸ, ಯೋಗದಸರಾ ಉಪವಿಶೇಷಾಧಿಕಾರಿ ಸೀಮಂತಿನಿ, ಯೋಗಾ ಫೌಂಡೇಶನ್ ಕಾರ್ಯದರ್ಶಿ ಶಶಿಕುಮಾರ್ ಇತರರು ಉಪಸ್ಥಿತರಿದ್ದರು.

–ತೇಜ .ಎಸ್

## ರಂಗೇರಿದ ಫಲಾಪುಷ್ಪ ಪ್ರದರ್ಶನ,ಇಲ್ಲಿ 'ಅಪ್ಪು' ಹೂವುಗಳಲ್ಲಿ ಜೀವಂತ!

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಆಕರ್ಷಣೀಯ ಕೇಂದ್ರಬಿಂದುಗಳಲ್ಲಿ ಒಂದಾದ ಫಲಪುಷ್ಪ ಪ್ರದರ್ಶನ ಆರಂಭವಾಗಿದೆ . 2022–23ನೇ ಸಾಲಿನ ದಸರಾ ಫಲಪುಷ್ಪ ಪ್ರದರ್ಶನವನ್ನು ನಿಶಾದ್ ಭಾಗ್ ಕುಪ್ಪಣ್ಣ ಪಾರ್ಕ್ ನಲ್ಲಿ ಆಯೋಜನೆ ಮಾಡಲಾಗಿದೆ . ಸೋಮವಾರ ಸಚಿವ ಎಸ್ಟಿ ಸೋಮಶೇಖರ್ ಫ್ಲವರ್ ಶೋ ಉದ್ಘಾಟನೆ ಮಾಡಿದ್ರು. ಸೆ..26ರಿಂದ ಅ.5ರವರೆಗೆ ಫ್ಲವರ್ ಷೋ ಆಯೋಜನೆಗೊಂಡಿದೆ.

ಇಷ್ಟೇ ಅಲ್ಲದೆ, ದಿವಂಗತ ನಟ ಪುನೀತ್ ರಾಜ್ ಕುಮಾರ್ ಸ್ಮರಣಾರ್ಥವಾಗಿ ಅವರ ಸಾಧನೆಯ ವಿವರದೊಂದಿಗೆ ಪುತ್ಥಳಿಗಳನ್ನು ಸ್ಥಾಪಿಸಿ ಹೂವಿನೊಂದಿಗೆ ಅಲಂಕ-ರಿಸಲಾಗಿದೆ. ಪುನೀತ್ ಅವರನ್ನು ಹೂವಿನ ಅಲಂಕಾರದಲ್ಲಿ ನೋಡೋದೇ ಜನರಿಗೆ ಹಬ್ಬವಾಗಿದೆ. ಅಪ್ಪು ನಿಧನರಾದ್ರೂ ಅವರ ನೆನಪು ಇನ್ನೂ ಮಾಸಿಲ್ಲ. ಹೀಗಾಗಿ ಫ್ಲವರ್ ಷೋನಲ್ಲಿ ಮತ್ತೊಮ್ಮೆ ಅಪ್ಪು ಸ್ಮರಣೆ ಮಾಡಲಾಗಿದೆ. ಹಾಗೆಯೇ ಮೈಸೂರು ರಾಜರು ತಮ್ಮ ಆಳ್ವಿಕೆಯ ಸಮಯದಲ್ಲಿ ಜನರು ವಿಶ್ರಾಂತಿ ಪಡೆಯಲು 'ಥಂಡೀ ಸಡಕ್' ನ್ನು ನಿರ್ಮಿಸುತ್ತಿದ್ದರು. ಅದರ ಪ್ರತಿ-ರೂಪವನ್ನು ಗಾಜಿನ ಮನೆಯ ಮುಂದೆ ನಿರ್ಮಿಸಲಾಗಿದ್ದು, ಇದು



ಜನರ ಕಣ್ಮನ ಸೆಳೆಯಲಿದೆ.

ಪ್ರವೇಶ ಶುಲ್ಕ ವಯಸ್ಕರಿಗೆ ರೂ. 30; ಮಕ್ಕಳು ರೂ. 20. ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನವನ್ನು ಐದು ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸುವ ನಿರೀಕ್ಷೆಯಿದೆ. ಪ್ರವಾಸೋದ್ಯಮಕ್ಕೆ ಮಹತ್ವದ ಉತ್ತೇಜನ ನೀಡಲು ಈ ಪ್ರದರ್ಶನವನ್ನು ನಿಗದಿಪಡಿಸಲಾಗಿದೆ.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಖಖಇ), ದಸರಾ ಫಲಪುಷ್ಪ ಪ್ರದರ್ಶನ ಸ್ಪರ್ಧೆಯಲ್ಲಿ ಹೂವಿನ ಉದ್ಯಾನ ಮತ್ತು ಗುಲಾಬಿ ಉದ್ಯಾನಕ್ಕೆ ಎರಡು ಪ್ರಥಮ ಬಹುಮಾನಗಳನ್ನು ಪಡೆದುಕೊಂಡಿದೆ. ಕರ್ಜನ್ ಪಾರ್ಕ್‌ನ ಜಿಲ್ಲಾ ತೋಟಗಾ-ರಿಕಾ ಸಂಘದ ನಿರ್ದೇಶಕಿ ಶಶಿಕಲಾ ನಾಗರಾಜ್ ಅವರಿಂದ ಆರ್‌ಐಇ ಕೃಷಿ ಅಧೀಕ್ಷಕ ಗುಲಾಬ್ ಸಿಂಗ್ ಬಹುಮಾನ ಸ್ವೀಕರಿಸುತ್ತಿರುವ ಚಿತ್ರ. ದಸರಾ ಫಲಪುಷ್ಪ ಪ್ರದರ್ಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಈ ವರ್ಷ ಶ್ರೀ ಜಯಚಾಮರಾಜ ಒಡೆಯರ್ ಅವರ ಜನ್ಮ ಶತಮಾನೋತ್ಸವ, ದಸರಾ ಫಲಪುಷ್ಪ ಪ್ರದರ್ಶನ ಉಪ ಸಮಿತಿಯು ಸುಮಾರು 6 ಲಕ್ಷ ಗುಲಾಬಿಗಳನ್ನು ಬಳಸಿ ಜಯಚಾಮರಾಜ ಒಡೆಯರ್ ವೃತ್ತದ (ಹಾರ್ಡಿಂಜ್ ಸರ್ಕಲ್) ಪ್ರತಿಕೃತಿಯನ್ನು ಪ್ರಮುಖ ಆಕರ್ಷಣೆಯಾಗಿ ರಚಿಸಿದೆ.

ಫಲಪುಷ್ಪ ಪ್ರದರ್ಶನದಲ್ಲಿ ವರ್ಣರಂಜಿತ ಮತ್ತು ಅಲಂಕಾ-ರಿಕ ಹೂವುಗಳು, ವಿದೇಶಿ ಜಾತಿಯ ಸಸ್ಯಗಳು. ಅವುಗಳ ಮಧ್ಯೆ ಕಮಲದ ದೇವಾಲಯ, ಅರಮನೆಯ ಪ್ರವೇಶ ದ್ವಾರ, ಅಮರ್ ಜವಾನ್, ಅಶೋಕ ಸ್ತಂಭ, ಫಿರಂಗಿಗಳು, ಡಾಲ್ಫಿನ್‌ಗಳು, ಪೆಂಗ್ವಿನ್‌ಗಳು, ನೃತ್ಯ ಗೊಂಬೆಗಳು ಎಲ್ಲವು ಪ್ರವಾಸಿಗರ ಮನಸ್ಸನ್ನು ಸೆಳೆಯುತಿದೆ.

–ರಂಜಿತ ರೇವಣ್ಣ

## ಜಂಬೂಸವರಿಯ ಸುಂದರ ಕ್ಷಣ...



ನಗರದಲ್ಲಿ ಬುಧವಾರ ನಡೆದ ನಾಡ ಹಬ್ಬ ಮೈಸೂರು ದಸರಾದ ಕೊನೆಯ ಹಂತದ ಜಂಬೂ ಸವಾರಿಗೆ ಸುಮಾರು ಐದರಿಂದ ಏಳು ಲಕ್ಷ ಜನರು ಸಾಕ್ಷಿಯಾದರು.

ಮೈಸೂರು ಅರಮನೆಯಿಂದ ಮೆರವಣಿಗೆಯ ಪರಾಕಾಷ್ಠೆಯಾದ ಬನ್ನಿಮಂಟಪದವರೆಗೆ ಐದು ಕಿಲೋಮೀಟರ್ ಉದ್ದದ ಮೆರವಣಿಗೆ ಮಾರ್ಗವನ್ನು ರೂಪಿಸುವ ರಾಜಮಾರ್ಗದಲ್ಲಿ 750 ಕೆಜಿ ತೂಕದ ಗೋಲ್ಡನ್ ಅಂಬಾರಿಯನ್ನು ಸುಲಭವಾಗಿ ಹೊತ್ತೊಯ್ಯುವ ಆನೆ ಅಭಿಮನ್ಯುವನ್ನು ನೋಡುವುದು ಒಂದು ದೃಶ್ಯ ಮನೋಹರವಾಗಿದೆ.

ಇದಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೇಯರ್ ಶಿವಕುಮಾರ್, ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮತ್ತು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರು ಸುವರ್ಣ ಸೌಧದಲ್ಲಿರುವ ಚಾಮುಂಡೇಶ್ವರಿ ದೇವಿಯ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿದರು. ಶುಭ ಮೀನ ಲಗ್ನ.

ಕೋವಿಡ್ -19 ಸಾಂಕ್ರಾಮಿಕ ರೋಗದಿಂದಾಗಿ ಕಳೆದ ಎರಡು ವರ್ಷಗಳಲ್ಲಿ ಇದು ಕಡಿಮೆ ಪ್ರಮುಖ ವ್ಯವಹಾರವಾಗಿರುವುದ-ರಿಂದ ಈ ವರ್ಷ ದಸರಾ ಮಹತ್ವವನ್ನು ಪಡೆದುಕೊಂಡಿದೆ. ಎರಡು ವರ್ಷಗಳ ಅಂತರದ ನಂತರ, ವಾರ್ಷಿಕ ಈವೆಂಟ್‌ಗೆ ಸಂಬಂಧಿಸಿದ ವೈಭವವು ಪ್ರಪಂಚದಾದ್ಯಂತದ ಜನರನ್ನು ಆಕರ್ಷಿಸುತ್ತಿದೆ.

-ರಂಜಿತ ರೇವಣ್ಣ



-ರಂಜಿತ ರೇವಣ್ಣ

## ಮೈಸೂರು ದಸರಾಕ್ಕೆ ಮೆರುಗು ತರಲಿದೆ ವಸ್ತುಪ್ರದರ್ಶನ

ಮೈಸೂರು ದಸರಾದಲ್ಲಿ ನಡೆಯುವ ಕಾರ್ಯಕ್ರಮ ಮತ್ತು ಸಂಭ್ರಮ ಸೀಮಿತ ಅವಧಿಯದ್ದಾಗಿರುತ್ತದೆ. ಆದರೆ ದಸರಾ ಮುಗಿದರೂ ಸಂಭ್ರಮವನ್ನು ಒಂದಷ್ಟು ಹಿಡಿದಿಡುವುದು ದಸರಾ ವಸ್ತುಪ್ರದರ್ಶನ ಎಂದರೆ ತಪ್ಪಾಗಲಾರದು.

ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ತನ್ನದೇ ಆದ ಹಿನ್ನಲೆಯಿದ್ದು, ವರ್ಷದಿಂದ ವರ್ಷಕ್ಕೆ ಅದನ್ನು ಇನ್ನಷ್ಟು



ಪ್ರೇಕ್ಷಕರ ಮನ ಸೆಳೆದಿತು ವಸ್ತು ಪ್ರದರ್ಶನ

ಅಭಿವೃದ್ಧಿಪಡಿಸುವ ಕೆಲಸವೂ ನಡೆಯುತ್ತಿದೆ. ದಸರಾ ಕಳೆದ ನಂತರವೂ ಜನ ದಸರಾ ವಸ್ತು ಪ್ರದರ್ಶನಕ್ಕೆ ಬಂದು ಒಂದಷ್ಟು ಹೊತ್ತು ಅಡ್ಡಾಡಿ ತಮಗೆ ಬೇಕಾಗಿದ್ದನ್ನು ಖರೀದಿಸಿ, ಇಷ್ಟಪಟ್ಟ ತಿನಿಸನ್ನು ಸವಿದು, ಆಟವಾಡಿ ಸಂತೋಷದಿಂದ ಮನೆಯ ಹಾದಿ ಹಿಡಿಯುತ್ತಾರೆ.

ಕಳೆದ ಎರಡು ವರ್ಷಗಳ ಕಾಲ ಕೊರೊನಾ ಕಾರಣದಿಂದ ವಸ್ತುಪ್ರದರ್ಶನ ನಡೆದಿರಲಿಲ್ಲ. ಈ ಬಾರಿ ಅದ್ದೂರಿ ದಸರಾ ಆಚರಣೆ ವೇಳೆ ವಸ್ತು ಪ್ರದರ್ಶನಕ್ಕೂ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಜನ-ರಿಗೆ ಅನುಕೂಲವಾಗುವಂತೆ ಸುಮಾರು 15 ದಿನಗಳ ಮುಂಚಿತವಾಗಿಯೇ ಅಂ-ದರೆ ದಸರಾ ಉದ್ಘಾಟನೆ ದಿನದಂದೇ ಸೆ.26ರಂದು ವಸ್ತುಪ್ರದರ್ಶನದ ಉದ್ಘಾಟನೆ ನಡೆಯಲಿದೆ. ಸೆ.26ರಿಂದ ಆರಂಭವಾಗಲಿರುವ ವಸ್ತುಪ್ರದರ್ಶನ ಡಿಸೆಂಬರ್ 12ರವರೆಗೆ ಸುಮಾರು 90 ದಿನಗಳ ಕಾಲ ನಡೆಯಲಿದೆ.

ಈ ಬಾರಿ ಎಂದಿನಂತೆ ವಸ್ತುಗಳ ಮಾರಾಟ ಹಾಗೂ ವಿವಿಧ ಇಲಾಖೆಗಳ 48 ಮಳಿಗೆಗಳು ಇರಲಿದ್ದು, ಸೆಪ್ಟೆಂಬರ್ 20ಕ್ಕೆ ಎಲ್ಲಾ ಸಿದ್ಧತೆಗಳನ್ನೂ ಪೂರ್ಣಗೊಳಿಸುವ ಸಲುವಾಗಿ ಕೆಲಸ ಕಾರ್ಯಗಳು ಭರದಿಂದ ಸಾಗುತ್ತಿವೆ. ಕೊರೊನಾ ಕಾರಣದಿಂದಾಗಿ ಜನ ಮೈಸೂರು ವಸ್ತುಪ್ರದರ್ಶನದ ಸಂಭ್ರಮವನ್ನು ಮರೆತಿದ್ದರು. ಹೀಗಾಗಿ ಎರಡು ವರ್ಷಗಳ ಬಳಿಕ ನಡೆಯುತ್ತಿರುವ ವಸ್ತುಪ್ರದರ್ಶನವನ್ನು ವಿಭಿನ್ನ ಹಾಗೂ ವಿಶಿಷ್ಟವಾಗಿಸಲು ಸರ್ವ ರೀತಿಯ ತಯಾರಿಗಳನ್ನು ಮಾಡಿಕೊಳ್ಳಲಾಗಿದೆ. ಈ ಬಾರಿ ಸ್ಯಾಂಡ್ ಮ್ಯೂಸಿಯಂ, ತ್ರಿಡಿ ಮ್ಯಾಪಿಂಗ್ ಆಕರ್ಷಣೆಯಾಗಿದ್ದು, ಪುನೀತ್ ರಾಜ್‌ಕುಮಾರ್, ಆಜಾದಿ ಕಾ ಅಮೃತ ಮಹೋತ್ಸವದ ಥೀಮ್, ಪ್ರಧಾನಿ ನರೇಂದ್ರ ಮೋದಿ, ವೀರ ಸಾವರ್ಕರ್ ಸೇರಿದಂತೆ ಏಳು ಕಲಾಕೃತಿಗಳು ಸ್ಯಾಂಡ್ ಮ್ಯೂಸಿಯಂಗೆ ಮೆರುಗು ತರಲಿವೆ. ಇದರ ಜತೆಗೆ ಬಹುಮಾಧ್ಯಮ ಕಲಾ ಗ್ಯಾಲರಿಯೂ ಇರಲಿದೆ.

ಇನ್ನು ವಸ್ತು ಪ್ರದರ್ಶನ ಕು-ರಿತಂತೆ ಹೆಚ್ಚಿನ ಮಾಹಿತಿ ನೀಡಿರುವ ಅವರು, ಸುಮಾರು ತೊಂಬತ್ತು ದಿನಗಳ ಕಾಲ ನಡೆಯುವ ವಸ್ತುಪ್ರದರ್ಶನ ಜನಪರವಾಗಿರಲಿದೆ. ಹಿಂದೆಂದಿಗಿಂತಲೂ ವಿಭಿನ್ನ ಕಾರ್ಯಕ್ರಮಗಳನ್ನು ಈ ಬಾರಿ ಆಯೋಜಿಸಲಾಗಿದೆ. ಸಾರ್ವಜನಿಕ-ರಿಗೆ ವಸ್ತುಪ್ರದರ್ಶನದಲ್ಲಿನ ಮಳಿಗೆಗಳ ಮಾಹಿತಿ ನೀಡುವ ಸಲುವಾಗಿ ಡಿಜಿಟಲ್ ಆಪ್ ಸೌಲಭ್ಯ ಕಲ್ಪಿಸಲಾಗಿದೆ. ಟಿಕೆಟ್ ಕೌಂಟರ್ ಬಳಿ ಆಪ್ ಡೌನ್‌ಲೋಡ್ ಮಾಡಿಕೊಂಡು ವಸ್ತುಪ್ರದರ್ಶನದ ಸಂಪೂರ್ಣ ನಕ್ಷೆ ಹಾಗೂ ಮಾಹಿತಿಯನ್ನು ಸಾರ್ವಜನಿಕ-ರಿಗೆ ತಿಳಿಸಲು ಕ್ರಮ ವಹಿಸಲಾಗುತ್ತದೆ. ವಯಸ್ಕರಿಗೆ 30, ಮಕ್ಕಳಿಗೆ 20 ರೂ ಪ್ರವೇಶದರ ನಿಗದಿಪಡಿಸಲಾಗಿದೆ.ಅರಣ್ಯ ಇಲಾಖೆ ಹಾಗೂ ಕೃಷಿ ಇಲಾಖೆ ವತಿಯಿಂದ ಸಸಿಗಳು ಹಾಗೂ ಕೃಷಿ ಪರಿಕರಗಳನ್ನು ವಸ್ತುಪ್ರದರ್ಶನ ಪ್ರಾಧಿಕಾರದ ಮಳಿಗೆಗಳಲ್ಲಿ ಸಬ್ಸಿಡಿ ದರದಲ್ಲಿ ವಿತರಿಸಲಾಗುತ್ತದೆ. ವಸ್ತುಪ್ರದರ್ಶನಕ್ಕೆ ಭೇಟಿ ನೀಡುವ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಪ್ರಾಧಿಕಾರದ ವತಿಯಿಂದ ವ್ಯವಸ್ಥಿತವಾಗಿ ವಿತರಿಸಲು ಆರ್‌ಒ ಪ್ಲಾಂಟ್ ನಿರ್ಮಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ. ವಸ್ತುಪ್ರದರ್ಶನ ಆವರಣದ ಸ್ವಚ್ಛತೆ ಕಾಪಾಡಲು ಕ್ರಮ ವಹಿಸಲಾಗಿದ್ದು, ಪ್ಲಾಸ್ಟಿಕ್ ಮುಕ್ತ ವಲಯ ಎಂದು ಘೋಷಿಸಲಾಗಿದೆ. ಮಾಹಿತಿ ಕೇಂದ್ರ, ಪೊಲೀಸ್ ಉಪಠಾಣೆ, ಅಗ್ನಿಶಾಮಕ ವಾಹನ ಹಾಗೂ ಪ್ರಥಮ ಚಿಕಿತ್ಸಾ ಘಟಕ ತೆರೆಯುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆದಿದ್ದೇವೆ ಎಂದು ತಿಳಿಸಿದ್ದಾರೆ.

-ರಾಕೇಶ್ ಡಿ ಎಮ್

## ದಸರಾ ಎಕ್ಸ್‌ಪೋದಲ್ಲಿ ಟ್ರಾಫಿಕ್ ಪೊಲೀಸ್ ಸ್ಟಾಲ್ ತೆರೆಯಲಾಗಿದೆ



ಮೈಸೂರು: ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಿರ್ಮಿಸಿರುವ 'ಮೈಸೂರು ನಗರ ಸಂಚಾರ ಪೊಲೀಸ್' ಮಳಿಗೆಯನ್ನು ನಗರ ಪೊಲೀಸ್ ಆಯುಕ್ತ ಕೆ.ಟಿ.ಬಾಲಕೃಷ್ಣ ಶುಕ್ರವಾರ ಉದ್ಘಾಟಿಸಿದರು.

ಬಾಲಕೃಷ್ಣ ಮಾತನಾಡಿ, ವಾಹನ ಸವಾರರಿಗೆ ರಸ್ತೆ ಸುರಕ್ಷತೆ ಹಾಗೂ ಸಂಚಾರ ನಿಯಮಗಳ ಬಗ್ಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಸ್ಟಾಲ್ ಆರಂಭಿಸಲಾಗಿದೆ ಎಂದರು.ಸಂಚಾರ ನಿಯಮ ಮತ್ತು ನಿಯಮಗಳ ಬಗ್ಗೆ ಸಾರ್ವಜನಿಕರು ಜಾಗೃತರಾಗಿರಬೇಕು ಎಂದು ಒತ್ತಿ ಹೇಳಿದ ಅವರು, ದಿನದಿಂದ ದಿನಕ್ಕೆ ಹೆಚ್ಚು ವಾಹನಗಳು ರಸ್ತೆಗೆ ಪ್ರವೇಶಿಸುವ ಸಮಯದಲ್ಲಿ ಸಂಚಾರ ನಿಯಮಗಳನ್ನು ಪಾಲಿಸುವ ಮಹತ್ವವನ್ನು ಒತ್ತಿ ಹೇಳಿದರು.

ಈ ಸಂದರ್ಭದಲ್ಲಿ ವಿವಿಧ ಸಂಚಾರಿ ನಿಯಮಗಳ ಉಲ್ಲಂಘನೆಗಾಗಿ ಪರಿಷ್ಕೃತ ದಂಡದ ಪಟ್ಟಿಯನ್ನು ಒಳಗೊಂಡ ಕರಪತ್ರವನ್ನು ಆಯುಕ್ತರು ಬಿಡುಗಡೆ ಮಾಡಿದರು. ಡಿಸಿಪಿ (ಅಪರಾಧ ಮತ್ತು ಸಂಚಾರ) ಬಿಟಿ ಕವಿತಾ, ಎಸಿಪಿ (ಸಂಚಾರ) ಜಿಎನ್ ಮೋಹನ್ ಮತ್ತು ಇತರ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು. ಪ್ರತಿ-ಕೃತಿಗಳು: ಸ್ಟಾಲ್‌ನಲ್ಲಿ ಇಬ್ಬರು ಟ್ರಾಫಿಕ್ ಪೊಲೀಸ್ ಮತ್ತು ಟ್ರಾಫಿಕ್ ಉಲ್ಲಂಘಿ-ಸುವವರ ಪ್ರತಿಕೃತಿಗಳನ್ನು ಸಹ ಒಳಗೊಂಡಿದೆ.ಒಬ್ಬ ಪೊಲೀಸ್ ದ್ವಿಚಕ್ರ ವಾಹನ ಸವಾರ ಹೆಲ್ಮೆಟ್‌ಗೆ ಹೂವನ್ನು ಅರ್ಪಿಸುತ್ತಿರುವುದು ಕಂಡುಬಂದರೆ, ಮತ್ತೊಬ್ಬ ಪೊಲೀಸ್ ದಂಡವನ್ನು ಪಾವತಿಸಲು ಕೈಯಲ್ಲಿ ರೂ.2,000 ನೋಟು ಹಿಡಿದುಕೊಂಡು ಹೆಲ್ಮೆಟ್ ರಹಿತ ಸವಾರನಿಗೆ ಚಾಲೆಂಜ್ ಮಾಡುತ್ತಿರುವುದು ಕಂಡುಬಂದಿದೆ.

ಟ್ರಾಫಿಕ್ ಉಪಕರಣಗಳು: ನಾಲ್ಕು ಮತ್ತು ದ್ವಿಚಕ್ರದ ಚಕ್ರ-ಲಾಕರ್‌ಗಳು, ಪುನರ್ಭರ್ತಿ ಮಾಡಬಹುದಾದ ಟ್ರಾಫಿಕ್ ಬ್ಯಾಟನ್, ಎಲ್‌ಇಡಿ ಲೈಟ್, ಡಿಜಿಟಲ್ ಕ್ಯಾಮೆರಾ, ಬ್ಯಾರಿಕೇಡಿಂಗ್ ಟೇಪ್‌ಗಳು, ಟ್ರೀ ರಿಫ್ಲೆಕ್ಟರ್‌ಗಳು, ಭುಜದ ಬ್ಯಾಡ್ಜ್, ಟ್ರಾಫಿಕ್ ಕೈಗವಸುಗಳು ಮತ್ತು ಜಾಕೆಟ್‌ಗಳನ್ನು ಒಳಗೊಂಡಂತೆ ವಿವಿಧ ಸಂಚಾರ ಸಾಧನಗಳು ಮತ್ತು ಸಾಧನಗಳು ಪ್ರದರ್ಶನದಲ್ಲಿವೆ.

-ಪವಿತ್ರ ವಿ

## ದಸರಾ 2022ರ ಫೋಟೋ ಗ್ಯಾಲರಿ



ಚಿತ್ರ ಕೃಪೆ-ಪ್ರೀತಿಕ ಕಾಂಚನ್



ಚಿತ್ರ ಕೃಪೆ-ತ್ರಿಷಾ